
ಲಂಕೇಶ್


ಸೆಪ್ಟೆಂಬರ್ 30, 2009 ರೂ. 12/-



ಹೊಳೆಗೆ ಹೊಸನೀರು
ಮಂಜುನಾಥ್ ಲತಾ



ರೋಪಗಳ ಸುತ್ತ
್ಯಾಯಮೂರ್ತಿ
ಿನಕರನ್



ಕಲ್ಲಿದ್ದಲು ಕಳ್ಳ



ಹವ್ಯಕರನ್ನು ಬೆದರಿಸಲು ಪುಂಡರ ಸೇನೆ




ಅಪಘಾತದ ಭೀಕರ
ದೃಶ್ಯಗಳು ಒಳಗಿವೆ!



ಧಾರವಾಡ: ಮಠ ಬಿಟ್ಟ
ಮಂಚದ ಸ್ವಾಮಿ

ನಾರ್ಮನ್ ಬೋರ್ಲಾಗ್

ಹಸಿರು ಕ್ರಾಂತಿಯ ಹರಿಕಾರ-ಬಡ ರೈತಾಪಿಯ ಕೊಲೆಗಾರ!



ಇಪ್ಪತ್ತನೇ ಶತಮಾನದಲ್ಲಿ ಜಗತ್ತಿನ ಗ್ರಾಮೀಣ ಪ್ರದೇಶದ ಚಿತ್ರಣವನ್ನೇ ಬದಲಾಯಿಸಿದ ನಾರ್ಮನ್ ಬೋರ್ಲಾಗ್ ಎಂಬ ಕೃಷಿ ವಿಜ್ಞಾನಿ ಮೊನ್ನೆ ಸೆಪ್ಟೆಂಬರ್ 13ರಂದು ತನ್ನ 95ನೇ ವಯಸ್ಸಿನಲ್ಲಿ ಮೃತರಾದರು. ನಾರ್ಮನ್ ಬೋರ್ಲಾಗ್ ಯಾರು ಎಂದು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. 'ಹಸಿರು ಕ್ರಾಂತಿ'ಯ ಹರಿಕಾರ ಎಂದು ಬಣ್ಣಿಸಲಾಗುವ ಈ ವಿಜ್ಞಾನಿ ಯಾರ ಸ್ನೇಹಿತ ಎಂಬ ಪ್ರಶ್ನೆಗೆ ಸರಿಯಾದ ಉತ್ತರ ಪಡೆಯಬೇಕೆಂದರೆ ನಮ್ಮ ದೇಶದ ಅಭಿವೃದ್ಧಿ ಮಾದರಿಯ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ ಮತ್ತು ನಿಲುವುಗಳು ಬೇಕಾಗುತ್ತವೆ. ಏಕೆಂದರೆ ನಮ್ಮ ದೇಶದ ರೈತಾಪಿ ಇಂದು ತಲುಪಿರುವ ಸ್ಥಿತಿಗೆ ಈ ಮಹಾಶಯರು ಪರಿಚಯಿಸಿದ ಹಸಿರುಕ್ರಾಂತಿ ಮತ್ತು ಕೃಷಿ ಪದ್ಧತಿಯೇ ಕಾರಣ. ಹೀಗಾಗಿ ನಾರ್ಮನ್ ಬೋರ್ಲಾಗ್ ಭಾರತದ ರೈತಾಪಿಯ ಸ್ನೇಹಿತನೊ ಅಥವಾ ಶತ್ರುವೋ ಎಂಬ ತೀರ್ಮಾನವು ಭಾರತದ ರೈತಾಪಿಯ ಪರಿಸ್ಥಿತಿ ಮತ್ತು ಭಾರತದ ಆಹಾರ ಭದ್ರತೆಯ ಪರಿಸ್ಥಿತಿ ಹೇಗಿದೆ ಎಂಬುದರ ಬಗ್ಗೆ ನಮ್ಮ ನಮ್ಮ ಅಭಿಪ್ರಾಯಗಳನ್ನೇ ಆಧರಿಸಿರುತ್ತದೆ.

ಭಾರತ ಸರ್ಕಾರದ ಪ್ರಕಾರ ಭಾರತದ ಆಹಾರ ಭದ್ರತೆ ಮೊದಲಿಗಿಂತ ಉತ್ತಮಗೊಂಡಿದೆ. ಭಾರತದ ರೈತಾಪಿ ಮೊದಲಿಗ್ಗಿಂತ ಹೆಚ್ಚು ಸುಖವಾಗಿದ್ದಾರೆ. ಆದ್ದರಿಂದಲೇ ಭಾರತದ ಬಡವರ ಸಂಖ್ಯೆ ಹಸಿರು ಕ್ರಾಂತಿ ಪರಿಚಯಿಸುವ ಮೊದಲು ಇದ್ದ ಶೇ.50ರಿಂದ ಈಗ ಶೇ.27ಕ್ಕೆ ಇಳಿದಿದೆ. ಗ್ರಾಮೀಣ ರೈತಾಪಿಯ ಕೊಳ್ಳುವ ಶಕ್ತಿ ಹೆಚ್ಚಿದೆ, ಇತ್ಯಾದಿ, ಇತ್ಯಾದಿ. ಇದಕ್ಕೆಲ್ಲಾ ಭಾರತದ ಕೃಷಿ ಪದ್ಧತಿಯಲ್ಲಿ ಸರ್ಕಾರ ನಾರ್ಮನ್ ಬೋರ್ಲಾಗ್ ಕಂಡುಹಿಡಿದ ಹೆಚ್ಚು ಇಳುವರಿ ಕೊಡುವ HYV ಬೀಜಗಳನ್ನು, ಅದಕ್ಕೆ ತಕ್ಕಂತೆ ರಸಗೊಬ್ಬರ, ಕ್ರಿಮಿನಾಶಕ ಮತ್ತು ಕೀಟನಾಶಕಗಳನ್ನು ಬಳಸುತ್ತಾ ಮೊದಲಿಗಿಂತ ಹತ್ತಾರುಪಟ್ಟು ಹೆಚ್ಚು ಇಳುವರಿಯನ್ನು ಹೆಚ್ಚಿಸಿಕೊಂಡಿದ್ದೇ ಕಾರಣ ಎಂಬ ವಾದವನ್ನು ಮಂಡಿಸಲಾಗುತ್ತದೆ. ಈ ವಾದವನ್ನು ಕೇವಲ ಭಾರತ ಸರ್ಕಾರ ಮಾತ್ರವಲ್ಲ, ಏಷಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದ ಎಲ್ಲಾ ಬಡ ದೇಶಗಳ ಸರ್ಕಾರಗಳು ಮಂಡಿಸುತ್ತವೆ. ಈ ವಾದದ ಒಟ್ಟು ಸಾರಾಂಶವೇನೆಂದರೆ ಆಹಾರ ಉತ್ಪಾದನೆಯ ಕುಸಿತದಿಂದ ಆಹಾರಕ್ಕೂ ಅಮೆರಿಕ ಮತ್ತಿತರ ದೇಶಗಳ ಸರ್ಕಾರವನ್ನೇ ಅವಲಂಬಿಸುವಂತಹ ದೈನೇಸಿ ಪರಿಸ್ಥಿತಿಯಲ್ಲಿದ್ದ ದೇಶಗಳನ್ನು ಆಹಾರ ಸ್ವಾವಲಂಬ ಮಾಡಿದ್ದೇ ನಾರ್ಮನ್ ಬೋರ್ಲಾಗ್‌ನ ಹಸಿರುಕ್ರಾಂತಿ. ಅದಕ್ಕೆ ಪೂರಕವಾಗಿ ಅವರು 1965ರಲ್ಲಿ ಭಾರತ ಎದುರಿಸುತ್ತಿದ್ದ ಆಹಾರ ಬಿಕ್ಕಟ್ಟನ್ನು ಮತ್ತು 1950ರಲ್ಲಿ ಮೆಕ್ಸಿಕೋ ಎದುರಿಸುತ್ತಿದ್ದ ಆಹಾರ ಬಿಕ್ಕಟ್ಟನ್ನು ಉದಾಹರಿಸಿ ಹಸಿರು ಕ್ರಾಂತಿಯ ನಂತರ ಭಾರತ ಮತ್ತು ಮೆಕ್ಸಿಕೋದಂತ ದೇಶಗಳು ಹೇಗೆ ಕೆಲವೇ ವರ್ಷಗಳಲ್ಲಿ ಆಹಾರ ಸ್ವಾವಲಂಬಯಾಗಿದ್ದು ಮಾತ್ರವಲ್ಲದೇ ಹೆಚ್ಚುವರಿ ಉತ್ಪಾದನೆ ಮಾಡಿ ವಿದೇಶಕ್ಕೂ ರಫ್ತು ಮಾಡುವಂತಾಯಿತು ಎಂದು ಅಂಕಿಅಂಶಗಳನ್ನು ಮಂಡಿಸುತ್ತಾರೆ.

ಈ ವಾದವು ಸುಳ್ಳಲ್ಲ, ಹಾಗೆಯೇ ಸತ್ಯವೂ ಅಲ್ಲ! ಭಾರತದ ಗೋಡೋನುಗಳಲ್ಲಿ ಅಪಾರ ಆಹಾರ ಧಾನ್ಯ ಸಂಗ್ರಹಣೆ ಇರುವುದು ನಿಜ. ಈ ಪ್ರಮಾಣದ ಆಹಾರ ಉತ್ಪಾದನೆ ಸಾಧ್ಯವಾದದ್ದು ಹಸಿರುಕ್ರಾಂತಿಯಿಂದ ಎಂಬುದೂ ಸತ್ಯವೇ. ಆದರೆ ಈ ಅಪಾರ ಪ್ರಮಾಣದ ಆಹಾರ ಉತ್ಪಾದನೆಯಿಂದ ರೈತಾಪಿಯ ಬಾಳು ಮೊದಲಿಗಿಂತ ಹಸನು ಆಗಿದೆಯೇ ಎಂಬ ಪ್ರಶ್ನೆಗೆ ಸರ್ಕಾರವೂ ಉತ್ತರ ಕೊಡುವುದಿಲ್ಲ, ಬೋರ್ಲಾಗನೂ ಸಾಯುವವರೆಗೆ ಉತ್ತರ ಕೊಡಲಿಲ್ಲ. ಭಾರತದ ಕೃಷಿಯ ಕಥೆ ಈ ದೇಶದ ಅಭಿವೃದ್ಧಿ ಮಾದರಿಯಂತೇ ಉಳ್ಳವರಿಗೆ ಅಮೃತವನ್ನೂ ಇಲ್ಲದವರಿಗೆ ಹಾಲಾಹಲವನ್ನೂ ಉಣಿಸುತ್ತಾ ಬರುತ್ತಿದೆ. ಉದಾಹರಣೆಗೆ ನಮ್ಮ ದೇಶದಲ್ಲಿ ಆಹಾರ ಸಮೃದ್ಧಿಯಿದೆ. ಆದರೆ ಭಾರತದ ಗ್ರಾಮೀಣ ಪ್ರದೇಶದ ತಲಾವಾರು ಆಹಾರ ಪ್ರಮಾಣದ ಬಳಕೆ ಮಾತ್ರ ಕಡಿಮೆಯಾಗುತ್ತಲೇ ಬರುತ್ತಿದೆ. ಹಸಿರುಕ್ರಾಂತಿ ಪರಿಚಯವಾಗುವ ಮುನ್ನ - ಅಂದರೆ 1970ರಲ್ಲಿ - ಭಾರತದ ಗ್ರಾಮೀಣ ಪ್ರದೇಶದ ತಲಾವಾರು ಆಹಾರ ಬಳಕೆ 170 ಕ್ಯಾಲರಿಯಿದ್ದದ್ದು ಈಗ 145 ಕ್ಯಾಲರಿಗೆ ಕುಸಿದಿದೆ. ಇದಾದದ್ದು ಆಹಾರದ ಉತ್ಪಾದನೆಯ ಕೊರತೆಯಿಂದಲ್ಲ, ಹೀಗಾಗಿ ಹಸಿರುಕ್ರಾಂತಿಯು ಏಕಕಾಲದಲ್ಲಿ ಆಹಾರ ಉತ್ಪಾದನೆಯನ್ನು ಜಾಸ್ತಿ ಮಾಡಿದ್ದು ನಿಜವಾದರೂ ಜನತೆಯ ಬಡತನವನ್ನೂ ಜಾಸ್ತಿ ಮಾಡಿದ್ದು ನಿಜ. ಈ ಪ್ರಕ್ರಿಯೆ ಹಸಿರು ಕ್ರಾಂತಿಯ ತಂತ್ರಜ್ಞಾನದಲ್ಲೇ ಅಡಕವಾಗಿದೆ. ಅಧಿಕ ಇಳುವರಿ ಬೀಜವನ್ನು ಬಿತ್ತನೆ ಮಾಡಿದ ನಂತರ ಅದು ಅಧಿಕ ಇಳುವರಿ ಕೊಡಬೇಕೆಂದರೆ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರವನ್ನು ಪೂರೈಸಬೇಕು. ಇದಕ್ಕೆ ಕಾಸು ಖರ್ಚಿಲ್ಲದೆ ಕೊಟ್ಟಿಗೆಯಲ್ಲಿ ಸಿಗುತ್ತಿದ್ದ ಸಗಣಿ ಗೊಬ್ಬರ ಸಾಕಾಗುವುದಿಲ್ಲ, ಅಲ್ಲದೆ ಈ ಬೀಜಗಳು ಸಹಜವಾಗಿಯೇ ಹಲವಾರು ಹೊಸ ಬಗೆಯ ಕ್ರಿಮಿ ಮತ್ತು ಕೀಟಗಳನ್ನು, ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳನ್ನೂ ಆಹ್ವಾನಿಸುತ್ತವಾದ್ದರಿಂದ ಕ್ರಿಮಿನಾಶಕ ಮತ್ತು ಕೀಟನಾಶಕಗಳನ್ನೂ ಕೊಳ್ಳಬೇಕು. ಅಲ್ಲದೇ ಸಾಂಪ್ರದಾಯಿಕ ಬೀಜಗಳಿಗಿಂತ



ಚಾರ್ವಾಕ

▸ ಶಿವಸುಂದರ್

ಈ ಹೈಬ್ರಿಡ್ ಬೀಜಗಳು ಹೆಚ್ಚು ನೀರನ್ನೂ ಕಬಳಿಸುತ್ತವೆ. ಹೀಗಾಗಿ ಇಳುವರಿ ಮೊದಲಿಗಿಂತ ಐದು ಪಟ್ಟು ಹೆಚ್ಚಾದರೂ ಒಂದು ಕ್ವಿಂಟಾಲ್ ಇಳುವರಿಗೆ ರೈತ ಹೂಡುತ್ತಿದ್ದ ಹೂಡಿಕೆಯೂ ಸಹ ಐದು ಪಟ್ಟು ಹೆಚ್ಚಾಗುತ್ತದೆ. ಆದ್ದರಿಂದ ಸಾರಾಂಶದಲ್ಲಿ ರೈತನ ಆರ್ಥಿಕತೆಯಲ್ಲಿ ಏರಿಕೆಗಿಂತ ಇಳಿಕೆ ಮತ್ತು ಬರ್ಬಾದಿಯೇ ಹೆಚ್ಚಾಗುತ್ತದೆ.

ಹಸಿರುಕ್ರಾಂತಿಯ ಪ್ರಾರಂಭದ ದಿನಗಳಲ್ಲಿ ಸರ್ಕಾರವೇ ಸಬ್ಸಿಡಿ ದರದಲ್ಲಿ ಇವೆಲ್ಲವನ್ನೂ ಪೂರೈಸುತ್ತಿತ್ತು. ಆದರೆ ಉದಾರೀಕರಣದ ಪ್ರಕ್ರಿಯೆಯಲ್ಲಿ ಸರ್ಕಾರ ಎಲ್ಲಾ ಜನಕಲ್ಯಾಣ ಕಾರ್ಯಕ್ರಮಗಳಿಂದ ಹಿಂತೆಗೆಯುತ್ತಿದ್ದಂತೆ ರೈತಾಪಿ ಇನ್ನಷ್ಟು ಅನಾಥನಾಗಿ ಮಾರುಕಟ್ಟೆಯಲ್ಲಿ ಭಿಕ್ಷುಕನಾದ.

ಅಲ್ಲದೆ ಹಸಿರುಕ್ರಾಂತಿಯನ್ನು ಭಾರತದಂತ ದೇಶಗಳಲ್ಲಿ ಅಳವಡಿಸಲು ಸರ್ಕಾರಗಳು ಕೊಡುತ್ತಿದ್ದ ಮತ್ತೊಂದು ಅತಿ ಮುಖ್ಯ ಕಾರಣ ಸ್ವಾವಲಂಬನೆ. ಆದರೆ ಹಸಿರುಕ್ರಾಂತಿ ಜಾರಿಯಾದ ನಾಲ್ಕು ದಶಕಗಳ ನಂತರ ಹಿಂತಿರುಗಿ ನೋಡಿದರೆ ಭಾರತ ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗಿರಬಹುದು. ಆದರೆ ಕೃಷಿ ಪದ್ಧತಿಯ ವಿಷಯದಲ್ಲಿ ಸ್ವಾವಲಂಬಯಾಗಿದೆಯೇ? ಖಂಡಿತಾ ಇಲ್ಲ, ಅದರಲ್ಲೂ ಜಾಗತೀಕರಣವೆಂಬ ಸಾಮ್ರಾಜ್ಯಶಾಹಿ ನೀತಿಗಳನ್ನು ಭಾರತವೂ ಒಳಗೊಂಡಂತೆ ಪ್ರಪಂಚದ ಎಲ್ಲಾ ಬಡದೇಶಗಳು ಜಾರಿಗೆ ತರಲು ಪ್ರಾರಂಭಿಸಿದ ಮೇಲೆ ಭಾರತದ ರೈತಾಪಿ ಬೀಜ, ಗೊಬ್ಬರ, ಕ್ರಿಮಿನಾಶಕ ಇತ್ಯಾದಿಗಳ ವಿಷಯದಲ್ಲೂ ಅಮೆರಿಕದಂತಹ ದೇಶಗಳನ್ನು ಸಂಪೂರ್ಣವಾಗಿ ಅವಲಂಬಿಸಬೇಕಾಗಿದೆ. ಹೀಗಾಗಿ ಹಸಿರುಕ್ರಾಂತಿ ನಮ್ಮ ಪರಾವಲಂಬನೆಯನ್ನೇನೂ ತಪ್ಪಿಸಲಿಲ್ಲ, ಆದರೆ ಹಸಿರುಕ್ರಾಂತಿಯ ಸಂಪೂರ್ಣ ಲಾಭ ಅನುಭವಿಸಿದ್ದು ಮಾತ್ರ ಅಮೆರಿಕದ ಮಾನ್ಸಾಂಟೋ, ಡು-ಪಾಂಟ್, ಫೋರ್ಡ್, ರಾಕ್‌ಫೆಲ್ಲರ್, ಸಿಬಾ-ಗೈಗಿ, ಕಾರ್ಗಿಲ್‌ನಂತಹ ಗೊಬ್ಬರ, ಬೀಜ, ಮತ್ತು ಕ್ರಿಮಿನಾಶಕ ಕಂಪನಿಗಳು.

ಎರಡನೇ ಮಹಾಯುದ್ಧದಲ್ಲಿ ಇದೇ ಕಂಪನಿಗಳೇ ಹಿಟ್ಲರ್‌ಗೂ ಮತ್ತು ಆತನ ವಿರುದ್ಧ ಯುದ್ಧ ಮಾಡುತ್ತಿದ್ದ ಬ್ರಿಟನ್‌ನಂತಹ ದೇಶಗಳಿಗೂ ಶಸ್ತ್ರಾಸ್ತ್ರಗಳನ್ನೂ, ರಾಸಾಯನಿಕಗಳನ್ನೂ ಸರಬರಾಜು ಮಾಡುತ್ತಿದ್ದವು. ಯುದ್ಧದ ನಂತರ ಅದೇ ಕಂಪನಿಗಳೇ ಇದ್ದಕ್ಕಿದ್ದಂತೆ ಕೃಷಿ ವಲಯಕ್ಕೆ ಕಾಲಿಟ್ಟು ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಸರಬರಾಜು ಮಾಡಲು ಪ್ರಾರಂಭಿಸಿ ಯುದ್ಧಾನಂತರವೂ ತಮ್ಮ ಮಾರುಕಟ್ಟೆಯನ್ನು ಬೇರೊಂದು ರೂಪದಲ್ಲಿ ಉಳಿಸಿಕೊಂಡವಲ್ಲದೆ ಅದಕ್ಕೆ ಮಾರುಕಟ್ಟೆ ಸೃಷ್ಟಿಸುವ ಹಸಿರು ಕ್ರಾಂತಿ ಜಗತ್ತಿನಾದ್ಯಂತ ಜಾರಿಗೆ ಬಂದದ್ದು ಕಾಕತಾಳೀಯವೇನಲ್ಲ, ಏಕೆಂದರೆ ನಾರ್ಮನ್ ಬೋರ್ಲಾಗ್ ಕೆಲಸ ಮಾಡುತ್ತಿದ್ದದ್ದು ಕೆಮಿಕಲ್ ಸಂಸ್ಥೆಯಾಗಿದ್ದ ಡು-ಪಾಂಟ್‌ನಲ್ಲಿ. ಆತನಿಗೆ ಫೆಲೋಶಿಪ್ ನೀಡಿ ಮೆಕ್ಸಿಕೋದಲ್ಲಿ ತಾವು ನಡೆಸುತ್ತಿದ್ದ ಕೃಷಿ ಸಂಶೋಧನೆಯಲ್ಲಿ ಸಹಾಯ ಮಾಡುವಂತೆ ಆಹ್ವಾನಿಸಿದ್ದು ಇದೇ ರಾಕ್‌ಫೆಲ್ಲರ್ ಕಂಪನಿಯೇ!

ಈಗ ಭಾರತ ಮತ್ತೆ ಆಹಾರ ಕೊರತೆಯನ್ನು ಅನುಭವಿಸಲು ಪ್ರಾರಂಭಿಸಿದ್ದು ನಾರ್ಮನ್ ಬೋರ್ಲಾಗ್ ಆದಿಯಾಗಿ ಎಲ್ಲರೂ ಅದಕ್ಕೆ ಜನಸಂಖ್ಯಾ ಸ್ಫೋಟವನ್ನು ಹೊಣೆ ಮಾಡುತ್ತಿದ್ದಾರೆ ಮತ್ತು ಅದನ್ನು ಎದುರಿಸಲು ಎರಡನೇ ಹಸಿರುಕ್ರಾಂತಿಯನ್ನು ಅಂದರೆ ಜೆನಿಟಿಕಲ್ ಮಾಡಿಫೈಡ್ ಕೃಷಿಯೆಂಬ ಅತ್ಯಂತ ವಿನಾಶಕಾರಿ ಪದ್ಧತಿಯನ್ನು ಅಳವಡಿಸುವಂತೆ ಒತ್ತಾಯಿಸುತ್ತಿದ್ದಾರೆ. ಈ ಜೆನಿಟಿಕಲ್ ಮಾಡಿಫೈಡ್ ಕೃಷಿಯ ಪ್ರಧಾನ ಫಲಾನುಭವಿಗಳೆಲ್ಲಾ ಮತ್ತೆ ಇದೇ ಕೃಷಿ ಬಹುರಾಷ್ಟ್ರೀಯ ಕಂಪನಿಗಳೇ!

ಹೀಗಾಗಿ ನಾರ್ಮನ್ ಬೋರ್ಲಾಗ್ ಎಂಬ ಒಬ್ಬ ವಿಜ್ಞಾನಿ ಹೇಗೆ ಸರ್ಕಾರಗಳ ಆರ್ಥಿಕ ಮತ್ತು ರಾಜಕೀಯ ನೀತಿಗಳಿಗೆ ಹೊಣೆಗಾರನಾಗುತ್ತಾನೆ ಎಂಬ ಪ್ರಶ್ನೆಯೇ ಅಸಂಬದ್ಧವಾಗುತ್ತದೆ. ನಾರ್ಮನ್ ಬೋರ್ಲಾಗ್‌ರನ್ನೂ ಒಳಗೊಂಡಂತೆ ಹಸಿರು ಕ್ರಾಂತಿಯೆಂಬ ಯೋಜನೆಯೇ ಎರಡನೇ ಮಹಾಯುದ್ಧದ ನಂತರ ಇಡೀ ಜಗತ್ತನ್ನೇ ತನ್ನ ನಿಯಂತ್ರಣದಲ್ಲಿ ತೆಗೆದುಕೊಳ್ಳಬೇಕೆಂಬ ಅಮೆರಿಕನ್ ಸಾಮ್ರಾಜ್ಯಶಾಹಿ ಆಸಕ್ತಿಯಿಂದ ಹುಟ್ಟಿಕೊಂಡಿದ್ದು ಎಂಬುದನ್ನು ಗಮನಿಸಿದಾಗ ಹಸಿರುಕ್ರಾಂತಿಯ ಅಸಲಿ ಸ್ವರೂಪ ಇನ್ನಷ್ಟು ಸ್ಪಷ್ಟವಾಗುತ್ತದೆ.

ಹಸಿರುಕ್ರಾಂತಿಯ ನೈಜ ಕಥೆ 1943ರಲ್ಲಿ ರಾಕ್‌ಫೆಲ್ಲರ್ ಸಂಸ್ಥೆಯು ಕೃಷಿ ಪರಿಣಿತರ ಒಂದು ತಂಡವನ್ನು ಮೆಕ್ಸಿಕೋಗೆ ಅಲ್ಲಿನ ಸ್ಥಳೀಯ ಧಾನ್ಯಗಳ ಅಭಿವೃದ್ಧಿಯ ಬಗ್ಗೆ ಅಧ್ಯಯನ ಮಾಡಲು ಕಳಿಸುವುದರ ಮೂಲಕ ಪ್ರಾರಂಭವಾಗುತ್ತದೆ. ನಾರ್ಮನ್ ಬೋರ್ಲಾಗ್ ಈ ತಂಡಕ್ಕೆ 1944ರಲ್ಲಿ ಸೇರ್ಪಡೆಯಾಗುತ್ತಾರೆ. ರಾಕ್‌ಫೆಲ್ಲರ್ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲು ಪ್ರಧಾನ ಕಾರಣ 1939ರಲ್ಲಿ ಮೆಕ್ಸಿಕೋದಲ್ಲಿ ಅಧಿಕಾರಕ್ಕೆ ಬಂದಿದ್ದ ಅಧ್ಯಕ್ಷ ಲಜಾರ್ರೋ ಕಾರ್ಡೆನೇಜ್‌ನ ರಾಷ್ಟ್ರೀಯವಾದಿ ಸರ್ಕಾರ ರಾಕ್‌ಫೆಲ್ಲರ್‌ನ ಸ್ಟಾಂಡರ್ಡ್ ಆಯಿಲ್ ಕಂಪನಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದು ಮತ್ತು ಎರಡನೆಯದಾಗಿ ಆ ದಕ್ಷಿಣಾರ್ಧ ಗೋಳದಲ್ಲಿ ನಾಜಿಗಳ ಕಾಲದಿಂದಲೂ ತಮ್ಮ ಪ್ರಭಾವವನ್ನು ವಿಸ್ತರಿಸಿಕೊಳ್ಳಬೇಕೆಂಬ ಸತತ ಪ್ರಯತ್ನ



ನಡೆಯುತ್ತಿದ್ದದ್ದು. ಯುದ್ಧಕ್ಕಿಂತ ಅಭಿವೃದ್ಧಿಪರರೆಂಬ ಮುಖವಾಡ ತಮ್ಮ ಹೂಡಿಕೆಯನ್ನು ಮತ್ತು ಪ್ರಭಾವವನ್ನು ವಿಸ್ತರಿಸಲು ಸಹಾಯ ಮಾಡುತ್ತದೆಂದು ಎರಡನೇ ಮಹಾಯುದ್ಧ ಅವರಿಗೆ ಕಲಿಸಿಕೊಟ್ಟಿತ್ತು. 1956ರ ಸುಮಾರಿಗೆ ಬೋರ್ಲಾಗ್ ತಂಡ ಈ ವಿಶೇಷ ಇಳುವರಿ ಪದ್ಧತಿಯನ್ನು ಕಂಡುಹಿಡಿದಿದ್ದರು. ಅದನ್ನು ನಾಲ್ಕು ವರ್ಷಗಳ ಕಾಲ ಮೆಕ್ಸಿಕೋದ ಮಣ್ಣಲ್ಲಿ ಪರೀಕ್ಷಿಸಿ ಅದಕ್ಕೆ ಬೇಕಾಗುವ ಅಗತ್ಯಗಳೇನೆಂದು ಗುರುತಿಸಲಾಯಿತು. ಈ ಹೈಬ್ರಿಡ್ ಕೃಷಿ ಹೊಸಬಗೆಯ ಬೀಜವನ್ನು ಮಾತ್ರವಲ್ಲದೆ ಬಡದೇಶಗಳ ಸ್ವಾವಲಂಬಿ ಕೃಷಿ ಪದ್ಧತಿಯನ್ನೇ ಸಂಪೂರ್ಣವಾಗಿ ನಾಶಮಾಡಿ ಬೀಜ, ಗೊಬ್ಬರ, ಕ್ರಿಮಿನಾಶಕಗಳೆಲ್ಲವಕ್ಕೂ ತಮ್ಮ ಮೇಲೆ ಅಂದರೆ ಬಂಡವಾಳಶಾಹಿ ಜಗತ್ತಿನ ಮೇಲೆ ಅವಲಂಬಿಸುವಂತೆ ಮಾಡುತ್ತದೆಂದು ಖಾತ್ರಿ ಪಡಿಸಿಕೊಳ್ಳಲಾಯಿತು. ಹೀಗಾಗಿ ಪ್ರಪಂಚವನ್ನು ಸಾಮ್ರಾಜ್ಯಶಾಹಿ ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕೆ ಯುದ್ಧದ ಅಗತ್ಯವೇ ಇಲ್ಲದ ಮತ್ತೊಂದು ಸಾಧನವಾಗಿ ಅವರಿಗೆ ದಕ್ಕಿತ್ತು.

ಅದೇ ವೇಳೆಗೆ ಜಗತ್ತು ಹೊಸ ಬಗೆಯ ರಾಜಕೀಯ ಪಲ್ಲಟವನ್ನು ಕಾಣುತ್ತಿತ್ತು. ಏಷಿಯಾದ ಬೃಹತ್ ರಾಷ್ಟ್ರ ಚೀನಾದಲ್ಲಿ ಕಮ್ಯುನಿಸ್ಟ್ ಕ್ರಾಂತಿಯಾಗಿ ಭೂಮಾಲೀಕರು ಮತ್ತು ಸಾಮ್ರಾಜ್ಯಶಾಹಿಗಳನ್ನು ಚೀನಾದಿಂದ ಹೊರಗಟ್ಟಲಾಗಿತ್ತು. ಕೊರಿಯಾದಲ್ಲಿ ಸಹ ಅಂತರ್ಯುದ್ಧ ಪ್ರಾರಂಭವಾಗಿ ಅರ್ಧ ಕೊರಿಯಾ ಕಮ್ಯುನಿಸ್ಟ್ ಪ್ರಭಾವಕ್ಕೊಳಗಾಗಿತ್ತು. ಮಲೇಷಿಯಾದಲ್ಲಿ ಬ್ರಿಟನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಎಡಪಂಥೀಯ ಗೆರಿಲ್ಲಾಗಳ ಯುದ್ಧ ಪ್ರಾರಂಭವಾಗಿತ್ತು. ಕಾಂಬೋಡಿಯಾ, ಲಾವೋಸ್ ಇನ್ನಿತ್ಯಾದಿ ಇಂಡೋ-ಚೈನಾ ದೇಶಗಳಲ್ಲಿ ಕಮ್ಯುನಿಸ್ಟ್ ಗೆರಿಲ್ಲಾಗಳು ಅಧಿಕಾರದ ಕದವನ್ನು ತಟ್ಟುತ್ತಿದ್ದರು. ಫಿಲಿಫೈನ್ಸ್ ದೇಶದಲ್ಲೂ ಎಡಪಂಥೀಯ ಗೆರಿಲ್ಲಾಗಳು ಸಶಕ್ತಗೊಳ್ಳುತ್ತಿದ್ದರು. ಭಾರತವೊಂದನ್ನು ಹೊರತುಪಡಿಸಿದರೆ ಮಿಕ್ಕೆಲ್ಲಾ ಏಷಿಯಾ ದೇಶಗಳಲ್ಲಿ ಹೆಚ್ಚು ಕಡಿಮೆ ಕಮ್ಯುನಿಸ್ಟರ ಪ್ರಭಾವ ಹೆಚ್ಚುತ್ತಿತ್ತು. ಎರಡನೇ ಮಹಾಯುದ್ಧ ಕೊನೆಗೊಳ್ಳುವ ಜೊತೆಜೊತೆಗೆ ಅರ್ಧ ಯೂರೋಪೂ ಸಹ ಬಂಡವಾಳಶಾಹಿ ಜಗತ್ತಿನ ಪ್ರಭಾವವನ್ನು ಕಳಚಿಕೊಂಡು ಕಮ್ಯುನಿಸ್ಟರ ಪ್ರಭಾವದೆಡೆ ಸೆಳೆಯಲ್ಪಡುತ್ತಿತ್ತು.

ಅಮೆರಿಕ ಹಸಿರುಕ್ರಾಂತಿಯನ್ನು ಅನ್ವೇಷಿಸಿದ್ದು ಇಂಥಾ ರಾಜಕೀಯ ಸಂದರ್ಭದಲ್ಲಿ. ಕಮ್ಯುನಿಸಂ ಬಲಗೊಳ್ಳುವುದೇ ಹಸಿವಿರುವಾಗ ಎಂದು ಅರ್ಥಮಾಡಿಕೊಂಡ ಅಮೆರಿಕನ್ನರು ಹಸಿವಿಗೆ ತುತ್ತನ್ನ ಒದಗಿಸಿ ಕಮ್ಯುನಿಸ್ಟರ ಪ್ರಭಾವದಲ್ಲಿರುವ ದೇಶಗಳನ್ನು ಮತ್ತೆ ಬಂಡವಾಳಶಾಹಿ ಜಗತ್ತಿಗೆ ಎಳೆದು ತರುವ ಸಂಚಿನ ಭಾಗವಾಗಿಯೇ ಹಸಿರು ಕ್ರಾಂತಿ ರೂಪುಗೊಂಡಿತು. ಹೀಗಾಗಿಯೇ 1965ರಲ್ಲಿ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಚೆಸ್ಟರ್ ಬೌಲೆಸ್ "ಕೆಂಪು ಕ್ರಾಂತಿಯನ್ನು ಹತ್ತಿಕ್ಕಬೇಕೆಂದರೆ ಹಸಿರು ಕ್ರಾಂತಿ ಅತ್ಯಗತ್ಯ" ಎಂದು ಘೋಷಿಸಿದ್ದರು. ಆದ್ದರಿಂದಲೇ 1970ರಲ್ಲಿ ನಾರ್ಮನ್ ಬೋರ್ಲಾಗ್‌ಗೆ ನೊಬೆಲ್ ಪ್ರಶಸ್ತಿ ಸಿಕ್ಕಿದ್ದು ಕೃಷಿ ವಿಜ್ಞಾನಕ್ಕಲ್ಲ, ಶಾಂತಿಗಾಗಿ. ಆತಂಕದಲ್ಲಿದ್ದ ಬಂಡವಾಳಶಾಹಿ ಜಗತ್ತಿಗೆ ಶಾಂತಿ ತಂದುಕೊಟ್ಟಿದ್ದಕ್ಕಾಗಿ...

ಹೀಗಾಗಿ ಈ ಮೊದಲೇ ವಿವರಿಸಿದಂತೆ ಹಸಿರು ಕ್ರಾಂತಿಯ ತಂತ್ರಜ್ಞಾನವು ಅಮೆರಿಕದ ಬಹುರಾಷ್ಟ್ರೀಯ ಕಂಪನಿಗಳಿಗೆ ಹೊಸ ಮಾರುಕಟ್ಟೆ ತಂದುಕೊಡುವುದು ಎಂದು ಖಾತರಿಯಾದ ಮೇಲೆ ಅಮೆರಿಕಾ ಅದನ್ನು ಕಡ್ಡಾಯವಾಗಿ ಎಲ್ಲಾ ದೇಶಗಳ ಮೇಲೆ ಹೇರತೊಡಗಿತು. ಆವರೆಗೆ ಪ್ರಪಂಚದ ಎಲ್ಲಾ ಬಡ ದೇಶಗಳಿಗೆ ಪಿಎಲ್-480 ಯೋಜನೆಯಡಿಯಲ್ಲಿ ಗೋಧಿಯನ್ನು ಸಬ್ಸಿಡಿ ದರದಲ್ಲಿ ಸರಬರಾಜು ಮಾಡುತ್ತಿದ್ದ ಅಮೆರಿಕದ ನೀತಿಯನ್ನು 1965ರಲ್ಲಿ ಅಧ್ಯಕ್ಷ ಲಿಂಡನ್ ಜಾನ್ಸನ್ ಬದಲಾಯಿಸಿದ. ಇನ್ನು ಮುಂದೆ ಅಮೆರಿಕದ ಸಬ್ಸಿಡಿ ಗೋಧಿ ಬೇಕೆಂದರೆ ಬಡ ದೇಶಗಳು ತಮ್ಮ ಕೈಗಾರೀಕರಣ ನೀತಿಯನ್ನು ಕೈಬಿಡಬೇಕು, ಹೈಬ್ರಿಡ್ ಕೃಷಿಯನ್ನು ಅನುಸರಿಸಬೇಕು ಮತ್ತು ಅಮೆರಿಕದ ಬಂಡವಾಳಕ್ಕೆ ತಮ್ಮ ದೇಶದ ಮಾರುಕಟ್ಟೆಯನ್ನು ತೆರೆದಿಡಬೇಕು ಎಂಬ ಶರತ್ತನ್ನು ವಿಧಿಸಿದರು.

1965ರಲ್ಲಿ ಭಾರತದಲ್ಲಿ ಹಿಂದೆಂದೂ ಕಾಣದ ಕ್ಷಾಮ ಡಾಮರ ಆವರಿಸಿ ಅಪಾರ ಆಹಾರ ಕೊರತೆ ಎದುರಾಗಿತ್ತು. ಈ ಅವಕಾಶವನ್ನು ಬಳಸಿಕೊಂಡ ಅಮೆರಿಕ ಭಾರತವೂ ಹಸಿರುಕ್ರಾಂತಿ ಯೋಜನೆಯನ್ನು ಜಾರಿ ಮಾಡಬೇಕೆಂದೂ, ಅಮೆರಿಕದ ಕೃಷಿ ಬಂಡವಾಳಕ್ಕೆ ಮಾರುಕಟ್ಟೆಯನ್ನು ತೆರೆಯಬೇಕೆಂದೂ, ಇಲ್ಲದಿದ್ದರೆ ಆಹಾರ ಸರಬರಾಜು ಮಾಡುವುದಿಲ್ಲವೆಂದೂ ಬ್ಲಾಕ್‌ಮೇಲ್ ಮಾಡಿ ಹಸಿರು ಕ್ರಾಂತಿ ಯೋಜನೆಯನ್ನು ಮಂಡಿಬಲವಿಲ್ಲದ ಭಾರತದ ಸರ್ಕಾರದ ಮೇಲೆ ಹೇರಿತು.

ಹೀಗಾಗಿ ಹಸಿರುಕ್ರಾಂತಿಯೆಂಬುದು ಭಾರತದಂತಹ ಕೃಷಿ ಪ್ರಧಾನ ದೇಶವನ್ನು ಅಮೆರಿಕನ್ ಸಾಮ್ರಾಜ್ಯಶಾಹಿ ನಿಯಂತ್ರಣಕ್ಕೆ ಒಳಪಡಿಸುವ ಸಂಚೇ ಹೊರತು ರೈತೋದ್ಧಾರದ ಯೋಜನೆಯಲ್ಲ. ಅದರ ಪರಿಣಾಮವೇ ಕೊನೆಯಿಲ್ಲದ ರೈತರ ಆತ್ಮಹತ್ಯೆಗಳು. ಹಸಿವಿನ ಸಾವುಗಳು. ಬತ್ತಿಹೋದ ಕೆರೆಗಳು. ಕುಸಿದುಬಿದ್ದಿರುವ ಅಂತರ್ಜಲದ ಮಟ್ಟ. ಕಂಡುಕೇಳರಿಯದ ಬೆಳೆ ರೋಗಗಳು. ಅತಂತ್ರ ರೈತ. ಪರಾವಲಂಬಿ ದೇಶ. ಇವೆಲ್ಲದರ ಮೂಲ ಸೂತ್ರಧಾರಿ ನಾರ್ಮನ್ ಬೋರ್ಲಾಗ್. ಆದ್ದರಿಂದಲೇ ಹೇಳಿದ್ದು ಈ ಮಹಾಶಯ ಸಾಮ್ರಾಜ್ಯಶಾಹಿಗಳ ಉಗ್ರಾಣ ತುಂಬಿಸಲು ಬಡದೇಶಗಳ ಬಡರೈತರ ಕೈಯಲ್ಲಿದ್ದ ತಟ್ಟೆಯನ್ನೂ ಕಸಿದುಕೊಂಡ ಕೊಲೆಗಾರ ಎಂದು.

ಈಗ ಹೇಳಿ. ಈತ ಸ್ನೇಹಿತನೋ? ಭಾರತದ ರೈತಾಪಿ ಬಡಜನರ ಶತ್ರುವೋ? ■

ಬೇಕಿದೆ ನ್ಯಾಯಾಂಗದ ಸ್ವಚ್ಛೀಕರಣ



ಕಂಡಹಾಗೆ

■ ಗೌರಿ ಲಂಕೇಶ್

ಸುಪ್ರೀಂಕೋರ್ಟ್ ಮತ್ತು ಇತರೆ ಹೈಕೋರ್ಟುಗಳ ...ಾಧೀಶರೆಲ್ಲರೂ ಇನ್ನು ಮುಂದೆ ತಮ್ಮ ಆಸ್ತಿ ವಿವರ ... ಬಹಿರಂಗಪಡಿಸಲು ಒಪ್ಪಿಕೊಂಡ ಬೆನ್ನ ಹಿಂದೆಯೇ ...ಟಕ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ದಿನಕರನ್ ಅವರ ವಿರುದ್ಧ ಭ್ರಷ್ಟಾಚಾರದ ...ಪಗಳು ಕೇಳಿಬಂದಿವೆ.

... ಆರೋಪಗಳು ನಿಜವ್ರೋ, ಸುಳ್ಳೋ ಎಂಬುದು ...ತಾಗಬೇಕಿದೆಯಾದರೂ ಅದರ ಸುತ್ತ ಈಗ ...ರು ಆಯಾಮಗಳಲ್ಲಿ ಚರ್ಚೆಗಳು ನಡೆಯುತ್ತಿವೆ. ...ನ್ಯಾಯಾಧೀಶರ ನೇಮಕಾತಿ ಪದ್ಧತಿಯಿಂದ ಹಿಡಿದು ...ನ್ಯಾಯಮೂರ್ತಿಗಳ ವಿರುದ್ಧ ಕ್ರಮ ಜರುಗಿಸುವ ...ು ತನಕ ಹಬ್ಬಿದೆ.

...ಮ್ಮ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ ಮತ್ತು ...ಾಂಗ ಇವತ್ತು ಜನದ್ರೋಹಿಗಳಾಗಿ ಪರಿವರ್ತನೆಗೊ...ವುದರಿಂದ ಜನರೆಲ್ಲ ಭರವಸೆ ಇಟ್ಟಿರುವುದು ...ಾಂಗದ ಮೇಲೆ. ಆದರೆ ಇತ್ತೀಚೆಗೆ ಟ್ರಾನ್ಸ್‌ಪರೆನ್ಸಿ ...ರ್‌ನ್ಯಾಷನಲ್ ಎಂಬ ಸಂಘಟನೆ ನಡೆಸಿದ ...ಕ್ಷೆಯಲ್ಲಿ ಶೇ. 77 ರಷ್ಟು ಭಾರತೀಯರು ನ್ಯಾಯಾಂಗ ... ಈಗ ಭ್ರಷ್ಟಗೊಂಡಿದೆ ಎಂಬ ಅಭಿಪ್ರಾಯ ...ಪಡಿಸಿದ್ದಾರೆ. ಅಷ್ಟೇ ಅಲ್ಲ, ಸುಪ್ರೀಂಕೋರ್ಟಿನ ಮಾಜಿ ...ನ್ಯಾಯಮೂರ್ತಿಗಳಾದ ಎಸ್.ಪಿ. ಬರೂಚ ಅವರು ...ರಲ್ಲೇ "ಭಾರತದ ನ್ಯಾಯಾಂಗದ ಉನ್ನತ ...ದಲ್ಲೂ ಪ್ರತಿ ಐವರು ನ್ಯಾಯಾಧೀಶರಲ್ಲಿ ಓರ್ವ ...ಗೊಂಡಿದ್ದಾನೆ" ಎಂದೇ ಘೋಷಿಸಿದ್ದರು.

...ರಿಸ್ಥಿತಿ ಆತಂಕ ಹುಟ್ಟಿಸುವಂತಿದ್ದರೂ ನಮ್ಮ ...ಮೂರ್ತಿಗಳು ಅದನ್ನೆಲ್ಲ ಸರಿಪಡಿಸಲು ಸ್ವಯಂಪ್ರೇರಿತ ...ಮುಂದೆ ಬರಲಿಲ್ಲ. ನ್ಯಾಯಾಂಗದಲ್ಲಿ ಭ್ರಷ್ಟಾಚಾರ, ...ಕಳಿತ ತಾಂಡವವಾಡುತ್ತಿದ್ದರೂ ಅದರ ಬಗ್ಗೆ ಜಾಣ ... ಪ್ರದರ್ಶಿಸಿದ ಸುಪ್ರೀಂಕೋರ್ಟಿನ ನ್ಯಾಯಮೂರ್ತಿ ...ರ್ಮದಾ ಡ್ಯಾಂಅನ್ನು ನಿರ್ಮಿಸಲು ಸುಪ್ರೀಂಕೋರ್ಟ್ ... ಅನುಮತಿಯನ್ನು ವಿರೋಧಿಸಿ ಅದರ ಗೇಟ್ ... ಪ್ರತಿಭಟಿಸಿದ ಖ್ಯಾತ ಲೇಖಕಿ ಅರುಂಧತಿ ರಾಯ್ ... ಒಂದು ದಿನದ ಜೈಲು ಶಿಕ್ಷೆಯನ್ನು, ಎರಡು ...ರೂಪಾಯಿಗಳ ದಂಡವನ್ನೂ ವಿಧಿಸಿದರು. ಅವರ ... ಆಕೆ ಮಾಡಿದ ಘೋರ ತಪ್ಪು "ನ್ಯಾಯಾಂಗದ ...ವನ್ನು ಕುಂದಿಸಿದ್ದು!"

...ಪರ್ಯಾಸ ಯಾವುದೆಂದರೆ ಸುಪ್ರೀಂಕೋರ್ಟಿನ ... ಸ್ವತಃ ಸುಪ್ರೀಂಕೋರ್ಟೇ ಇತ್ತೀಚೆಗೆ ಧಕ್ಕೆ ತಂದಿತು. ...ದ್ದು ನ್ಯಾಯಮೂರ್ತಿಗಳ ಆಸ್ತಿ ಘೋಷಣೆಗೆ ...ಸಿದ ವಾದ-ವಿವಾದದಲ್ಲಿ, ದೆಹಲಿ ನ್ಯಾಯಾಲ... ಸುಪ್ರೀಮ್ ಕೋರ್ಟಿನ ನ್ಯಾಯಮೂರ್ತಿಗಳೂ ...ಆಸ್ತಿ ವಿವರಗಳನ್ನು ಬಹಿರಂಗಪಡಿಸಬೇಕೆಂದು ...ನೀಡಿದಾಗ ಅದಕ್ಕೆ ಸುಪ್ರೀಂಕೋರ್ಟ್ ತಡೆಯಾಜ್ಞೆ ... ಅದನ್ನು ಕಂಡ ದೇಶದ ಬಹಳಷ್ಟು ಜನ ...ಾಧೀಶರಿಗೆ ತಮ್ಮ ಆಸ್ತಿ ಘೋಷಿಸಲು ಯಾಕಿಷ್ಟು ...ಕೆ" ಎಂದು ಯೋಚಿಸುವಂತಾಯಿತ್ತಲ್ಲದೆ, ಸುಪ್ರೀಂ...ನ ಬಗ್ಗೆಯೇ ಸಂಶಯ ಮೂಡುವಂತೆ ಮಾಡಿತ್ತು. ...ದಹಾಗೆ ಹಿಂದೊಮ್ಮೆ ಇದೇ ಸುಪ್ರೀಂಕೋರ್ಟ್ ...ಸಭೆ ಮತ್ತು ಸಂಸತ್ತಿಗೆ ಚುನಾವಣೆಗಳಲ್ಲಿ ...ವವರೆಲ್ಲ ತಮ್ಮ ಆಸ್ತಿ ವಿವರಗಳನ್ನು ಬಹಿರಂಗ...ಕು ಎಂದು ಆದೇಶಿಸಿತ್ತು. ಆ ಆದೇಶದ ಹಿಂದಿದ್ದ ... "ಜನರಿಗೆ ತಮ್ಮನ್ನು ಪ್ರತಿನಿಧಿಸಲಿರುವ ವ್ಯಕ್ತಿಯ ... ವಿವರಗಳು ಲಭ್ಯವಿರಬೇಕು" ಎಂಬುದಾಗಿತ್ತು. ...ಮಾನದಂಡ ಇಟ್ಟುಕೊಂಡರೆ ಇವತ್ತು ಈ ದೇಶದ ...ಸ್ತಿತ್ವದ ಬದುಕಿನ ಮೇಲೆ ಪ್ರಭಾವ ಬೀರುವಂತಹ ...ಗಳನ್ನು ನೀಡುವ ನ್ಯಾಯಾಧೀಶರ ಬಗೆಗೂ ಜನರಿಗೆ ...ಮಾಹಿತಿ ಲಭ್ಯವಿರಬೇಕೆಂದು ಆಶಿಸುವುದು ...ಪ್ಪೇ?

ಅದೆಲ್ಲ ಬದಿಗಿರಲಿ, ಖ್ಯಾತ ವಕೀಲ ಫಾಲಿ ಎಸ್. ನಾರೀಮನ್ ಅವರು ಹೇಳುವಂತೆ "ದೇಶದ ಸಂವಿಧಾನಕ್ಕಿಂತ ನ್ಯಾಯಾಂಗ ಹಿರಿಯದಲ್ಲ." ಆದರೆ ಇಲ್ಲಿಯ ತನಕ ನ್ಯಾಯಮೂರ್ತಿಗಳು ತಾವು ಎಲ್ಲ ಕಾನೂನುಗಳನ್ನು ಮೀರಿರುವವರು ಎಂಬಂತಹ ನಿಲುವುಗಳನ್ನು ಪ್ರದರ್ಶಿಸುತ್ತಾ ಬಂದಿದ್ದಾರೆ. ಆದರೆ ಇಂತಹ ನಿಲುವು ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಹಾನಿಕಾರಕ ಎಂದು ಪ್ರಶಾಂತ್ ಭೂಷಣ್‌ರಂತಹ ಹಿರಿಯ ವಕೀಲರು ವಾದಿಸುತ್ತಾ ಬಂದಿದ್ದಾರಲ್ಲದೆ ನ್ಯಾಯಾಂಗದಲ್ಲಿ ಸಂಪೂರ್ಣ ಪಾರದರ್ಶಕತೆ ತರಬೇಕೆಂದು ಹಲವಾರು ವರ್ಷಗಳಿಂದ ಹೋರಾಡುತ್ತಿದ್ದಾರೆ.

ಪ್ರಶಾಂತ್ ಭೂಷಣ್ ಅವರ ಪ್ರಕಾರ ನ್ಯಾಯಾಂಗವನ್ನು ಭ್ರಷ್ಟಾಚಾರ ರಹಿತವಾಗಿಸಬೇಕೆಂದರೆ ನ್ಯಾಯಮೂರ್ತಿಗಳ ನೇಮಕಾತಿಯಿಂದ ಹಿಡಿದು, ಆರೋಪ ಸಾಬೀತಾದ ನ್ಯಾಯಮೂರ್ತಿಗಳ ವಿರುದ್ಧ ಕ್ರಮ ಜರುಗಿಸುವಂತಹ ಪ್ರಕ್ರಿಯೆಯೂ ಬದಲಾಗಬೇಕು. ಅವರೇ ಒಂದು ಲೇಖನದಲ್ಲಿ ಹೀಗೆ ಹೇಳಿದ್ದಾರೆ:

ಈ ಹಿಂದೆ ಆಡಳಿತಾಂಗವೇ ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡುತ್ತಿತ್ತು. ಆದರೆ ಆಗ ರಾಜಕಾರಣಿಗಳು ಹಸ್ತಕ್ಷೇಪ ಮಾಡುತ್ತಿದ್ದರಲ್ಲದೆ ನೇಮಕಾತಿ ಪ್ರಕ್ರಿಯೆಯೇ ದುರ್ಬಳಕೆಯಾಗುತ್ತಿತ್ತು. ಅದನ್ನು ತಡೆಯಲು ಕೆಲ ನ್ಯಾಯಮೂರ್ತಿಗಳಿರುವ ಮಂಡಳಿಗೆ ಆ ಜವಾಬ್ದಾರಿಯನ್ನು ವಹಿಸುವ ಪದ್ಧತಿಯನ್ನು ತರಲಾಯಿತು. ಆದರೆ ಈ ಪದ್ಧತಿಯೂ ಪಾರದರ್ಶಕವಾಗಿಲ್ಲ. ಜೊತೆಗೆ ಇದೊಂದು



ಗೌಪ್ಯ ಕಾರ್ಯಾಚರಣೆ ಎಂತಿದ್ದು ಆಯ್ಕೆ ಪ್ರಕ್ರಿಯೆ ಯಾವ ನಿರ್ದಿಷ್ಟ ಮಾನದಂಡಗಳನ್ನೂ ಹೊಂದಿಲ್ಲ. ಮಾತ್ರವಲ್ಲ ಈ ಆಯ್ಕೆ ಪ್ರಕ್ರಿಯೆಯಲ್ಲಿ ಲೋಪದೋಷಗಳಿದ್ದು ಸ್ವಜನ ಪಕ್ಷಪಾತಕ್ಕೆ ಅವಕಾಶ ನೀಡುತ್ತದೆ. ನ್ಯಾಯಮೂರ್ತಿ ಸೌಮಿತ್ರ ಸೇನ್ ಪ್ರಕರಣ ಸಾಬೀತುಪಡಿಸಿದಂತೆ ಈ ಪ್ರಕ್ರಿಯೆಯಲ್ಲಿ ವ್ಯಕ್ತಿಗಳ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಗಮನಿಸದೆ ಎಡವಟ್ಟುಗಳೂ ಆಗುತ್ತಿವೆ.

ಆದ್ದರಿಂದ ನ್ಯಾಯಮೂರ್ತಿಗಳ ಮಂಡಳಿಗಿಂತಲೂ ಒಂದು ಶಾಶ್ವತ ಸಂಸ್ಥೆಯನ್ನು ಸ್ಥಾಪಿಸಿ ನ್ಯಾಯಮೂರ್ತಿಗಳನ್ನು ವೈಜ್ಞಾನಿಕವಾಗಿ, ವಸ್ತುನಿಷ್ಠವಾಗಿ ಮತ್ತು ಪಾರದರ್ಶಕವಾಗಿ ಆಯ್ಕೆ ಮಾಡುವ ಜವಾಬ್ದಾರಿಯನ್ನು ಅದಕ್ಕೆ ವಹಿಸಬಹುದು.

ಹಾಗೆಯೇ ನ್ಯಾಯಮೂರ್ತಿಗಳ ಮೇಲೆ ದೋಷಾರೋಪ (impeachment) ಮಾಡುವ ಹಾಲಿ ಪದ್ಧತಿಯೂ ಕಾರ್ಯರೂಪಕ್ಕೆ ತರಲಾಗದಂತಿದೆ. ಇವತ್ತು ರಾಜಕೀಯ ಪಕ್ಷಗಳು ಮತ್ತು ಅವುಗಳ ಸಂಸದರ ವಿರುದ್ಧ ನ್ಯಾಯಾಲಯಗಳ ಮುಂದೆ ಹಲವಾರು ಕೇಸ್‌ಗಳು ಇರುವುದರಿಂದ ದೋಷಾರೋಪ ಪಟ್ಟಿಗೆ ನೂರು ಸಂಸದರ ಸಹಿಗಳನ್ನು ಮುಂಗಡವಾಗಿ ಪಡೆಯುವುದು ಕಷ್ಟ ಸಾಧ್ಯ. ಈ ಪದ್ಧತಿಯನ್ನೂ ಬದಲಾಯಿಸಬೇಕೆಂಬ ಚರ್ಚೆ ಬಹಳ ಕಾಲದಿಂದ ನಡೆಯುತ್ತಿದೆ. ಆದರೆ ಇದರ ಬಗ್ಗೆ ಈಗ ಪ್ರಸ್ತಾಪವಾಗಿರುವ ನ್ಯಾಯಮೂರ್ತಿಗಳ ವಿಚಾರಣೆ (ತಿದ್ದುಪಡಿ) ಬಿಲ್ ಕೂಡ ಸೂಕ್ತ ಕ್ರಮವನ್ನು ಮಂಡಿಸಿಲ್ಲ. ಬದಲಾಗಿ ನ್ಯಾಯಮೂರ್ತಿಗಳ ವಿರುದ್ಧದ ಆರೋಪಗಳ ವಿಚಾರಣೆಯನ್ನು ಮೂವರು ಹಿರಿಯ ನ್ಯಾಯಮೂರ್ತಿಗಳು ನಡೆಸತಕ್ಕದ್ದು ಎಂದಿದೆ. ಆದರೆ ಇದರಿಂದಾಗಿ ಮೂರು ನ್ಯಾಯಾಲಯಗಳಲ್ಲಿ ಕಾರ್ಯಕಲಾಪಗಳು ಸ್ಥಗಿತಗೊಳ್ಳುತ್ತವಲ್ಲದೆ, ತಮ್ಮ ಸಹೋದ್ಯೋಗಿಗಳನ್ನೇ ವಿಚಾರಣೆಗೆ ಒಳಪಡಿಸುವುದು ನ್ಯಾಯಮೂರ್ತಿಗಳಿಗೆ ಮುಜುಗರ ಉಂಟುಮಾಡುತ್ತದೆ.

ಈ ಕಾರಣಕ್ಕಾಗಿಯೇ ಕೋಟ್ಯಂತರ ರೂಪಾಯಿಗಳ ಭೂಹಗರಣದಲ್ಲಿ ಭಾಗಿಯಾಗಿದ್ದ ನ್ಯಾಯಮೂರ್ತಿ ಜಗದೀಶ್ ಭಲ್ಲಾ ಮತ್ತು ನ್ಯಾಯಮೂರ್ತಿಗಳ ನೀತಿಸಂಹಿತೆಯನ್ನು ಉಲ್ಲಂಘಿಸಿದ್ದ ನ್ಯಾಯಮೂರ್ತಿ ವಿಜೇಂದ್ರ ಜೈನ್ ವಿರುದ್ಧ ದೂರುಗಳನ್ನು ಸಲ್ಲಿಸಿದ್ದರೂ ಯಾವ ವಿಚಾರಣೆಯೂ ಇಲ್ಲಿಯ ತನಕ ನಡೆಯಲಿಲ್ಲ.

ಈಗ ಪ್ರಸ್ತಾಪಿಸಲಾಗಿರುವ ಬಿಲ್‌ನಲ್ಲೂ ನ್ಯಾಯಮೂರ್ತಿಗಳ ವಿರುದ್ಧ ಆರೋಪ ಮಾಡುವವರು ಪ್ರಮಾಣಪತ್ರದೊಂದಿಗೆ ತಮ್ಮಲ್ಲಿನ ಮಾಹಿತಿಯ ಮೂಲವನ್ನೂ ಬಹಿರಂಗಪಡಿಸಬೇಕು. ಮಾತ್ರವಲ್ಲ ಒಂದು ವೇಳೆ ದೂರು ಕ್ಷುಲ್ಲಕ ಅನ್ನಿಸಿದರೆ ದೂರು ಸಲ್ಲಿಸಿದವನಿಗೆ ಜೈಲು ಶಿಕ್ಷೆ ವಿಧಿಸುವ ಅವಕಾಶವೂ ಇದೆ. ಇಂತಹ ಕಠೋರ ನಿಬಂಧನೆಗಳಿರುವುದರಿಂದ ನ್ಯಾಯಮೂರ್ತಿಗಳ ವಿರುದ್ಧ ಪ್ರಾಮಾಣಿಕರೂ ಆರೋಪ ಮಾಡಲು ಹಿಂಜರಿಯುತ್ತಾರೆ.

ಇದಕ್ಕೂ ಮಿಗಿಲಾಗಿ ಒಂದು ವೇಳೆ ನ್ಯಾಯಮೂರ್ತಿಯೊಬ್ಬರ ವಿರುದ್ಧದ ಆರೋಪಗಳು ಸಾಬೀತಾದರೂ ಆತನನ್ನು ಪಾರ್ಲಿಮೆಂಟ್ ಇಂಪೀಚ್ ಮಾಡಬಹುದೆಂದು ಮಂಡಳಿ ಶಿಫಾರಸ್ಸು ಮಾಡಬಹುದೇ ಹೊರತು ಅದಕ್ಕಿಂತ ಹೆಚ್ಚೇನನ್ನು ಮಾಡಲು ಸಾಧ್ಯವಿಲ್ಲ.

ಈ ಸಮಸ್ಯೆಗೆ ಇರುವ ಉತ್ತರ: ನ್ಯಾಯಮೂರ್ತಿಗಳ ವಿರುದ್ಧ ದೂರುಗಳನ್ನು ಸ್ವೀಕರಿಸಿ, ಆರೋಪಗಳನ್ನು ತನಿಖೆ ಮಾಡಲು ಒಂದು ಸ್ವತಂತ್ರ ಮತ್ತು ಪೂರ್ಣಕಾಲಿಕ ನ್ಯಾಷನಲ್ ಜುಡಿಷಿಯಲ್ ಕಮಿಷನ್ ಅನ್ನು ಸ್ಥಾಪಿಸಬೇಕು. ಆ ಕಮಿಷನ್ ಸರ್ಕಾರದಿಂದಲೂ, ನ್ಯಾಯಾಂಗದಿಂದಲೂ ಪ್ರತ್ಯೇಕವಾಗಿದ್ದು ಸ್ವತಂತ್ರವಾದ ತನಿಖಾ ವ್ಯವಸ್ಥೆಯನ್ನು ಹೊಂದಿರಬೇಕು.

ಪ್ರಶಾಂತ್ ಭೂಷಣ್ ಅವರ ಈ ಸಲಹೆಗಳಿಗೆ ಹಿನ್ನೆಲೆಯೂ ಇದೆ. ಈಗಾಗಲೇ ಹಲವಾರು ನ್ಯಾಯಮೂರ್ತಿಗಳು ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಿಕೊಂಡು ನ್ಯಾಯಾಂಗ ವ್ಯವಸ್ಥೆಗೆ ಅಪಮಾನ ತಂದಿದ್ದಾರೆ. ಈ ಹಿಂದೆ 1990 ರಲ್ಲಿ ನ್ಯಾಯಮೂರ್ತಿ ವಿ. ರಾಮಸ್ವಾಮಿ ಪಂಜಾಬ್ ಮತ್ತು ಹರಿಯಾಣ ಮುಖ್ಯ ನ್ಯಾಯಾಧೀಶರಾಗಿದ್ದಾಗ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆಸಿದ್ದು ವಿಚಾರಣೆಯಿಂದ ಸಾಬೀತಾಗಿತ್ತು. ಆತನ ವಿರುದ್ಧ ಪಾರ್ಲಿಮೆಂಟಿನಲ್ಲಿ ಇಂಪೀಚ್‌ಮೆಂಟ್ ಪ್ರಕ್ರಿಯ ಪ್ರಾರಂಭವಾಗಿತ್ತು. ಆದರೆ ಆಗ ಕಾಂಗ್ರೆಸ್‌ನ ಪ್ರಧಾನಿಯಾಗಿದ್ದ ಪಿ.ವಿ. ನರಸಿಂಹರಾವ್ ತನ್ನ ಚಾಣಾಕ್ಷ ಬುದ್ಧಿ ಪ್ರಯೋಗಿಸಿ ಕಾಂಗ್ರೆಸ್ ಸಂಸದರು ರಾಮಸ್ವಾಮಿಯ ವಿರುದ್ಧ ಮತ ಚಲಾಯಿಸದೇ ಇರುವಂತೆ ನೋಡಿಕೊಂಡಿದ್ದರು. ಹೀಗೆ ಸಂಸದೀಯ ಮತ್ತು ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಕೈ ಮಿಲಾಯಿಸಿದ್ದವು. ಹೀಗಾಗಿ ರಾಮಸ್ವಾಮಿ ವಿರುದ್ಧ ಯಾವ ಕ್ರಮವೂ ಜಾರಿಗೊಳ್ಳಲಿಲ್ಲ. ಮಾತ್ರವಲ್ಲ ಆ ಕಳಂಕಿತ ನ್ಯಾಯಮೂರ್ತಿ ತನ್ನ ಹುದ್ದೆಯಲ್ಲಿ ಮೂರು ವರ್ಷಗಳ ಕಾಲ ಮುಂದುವರೆದು ನಿವೃತ್ತಿ ಹೊಂದಿದರು.

ಇದಾದನಂತರ ರಾಮಸ್ವಾಮಿ ಸಂಸತ್ತಿನ ಚುನಾವಣೆಯಲ್ಲಿ ಎಐಎಡಿಎಂಕೆ ಅಭ್ಯರ್ಥಿಯಾಗಿ ಶಿವಕಾಶಿಯಿಂದ ಸ್ಪರ್ಧಿಸಿದ್ದರು. (ಪ್ರಾಯಶಃ ಸಂಸತ್ತೇ ತನ್ನಂತಹ ಕಳ್ಳರಿಗೆ ಸೂಕ್ತ ಜಾಗ ಎನಿಸಿರಬಹುದು ಅವರಿಗೆ). ಸದ್ಯ ಕಾಂಗ್ರೆಸ್ ಸಂಸದರಿಗಿಂತ ಹೆಚ್ಚು ಧೈರ್ಯ ಮತ್ತು ಜಾಣ್ಮೆ ಹೊಂದಿದ್ದ ಶಿವಕಾಶಿಯ ಮತದಾರರು ರಾಮಸ್ವಾಮಿಯನ್ನು ಸೋಲಿಸಿದ್ದರು.

ಇನ್ನೊಮ್ಮೆ ರಾಜಸ್ಥಾನದ ನ್ಯಾಯಾಧೀಶ ಮತ್ತು ಆತನ ರಿಜಿಸ್ಟ್ರಾರ್ ಇಬ್ಬರೂ ಜೊತೆಗೂಡಿ ಮಹಿಳೆ ವೈದ್ಯೆಯೊಬ್ಬರಿಂದ ಲೈಂಗಿಕ ಸಂಬಂಧವನ್ನು ಬಯಸಿದ್ದರು. ಆಗ ಸುಪ್ರೀಂಕೋರ್ಟಿನ ಸಮಿತಿಯೊಂದು ವಿಚಾರಣೆ ನಡೆಸಿ ಅವರಿಬ್ಬರು ಅಪರಾಧಿಗಳು ಎಂದಿತ್ತು. ಆಗಲೂ ನ್ಯಾಯಾಧೀಶನ ವಿರುದ್ಧ ಯಾವ ಕ್ರಮವನ್ನೂ ಕೈಗೊಂಡಿರಲಿಲ್ಲ. ಆತ ತನ್ನ ರಾಜೀನಾಮೆ ಪತ್ರವನ್ನು ಬಿಸಾಡಿ ಹೊರಟುಹೋಗಿದ್ದ.


ದೆಹಲಿ ಹೈಕೋರ್ಟಿನ ನ್ಯಾಯಾಧೀಶರೊಬ್ಬರು ರಿಯಲ್ ಎಸ್ಟೇಟ್ ಖದೀಮರೊಂದಿಗೆ ಕೈಜೋಡಿಸಿ ಭ್ರಷ್ಟಾಚಾರದಲ್ಲಿ ತೊಡಗಿದ್ದೂ ಬಹಿರಂಗಗೊಂಡಿತ್ತು. ಇದಾಗಿ ಇವತ್ತಿಗೆ ಹತ್ತು ವರ್ಷಗಳೇ ಉರುಳಿದ್ದರೂ ಆ ಹಗರಣ ಕುರಿತ ವಿಚಾರಣೆಯೇ ಇನ್ನೂ ಆರಂಭವಾಗಿಲ್ಲ.

ಇದೆಲ್ಲದರೊಂದಿಗೆ ಸುಪ್ರೀಂಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶ ಸಭರ್‌ವಾಲ್ ತಮ್ಮ ಪುತ್ರರ ಬಿಸಿನೆಸ್ ಅಭಿವೃದ್ಧಿಗೆ ನೀಡಿದ ತೀರ್ಪು; ಅಶೋಕ್‌ಕುಮಾರ್ ಎಂಬುವವರು ಅಪ್ರಾಮಾಣಿಕರು ಎಂಬ ಗುಮಾನಿ ಇದ್ದರೂ ಅವರನ್ನು ಸುಪ್ರೀಂಕೋರ್ಟಿನ ನ್ಯಾಯಮೂರ್ತಿಯಾಗಿ ನೇಮಿಸಲು ನಿರ್ಧರಿಸಿದ್ದು; ನಕಲಿ ಸಹಿ ಹಾಕಿ ಸಿಕ್ಕಿಬಿದ್ದಿದ್ದ ಅಶ್ವಿನ್ ಕುಮಾರ್ ಎಂಬುವವರನ್ನು ದೆಹಲಿ ಹೈಕೋರ್ಟಿಗೆ ನ್ಯಾಯಾಧೀಶರಾಗಿ ನೇಮಿಸಿದ್ದು; ಕೊಲ್ಕತ್ತಾ ಹೈಕೋರ್ಟಿನ ನ್ಯಾಯಾಧೀಶ ಸೌಮಿತ್ರ ಸೇನ್‌ರನ್ನು ಇಂಪೀಚ್ ಮಾಡಬೇಕೆಂದು ಹೋದ ವರ್ಷವೇ ನ್ಯಾಯಮೂರ್ತಿಗಳ ಮಂಡಳಿ ಶಿಫಾರಸ್ಸು ಮಾಡಿದ್ದರೂ ಅದಿನ್ನೂ ಆಗದಿರುವುದು.... ಇಂತಹವನ್ನೆಲ್ಲ ಸೇರಿಸುತ್ತಾ ಹೋದರೆ ನಮ್ಮ ನ್ಯಾಯಾಂಗವನ್ನು ತುರ್ತಾಗಿ ಸ್ವಚ್ಛಗೊಳಿಸುವ ಅವಶ್ಯಕತೆ ಯಾರಿಗಾದರೂ ಅರ್ಥವಾಗುತ್ತದೆ.

ಪ್ರಶಾಂತ್ ಭೂಷಣ್ ಹೇಳುವಂತೆ "ಪ್ರಾಮಾಣಿಕ ನ್ಯಾಯಾಂಗಕ್ಕೆ ಆಶಿಸುವ ಸಾಮಾನ್ಯ ಜನರೆಲ್ಲ ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ಪಾರದರ್ಶಕತೆ ಮತ್ತು ಭ್ರಷ್ಟ ನ್ಯಾಯಾಧೀಶರ ವಿಚಾರಣೆ ನಡೆಸುವಂತೆ ನೋಡಿಕೊಳ್ಳಲು ಸೂಕ್ತವಾದ ಸ್ವತಂತ್ರ ಸಂಸ್ಥೆಗಳನ್ನು ರಚಿಸಬೇಕೆಂದು ಆಗ್ರಹಿಸುವ ಸಮಯ ಈಗ ಕೂಡಿಬಂದಿದೆ."

●

ಧರ್ಮಸ್ಥಳದ ಢೋಂಗಿ ಸಾಧನೆ...



'ಧರ್ಮಸ್ಥಳ ಹೆಗ್ಗಡೆಯವರೇ ಸಿ.ಎಂ. ಆಗಲಿ' ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿರುವುದಕ್ಕೆ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಕಾರಕ್ಕಿಂತ ಮಿಗಿಲಾದ ಸಂಸ್ಥೆ ಯಾವುದೂ ಇಲ್ಲ, ಇರಲೂಬಾರದು. ಇತ್ತೀಚೆಗೆ ಕೆಲವು ಮಂತ್ರಿಗಳಿಗೆ- ಮುಖ್ಯಮಂತ್ರಿಯೂ ಸೇರಿ-ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯನ್ನು, ಶ್ರೀ ವೀರೇಂದ್ರ ಹೆಗ್ಗಡೆಯವರನ್ನು 'ಆದರ್ಶ', 'ಮಾದರಿ' ಎಂದು ಹೊಗಳುವುದು ಅಭ್ಯಾಸವಾಗಿದೆ. ಜತೆಗೆ ಅಧಿಕಾರಿಗಳನ್ನು, ಜನಪ್ರತಿನಿಧಿಗಳನ್ನು ಕೀಳಾಗಿ ಬಿಂಬಿಸುವುದೂ ರೂಢಿಯಾಗಿಬಿಟ್ಟಿದೆ.

ಧರ್ಮಸ್ಥಳದ 'ಸಿರಿ' ಗ್ರಾಮಾಭಿವೃದ್ಧಿ ಯೋಜನೆ (ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಎಸ್‌ಜಿಎಸ್‌ವೈ ಯೋಜನೆ ಪ್ರಕಾರ ರೂ. 14.67 ಕೋಟಿ ಮಂಜೂರಾಗಿ ಇದರಲ್ಲಿ ರೂ.9 ಕೋಟಿಯಷ್ಟು ಬಿಡುಗಡೆಯಾಗಿತ್ತು) ವಿಫಲಗೊಂಡಿರುವುದು ಎಲ್ಲರಿಗೂ ತಿಳಿದಿದೆ. ಆಧಾರಗಳೂ ಇವೆ. ಇಷ್ಟಾದರೂ ಇದನ್ನು ಆದರ್ಶವೆಂದು ಹೇಳುವುದರಲ್ಲಿ ಅರ್ಥ ಇಲ್ಲ.

ಸುಮಾರು 800 ಕೋಟಿ ರೂಪಾಯಿ ಸಾಲವನ್ನು ವಿವಿಧ ಬ್ಯಾಂಕ್‌ಗಳಿಂದ ಪಡೆದು ಸ್ವ-ಸಹಾಯ ಸಂಘಗಳಿಗೆ ಸಾಲಕೊಡುವ ಎಸ್‌ಕೆಡಿಆರ್‌ಡಿಪಿ ಒಂದು ಸ್ವಯಂಸೇವಾ ಸಂಸ್ಥೆ ಎಂದು ಹೇಳುವ ಬದಲು ಒಂದು ಬ್ಯಾಂಕ್ ಎಂದೇ ಹೇಳಬೇಕು. ಇದು ಆದರ್ಶ ಹೇಗಾಗುತ್ತದೆ? ಬಡ್ಡಿರಹಿತ ಸಾಲಕೊಟ್ಟಲ್ಲಿ ಮೆಚ್ಚಬಹುದು. ಆದರೆ 8% ಬಡ್ಡಿಯಲ್ಲಿ ಪಡೆದ ಸಾಲ 12ರಿಂದ 14% ಬಡ್ಡಿಗೆ ಕೊಡುವುದು 'ಗ್ರಾಮೀಣಾಭಿವೃದ್ಧಿ' ಹೇಗಾಗುತ್ತದೆ?

ಯಾವುದೇ ಒಂದು ಎನ್‌ಜಿಒ ಅಥವಾ ಧರ್ಮಪೀಠ ಸರ್ಕಾರಕ್ಕೆ ಪರ್ಯಾಯವಾಗಲು ಸಾಧ್ಯವಿಲ್ಲ. ಇಂತಹ ಚಿಂತನೆಯೇ ತಪ್ಪು. ಜನಪ್ರತಿನಿಧಿಗಳು, ಸರ್ಕಾರ ಸರಿಯಾಗಿ ಕಾರ್ಯನಿರ್ವಹಿಸದಿದ್ದರೆ, ಮತದಾರರಿಗೆ, ಪ್ರಜೆಗಳಿಗೆ ಇವರನ್ನು ಬದಲಾಯಿಸುವ ಹಕ್ಕು ಇದೆ. ಭಾರತದ ಪ್ರಜೆಗಳು ಅದನ್ನು ಮಾಡಿದ್ದಾರೆ. ಮುಂದೆಯೂ ಮಾಡುತ್ತಾರೆ.

ಇನ್ನಾದರೂ ಜನಪ್ರತಿನಿಧಿಗಳು ಸರ್ಕಾರವನ್ನು, ಅಧಿಕಾರಿಗಳನ್ನು ಹೀಯಾಳಿಸುತ್ತಾ ಧರ್ಮಸ್ಥಳವನ್ನು ಹೊಗಳುತ್ತಾ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದನ್ನು ನಿಲ್ಲಿಸಲಿ.

-ಕೆ.ಸೋಮನಾಥ ನಾಯಕ್, ಅಧ್ಯಕ್ಷ, ನಾಗರಿಕ ಸೇವಾ ಟ್ರಸ್ಟ್, ಗುರುವಾಯನಕೆರೆ ●


ಹಳೆ ಹುಲಿಯ ಘರ್ಜನೆ



ಅಂತರರಾಷ್ಟ್ರೀಯ ಕ್ರಿಕೆಟ್ ಲೋಕದಲ್ಲಿ ತೆಂಡೂಲ್ಕರ್ ಸದಾ ಮಿನುಗುವ ಧ್ರುವತಾರೆ. ಅವರ ಕ್ರಿಕೆಟ್ ಸಾಧನೆ ಕ್ರಿಕೆಟ್ ಪ್ರಿಯರ ಮೈನವಿರೇಳಿಸುವಂತಹದ್ದು. ಅದು ಟೆಸ್ಟ್ ಕ್ರಿಕೆಟ್ ಇರಲಿ, ಏಕದಿನ ಕ್ರಿಕೆಟ್ ಇರಲಿ ಎರಡರಲ್ಲೂ ಅಮೋಘ ಸಾಧನೆ ಮಾಡಿ ಇಡೀ ವಿಶ್ವವೇ ನಿಬ್ಬೆರಗಾಗುವಂತೆ ಮಾಡಿದ್ದಾರೆ.


ಹಳೆ ಹುಲಿ ಸಚಿನ್ ತೆಂಡೂಲ್ಕರ್ ಮತ್ತೆ ಘರ್ಜಿಸಿದ್ದಾರೆ. ಮೊನ್ನೆ ಸೋಮವಾರ ಶ್ರೀಲಂಕಾದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಕಾಂಪ್ಯಾಕ್ ಚಾಂಪಿಯನ್‌ಷಿಪ್ ಏಕದಿನ ಕ್ರಿಕೆಟ್ ಸರಣಿಯ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ಬೌಲರ್‌ಗಳ ಬೆವರಿಳಿಸಿದ ತೆಂಡೂಲ್ಕರ್ 133 ಎಸೆತಗಳಲ್ಲಿ ಬರೊಬ್ಬರಿ 138 ರನ್ ಹರಿಸಿ ಮಹೇಂದ್ರ ಸಿಂಗ್ ಧೋನಿ ಪಡೆಗೆ ಸರಣಿ ಗೆದ್ದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಇದು ತೆಂಡೂಲ್ಕರ್ ಅವರ 44ನೇ ಶತಕ. ಈ ಮೂಲಕ ತೆಂಡೂಲ್ಕರ್ ನಿವೃತ್ತಿ ಘೋಷಿಸಿ ಹೊಸ ಮುಖಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಬೊಬ್ಬೆಯಿಡುತ್ತಿದ್ದವರ ಬಾಯ್ಮುಚ್ಚಿಸಿದ್ದಾರೆ. ಮೊನ್ನೆ ಅವರ ಆಟವನ್ನು ನೋಡಿದವರು ಅಕ್ಷರಶಃ ಹಬ್ಬವನ್ನಾಚರಿಸಿರುವುದು ನಿಜ. 36 ವರ್ಷ ವಯಸ್ಸಿನ ತೆಂಡೂಲ್ಕರ್ ಅಕ್ಷರಶಃ ತಾವು 25 ವರ್ಷದವರಿದ್ದಾಗ ಹೇಗೆ ಭರ್ಜರಿಯಾಗಿ ಆಡುತ್ತಿದ್ದರೋ ಅಷ್ಟೇ ಭರ್ಜರಿಯಾಗಿ ಆಡಿದರು. ತೆಂಡೂಲ್ಕರ್ ಸಧ್ಯಕ್ಕೆ ನಿವೃತ್ತಿಯಾಗದಿರಲಿ ಎಂದು ಬಹಳಷ್ಟು ಜನ ಆಶಿಸಿದ್ದಿರಬೇಕು.

ಅಂತರರಾಷ್ಟ್ರೀಯ ಕ್ರಿಕೆಟ್ ಲೋಕದಲ್ಲಿ ತೆಂಡೂಲ್ಕರ್ ಸದಾ ಮಿನುಗುವ ಧ್ರುವತಾರೆ. ಅವರ ಕ್ರಿಕೆಟ್ ಸಾಧನೆ ಕ್ರಿಕೆಟ್ ಪ್ರಿಯರ ಮೈನವಿರೇಳಿಸುವಂತಹದ್ದು. ಅದು ಟೆಸ್ಟ್ ಕ್ರಿಕೆಟ್ ಇರಲಿ, ಏಕದಿನ ಕ್ರಿಕೆಟ್ ಇರಲಿ ಎರಡರಲ್ಲೂ ಅಮೋಘ ಸಾಧನೆ ಮಾಡಿ ಇಡೀ ವಿಶ್ವವೇ ನಿಬ್ಬೆರಗಾಗುವಂತೆ ಮಾಡಿದ್ದಾರೆ. ಅವರು ಇನ್ನು ಐದು ವರ್ಷ ಕ್ರಿಕೆಟ್ ಆಡಿದರೆ ಸಾಕು ಟೆಸ್ಟ್ ಮತ್ತು ಏಕದಿನ ಕ್ರಿಕೆಟ್‌ನ ಬ್ಯಾಟಿಂಗ್‌ನಲ್ಲಿ ಇಲ್ಲಿಯತನಕ ದಾಖಲಾಗಿರುವ ಎಲ್ಲಾ ವಿಶ್ವ ದಾಖಲೆಗಳಲ್ಲಿ ಶೇ.90ರಷ್ಟು ತೆಂಡೂಲ್ಕರ್ ಹೆಸರಿಗೆ ಪರಿವರ್ತನೆಯಾಗುವುದು ದಿಟ. ಈಗಾಗಲೇ ಅರ್ಧಕ್ಕಿಂತ ಹೆಚ್ಚು ದಾಖಲೆಗಳು ಅವರ ಹೆಸರಿನಲ್ಲೇ ಇವೆ. 1989ರ ಡಿಸೆಂಬರ್ 18ರಂದು ಪಾಕಿಸ್ತಾನದ ಜಿನ್ನಾ ಸ್ಟೇಡಿಯಂನಲ್ಲಿ ತಮ್ಮ ಮೊಟ್ಟಮೊದಲ ಅಂತರರಾಷ್ಟ್ರೀಯ ಏಕದಿನ ಪಂದ್ಯವಾಡುವುದಕ್ಕೆ ಕಾಲಿಟ್ಟಾಗ ಅವರಿಗೆ ಕೇವಲ 16 ವರ್ಷ. ಅವತ್ತು ಗಾಬರಿಗೊಂಡ ಮುಖ ಹೊತ್ತೇ ಕ್ರೀಜ್‌ಗೆ ಬಂದಿದ್ದ ಸಚಿನ್ ಕೇವಲ 15 ರನ್ ಗಳಿಸಿ ವಾಕರ್ ಯೂನಿಸ್‌ಗೆ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಮರಳಿದ್ದರು. ವಿಶೇಷ ಎಂದರೆ ವಾಕರ್ ಯೂನಿಸ್‌ಗೂ ಅದು ಮೊಟ್ಟ ಮೊದಲ ಅಂತರರಾಷ್ಟ್ರೀಯ ಪಂದ್ಯವಾಗಿತ್ತು. ಮುಂದಿನ ಕೆಲವೇ ವರ್ಷಗಳಲ್ಲಿ ಮುಂಬೈನ ಈ ಹುಡುಗ ಇಡೀ ವಿಶ್ವದ ಕ್ರಿಕೆಟ್ ಪ್ರಿಯರೆಲ್ಲಾ ತನ್ನತ್ತ ನೋಡುವಂಥ ಅಮೋಘ ಸಾಧನೆ ಮಾಡುತ್ತಾನೆಂದೂ ಪ್ರಾಯಶಃ ಯಾರೂ ಭಾವಿಸಿರಲಿಲ್ಲ. ತೆಂಡೂಲ್ಕರ್ ಅದನ್ನು ಮಾಡಿ ತೋರಿಸಿದರು.



ಏಕದಿನ ಕ್ರಿಕೆಟ್‌ನಲ್ಲಿ ಅವರ ಸಾಧನೆಯನ್ನೇ ನೋಡಿ. ಇಲ್ಲಿಯತನಕ ಅವರು ಆಡಿದ್ದು 428 ಪಂದ್ಯಗಳನ್ನು. ಈ ಪಂದ್ಯಗಳಲ್ಲಿ ಅವರು ಗಳಿಸಿದ್ದು ಒಟ್ಟು 16,895 ರನ್‌ಗಳನ್ನು. ಇದೊಂದು ವಿಶ್ವದಾಖಲೆ. ಎರಡನೇ ಸ್ಥಾನದಲ್ಲಿ 13,343 ರನ್ ಗಳಿಸಿರುವ ಶ್ರೀಲಂಕಾದ ಜಯಸೂರ್ಯ ಇದ್ದರೆ ಮೂರನೇ ಸ್ಥಾನದಲ್ಲಿ 11,697 ರನ್ ಗಳಿಸಿರುವ ಆಸ್ಟ್ರೇಲಿಯದ ರಿಕಿ ಪಾಂಟಿಂಗ್ ಇದ್ದಾರೆ. ಈ ಇಬ್ಬರೂ ಆಟಗಾರರು ಈಗ ನಿವೃತ್ತಿಯ ಅಂಚಿಗೆ ಬಂದಿರುವುದರಿಂದ ತೆಂಡೂಲ್ಕರ್ ಅವರ ದಾಖಲೆಯನ್ನು ಮುರಿದು ನಿವೃತ್ತಿಯಾಗುವುದು ಕನಸಿನ ಮಾತು. ವಿಶ್ವದಲ್ಲಿ ಕೇವಲ ಎಂಟು ಆಟಗಾರರು ಮಾತ್ರವೇ 10,000 ರನ್‌ಗಳ ಗಡಿ ದಾಟಿದ್ದಾರೆ. ಸಚಿನ್ ಈ ಗಡಿ ದಾಟಿದ ಮೊದಲಿಗ. ಉಳಿದ ಏಳು ಜನರಲ್ಲಿ ಭಾರತೀಯರು ಇಬ್ಬರಿದ್ದಾರೆ (ಸೌರವ್ ಗಂಗೂಲಿ ಹಾಗೂ ರಾಹುಲ್ ದ್ರಾವಿಡ್). ಸಚಿನ್ ಅವರ ಇನ್ನೊಂದು ವಿಶೇಷ ಎಂದರೆ ವಿಶ್ವದಲ್ಲಿ ಕ್ರಿಕೆಟ್ ಆಡುತ್ತಿರುವ ಎಲ್ಲಾ ಪ್ರಮುಖ ದೇಶಗಳ ವಿರುದ್ಧವೂ ಅವರು ಒಂದು ಸಾವಿರಕ್ಕಿಂತ ಹೆಚ್ಚು ರನ್ ಗಳಿಸಿದ್ದಾರೆ.







ಅಂತೆಯೇ ತೆಂಡೂಲ್ಕರ್ ಒಟ್ಟು 44 ಏಕದಿನ ಅಂತರರಾಷ್ಟ್ರೀಯ ಶತಕಗಳನ್ನು ಸಿಡಿಸಿದ್ದಾರೆ. ಇದೂ ಕೂಡ ಒಂದು ವಿಶ್ವದಾಖಲೆ. 28 ಶತಕಗಳನ್ನು ಗಳಿಸಿರುವ ಜಯಸೂರ್ಯ ಮತ್ತು 27 ಶತಕಗಳನ್ನು ಗಳಿಸಿರುವ ರಿಕಿ ಪಾಂಟಿಂಗ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ. ಮೇಲ್ನೋಟಕ್ಕೇ ಕಾಣುವಂತೆ ನಿವೃತ್ತಿಯಾಗುವುದರೊಳಗೆ ಈ ಇಬ್ಬರೂ ತೆಂಡೂಲ್ಕರ್ ದಾಖಲೆಯ ಹತ್ತಿರ ಸುಳಿಯುವುದೂ ಸಾಧ್ಯವಿಲ್ಲ. ಹೀಗಾಗಿ, ತೆಂಡೂಲ್ಕರ್ ಅವರ ಶತಕಗಳ ವಿಶ್ವದಾಖಲೆ ಒಂದು-ಶತಮಾನ ಹಾಗೇ ಉಳಿಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಇನ್ನೊಂದು ವಿಶೇಷ ನೋಡಿ. ತೆಂಡೂಲ್ಕರ್ ತೊಂಭತ್ತರ ಗಡಿ ದಾಟಿ ಶತಕ ಬಾರಿಸದೇ 17 ಬಾರಿ ಔಟ್ ಆಗಿದ್ದಾರೆ. ಇದೂ ಕೂಡ ಒಂದು ವಿಶ್ವದಾಖಲೆಯೆಂದೇ ಹೇಳಬಹುದು. ಅವೆಲ್ಲವೂ ಶತಕಗಳಾಗಿ ಪರಿವರ್ತನೆಗೊಂಡಿದ್ದರೆ ಶತಕಗಳ ಸಂಖ್ಯೆ ಅರ್ಧಶತಕ ದಾಟಿ ಅದ್ಯಾವ ಕಾಲವಾಗಿರುತ್ತಿತ್ತೋ? ಯಾವುದೇ ಒಂದು ದೇಶದ ವಿರುದ್ಧ ಅತಿ ಹೆಚ್ಚು ಶತಕ ಗಳಿಸಿದ ವಿಶ್ವದಾಖಲೆಯೂ ಸಚಿನ್ ಹೆಸರಿನಲ್ಲಿದೆ. ಹತ್ತಾರು ವರ್ಷಗಳ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್ ಲೋಕವನ್ನಾಳಿದ ಹಾಗೂ ವಿಶ್ವದ ಬಲಿಷ್ಠ ತಂಡವೆನಿಸಿದ ಆಸ್ಟ್ರೇಲಿಯದ ವಿರುದ್ಧವೇ ಸಚಿನ್ ಒಟ್ಟು 8 ಶತಕಗಳನ್ನು ಸಿಡಿಸಿದ್ದಾರೆ! ಅರ್ಧ ಶತಕದಲ್ಲೂ ಸಚಿನ್ ಅವರದ್ದು ವಿಶ್ವದಾಖಲೆ. ಅವರು ಒಟ್ಟು 91 ಅರ್ಧಶತಕಗಳನ್ನು ಸಿಡಿಸಿ ಈ ಸಾಧನೆ ಮಾಡಿದ್ದಾರೆ.

ಸಚಿನ್ ಹೆಸರಿನಲ್ಲಿರುವ ಇನ್ನೊಂದು ವಿಶ್ವದಾಖಲೆ ಎಂದರೆ ಅತ್ಯಂತ ಹೆಚ್ಚು ಬಾರಿ ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಗಳಿಸಿದ್ದು. ಇಲ್ಲಿಯತನಕ ಅವರು ಒಟ್ಟು 59 ಬಾರಿ ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತದ ಗೆಲುವಿಗೆ ಕಾರಣವಾಗಿ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಶ್ರೀಲಂಕಾದ ಆಲ್‌ರೌಂಡರ್ ಸನತ್ ಜಯಸೂರ್ಯ ಒಟ್ಟು 48 ಬಾ[illegible] ಹಾಗೂ ವೆಸ್ಟ್ ಇಂಡೀಸ್‌ನ ಧ್ರುವತಾರೆ ರಿಚರ್ಡ್ಸ್ 31 ಬಾರಿ [illegible] ಪ್ರಶಸ್ತಿಯನ್ನು ಪಡೆದುಕೊಂಡು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ. ಜಯಸೂರ್ಯ ನಿವೃತ್ತಿಯ ಅಂಚಿಗೆ ಬಂದಿರುವುದರಿಂ[illegible] ಹಾಗೂ ರಿಚರ್ಡ್ಸ್ ನಿವೃತ್ತಿಯಾಗಿ ಎಷ್ಟೋ ವರ್ಷಗಳು ಕಳೆದಿರುವುದರಿಂ[illegible] ಸಚಿನ್ ಅವರ ಈ ದಾಖಲೆ ಅಜರಾಮರವಾಗಿ ಉಳಿಯಲಿದೆ. ಅಂತೆಯೇ ಏಕದಿನ ಅಂತರರಾಷ್ಟ್ರೀಯ ಸರಣಿಗಳಲ್ಲೂ ಸಚಿನ್ ಅಮೋಘ ಸಾಧ[illegible] ಮಾಡಿದ್ದಾರೆ. ಒಟ್ಟು 14 ಬಾರಿ ಸರಣಿಗಳಲ್ಲಿ ಭಾರತದ ಗೆಲುವಿಗೆ ಕಾರಣವಾ[illegible] ಸರಣಿ ಶ್ರೇಷ್ಠ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಈ ಪ್ರಶಸ್ತಿಯನ್ನು ಹನ್ನೊಂದು ಬಾರಿ ಗೆದ್ದ ಲಂಕಾದ ಜಯಸೂರ್ಯ ಹಾಗೂ ಒಂಭತ್ತು ಬಾರಿ ಗೆದ್ದ ದಕ್ಷಿಣ ಆಫ್ರಿಕದ ಶಾನ್ ಪೊಲಾಕ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಒಂದು ತಂಡದಲ್ಲಿ ನಿರಂತರವಾಗಿ ಅತಿ ಹೆಚ್ಚು ಏಕದಿನ ಅಂತರರಾಷ್ಟ್ರೀಯ ಪಂದ್ಯವನ್ನಾಡಿದ ವಿಶ್ವದಾಖಲೆಯೂ ಸಚಿನ್ ಹೆಸರಿನಲ್ಲಿದೆ. 1990ರ ಏಪ್ರಿಲ್ 25ರಿಂದ ಹಿಡಿದು 1998ರ ಏಪ್ರಿಲ್ 24ರ ತನಕ ಭಾರತ ತಂಡ ಆಡಿದ ಎಲ್ಲಾ 185 ಪಂದ್ಯಗಳಲ್ಲೂ ಸಚಿನ್ ಆಡುವ ಮೂಲಕ ಈ ದಾಖಲೆ ಬರೆದಿದ್ದಾರೆ. ನಿರಂತರ 172 ಪಂದ್ಯಗಳನ್ನು ಆಡಿದ ಜಿಂಬಾಬ್ವೆಯ ಎ.ಫ್ಲವರ್ ಎರಡನೇ ಸ್ಥಾನದಲ್ಲಿದ್ದಾರೆ. ಈ ದಾಖಲೆಯನ್ನು ಮುರಿಯುವ ಜನ ಸದ್ಯಕ್ಕೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಎಲ್ಲೂ ಕಾಣಸಿಗುವುದಿಲ್ಲ.

ಒಂದು ಕ್ಯಾಲೆಂಡರ್ ವರ್ಷದಲ್ಲಿ ಒಂದು ಸಾವಿರಕ್ಕೂ ಹೆಚ್ಚು ರನ್‌ಗಳನ್ನು ಅತಿ ಹೆಚ್ಚು ಬಾರಿ ಗಳಿಸಿದ ವಿಶ್ವದಾಖಲೆಯೂ ಸಚಿನ್ ಹೆಸರಿನಲ್ಲಿದೆ. ಸಚಿನ್ ಒಟ್ಟು ಏಳು ಬಾರಿ ಈ ಸಾಧನೆ ಮಾಡಿದ್ದಾರೆ (1994, 1996, 1997, 1998, 2000, 2003 ಹಾಗೂ 2007).

ಟೆಸ್ಟ್ ಕ್ರಿಕೆಟ್‌ನಲ್ಲೂ ಸಚಿನ್ ಮಾಡಿದ ವಿಶ್ವದಾಖಲೆಗಳು ಶತಮಾನಗಳ ಕಾಲ ಅಜರಾಮರವಾಗಿ ಉಳಿಯಲಿವೆ. ಇಲ್ಲಿಯತನಕ ಒಟ್ಟು 159 ಟೆಸ್ಟ್ ಪಂದ್ಯಗಳನ್ನಾಡಿದ್ದಾರೆ. ಆಸ್ಟ್ರೇಲಿಯದ ಸ್ಟೀವ್ ವಾ ಒಟ್ಟು 168 ಪಂದ್ಯಗಳನ್ನಾಡಿ ಮೊದಲ ಸ್ಥಾನದಲ್ಲಿದ್ದರೆ ಸಚಿನ್ ಸದ್ಯ ಎರಡನೇ ಸ್ಥಾನದಲ್ಲಿದ್ದಾರೆ. ಆದರೆ ಸ್ಟೀವ್ ವಾ ಈಗ ನಿವೃತ್ತಿ ಹೊಂದಿ ಹಲವು ವರ್ಷಗಳೇ ಸಂದಿರುವುದರಿಂದ ಇನ್ನೊಂದೆರಡು ವರ್ಷಗಳಲ್ಲಿ ಈ ದಾಖಲೆಯೂ ಸಚಿನ್ ಹೆಸರಿಗೆ ಬರಲಿದೆ. ಭಾರತದ ಕಪಿಲ್ ದೇವ್ ಮತ್ತು ರಾಹುಲ್ ದ್ರಾವಿಡ್ ತಲಾ 131 ಪಂದ್ಯಗಳನ್ನಾಡಿ ಎರಡನೇ ಸ್ಥಾನದಲ್ಲಿದ್ದಾರೆ.

ಟೆಸ್ಟ್ ರನ್‌ಗಳ ವಿಚಾರದಲ್ಲೂ ಸಚಿನ್ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಇಲ್ಲಿಯ ತನಕ ಅವರು ಒಟ್ಟು 12,773 ರನ್‌ಗಳನ್ನು ಗಳಿಸುವ ಮೂಲಕ ಈ ಸಾಧನೆ ಮಾಡಿದ್ದಾರೆ. ಇದರೊಂದಿಗೆ ಅಲ್ಲಿಯತನಕ ಕ್ರಿಕೆಟ್ ಲೋಕದಲ್ಲಿ ದಂತಕತೆಯಾಗಿದ್ದ ವೆಸ್ಟ್ ಇಂಡೀಸ್‌ನ ಬ್ರಿಯಾನ್ ಲಾರಾ ಅವರ ಹೆಸರಿನಲ್ಲಿದ್ದ ದಾಖಲೆಯನ್ನು ಅಳಿಸಿ ಹಾಕಿದರು. ಅಲ್ಲದೇ ವಿದೇಶದಲ್ಲಿ ಅತ್ಯಂತ ಹೆಚ್ಚು ಟೆಸ್ಟ್ ರನ್ ಗಳಿಸಿರುವ ದಾಖಲೆಯನ್ನೂ ಸಚಿನ್ ಮಾಡಿದ್ದಾರೆ. ಬ್ರಿಯಾನ್ ಲಾರಾ ಒಟ್ಟು 5736 ರನ್ ಗಳಿಸುವ ಮೂಲಕ ಮಾಡಿದ್ದ ವಿಶ್ವದಾಖಲೆಯನ್ನು ಸಚಿನ್ ಮುರಿದು 7165 ರನ್ ಮಾಡಿದ್ದಾರೆ.

ಇನ್ನು ಟೆಸ್ಟ್ ಶತಕಗಳ ವಿಚಾರಕ್ಕೆ ಬಂದರೂ ಸಚಿನ್ ಅವರ ಹೆಸರು ಅನುರಣಿಸುತ್ತದೆ. ಇಲ್ಲಿಯತನಕ ಅವರು ಸಿಡಿಸಿರುವ ಶತಕಗಳ ಸಂಖ್ಯೆ 42. ಈ ದಾಖಲೆಯ ಹತ್ತಿರ ಇರುವವರೆಂದರೆ 37 ಶತಕ ಸಿಡಿಸಿರುವ ಆಸ್ಟ್ರೇಲಿಯದ ರಿಕಿ ಪಾಂಟಿಂಗ್ ಹಾಗೂ ತಲಾ 34 ಶತಕ ಮಾಡಿರುವ ಭಾರತದ ಸುನೀಲ್ ಗವಾಸ್ಕರ್ ಮತ್ತು ವೆಸ್ಟ್ ಇಂಡೀಸ್‌ನ ಬ್ರಿಯಾನ್ ಲಾರಾ. ಗವಾಸ್ಕರ್ ಮತ್ತು ಲಾರಾ ಇಬ್ಬರೂ ನಿವೃತ್ತಿ ಹೊಂದಿದ್ದರೆ ರಿಕಿ ಪಾಂಟಿಂಗ್ ಇನ್ನೂ ಆಡುತ್ತಿದ್ದಾರೆ. ಆದರೆ, ಸಚಿನ್ ಕೂಡ ಇನ್ನೂ ಆಡುತ್ತಿರುವುದರಿಂದ ಈ ದಾಖಲೆಯನ್ನು ಸದ್ಯಕ್ಕೆ ಮುರಿಯುವುದು ಕಷ್ಟ. ತೆಂಡೂಲ್ಕರ್ 20 ವರ್ಷ ತುಂಬುವ ಮೊದಲೇ ಐದು ಟೆಸ್ಟ್ ಸೆಂಚೂರಿ ಬಾರಿಸಿದ್ದು ಇನ್ನೂ ವಿಶ್ವದಾಖಲೆಯಾಗಿಯೇ ಉಳಿದಿದೆ. ಅಲ್ಲದೇ ಟೆಸ್ಟ್ ಆಡುವ ಎಲ್ಲಾ ದೇಶಗಳ ವಿರುದ್ಧವೂ ಶತಕ ಬಾರಿಸಿದ್ದೂ ಕೂಡ ತೆಂಡೂಲ್ಕರ್ ಅವರ ವಿಶ್ವದಾಖಲೆಯಾಗಿದೆ. ಪಾಕಿಸ್ತಾನದ ಜಾವೆದ್ ಮಿಯಾಂದಾದ್ 20 ವರ್ಷ 272 ದಿನಗಳ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್ ಆಡಿ ವಿಶ್ವದಾಖಲೆ ನಿರ್ಮಿಸಿ ನಿವೃತ್ತಿಯಾಗಿದ್ದಾರೆ. ಸಚಿನ್ ಸದ್ಯ 19 ವರ್ಷ 270 ದಿನ ಆಡಿ ಎರಡನೇ ಸ್ಥಾನದಲ್ಲಿದ್ದಾರೆ. ಇನ್ನೊಂದು ವರ್ಷ ಕಳೆಯಿತೆಂದರೆ ಈ ದಾಖಲೆಯೂ ಸಚಿನ್ ಹೆಸರಿಗೆ ವರ್ಗಾವಣೆಯಾಗಲಿದೆ.

ತೆಂಡೂಲ್ಕರ್ ಅವರ ಚಿಕ್ಕಪುಟ್ಟ ದಾಖಲೆಗಳನ್ನೂ ಬರೆಯುತ್ತಾ ಹೋದರೆ ಅದಕ್ಕೆ ಕೊನೆಯೆಂಬುದಿರುವುದಿಲ್ಲ. ತೆಂಡೂಲ್ಕರ್ ಅವರ ದಾಖಲೆಗಳ ವಿಶೇಷವೇನೆಂದರೆ ಸದ್ಯಕ್ಕೆ ಅವುಗಳನ್ನು ಮುರಿಯಬಲ್ಲವರು ಇಲ್ಲ. ಹೀಗಾಗಿ ಅವರ ದಾಖಲೆಗಳು ಅವರು ನಿವೃತ್ತಿ ಹೊಂದಿದ ಮೇಲೂ ಅಂತರರಾಷ್ಟ್ರೀಯ ಕ್ರಿಕೆಟ್ ಲೋಕವನ್ನು ಬಹುಕಾಲ ಆಳಲಿವೆ. ಅಂತರರಾಷ್ಟ್ರೀಯ ಕ್ರಿಕೆಟ್ ಲೋಕದಲ್ಲಿ ಭಾರತದ ಪತಾಕೆ ಬಹುಕಾಲ ಹಾರಲಿದೆ.



ಕೃಷ್ಣರ ನಗೆಪಾಟಲು ವರ್ತನೆಗಳು

ದೆಹಲಿಯಲ್ಲಿ ನೂರು ದಿನ ಪೂರೈಸಿರುವ ಯುಪಿಎ ಸರ್ಕಾರ ಚುರುಕಾಗಿ ಕೆಲಸ ಆರಂಭಿಸಿದೆ. ...ದಿಷ್ಟು ಕಣ್ಣಿಗೆ ಕಾಣಿಸುವಂಥ ಕಾರ್ಯಕ್ರಮಗಳು, ...ನ್ನೊಂದಿಷ್ಟು ಎಡವಟ್ಟುಗಳು, ಕೆಲವು ವಿವಾದಗಳೂ ...ಷ್ಟಿಯಾಗಿವೆ.

...ಕರ್ನಾಟಕದಿಂದ ಎಸ್.ಎಂ. ಕೃಷ್ಣ, ವೀರಪ್ಪ ...ಮೊಯ್ಲಿ, ಕೆ.ಎಚ್. ಮುನಿಯಪ್ಪ ಹಾಗೂ ...ಮಲ್ಲಿಕಾರ್ಜುನ ಖರ್ಗೆ ಈಗಿನ ಕೇಂದ್ರ ಸಚಿವರುಗಳು. ...ವರ ಪೈಕಿ ಅತೀ ಮಹತ್ವದ ಖಾತೆ ಸಿಕ್ಕಿರುವುದು ...ಕೃಷ್ಣಗೆ. ಹಾಲಿ ಭಾರತದ ವಿದೇಶಾಂಗ ...ಸಚಿವರಾಗಿರುವ ಕೃಷ್ಣ ತಮ್ಮ ಖಾತೆಯನ್ನು ಎಷ್ಟು ...ಅಸಂಬದ್ಧವಾಗಿ ಮತ್ತು ಅಪ್ರಬುದ್ಧವಾಗಿ ...ನಿಭಾಯಿಸುತ್ತಿದ್ದಾರೆನ್ನಲು ದೆಹಲಿ ಪತ್ರಕರ್ತರ ...ವಲಯದಲ್ಲಿ ತಮಾಷೆಯ ಕತೆಗಳೇ ಇವೆ.

...ಈ ಕೃಷ್ಣ ಅಮೆರಿಕಾದಲ್ಲಿ ಓದಿದವರು, ಹತ್ತಾರು ...ದೇಶಗಳನ್ನು ಸುತ್ತಾಡಿದ್ದಾರಾದರೂ ಫಾರಿನ್ ಪಾಲಿಸಿ ...ಇತ್ಯಾದಿಗಳ ಎಬಿಸಿಡಿಯೂ ಗೊತ್ತಿರದ ರಾಜಕಾರಣಿ. ...ಲಿಗೆ ಕೃಷ್ಣಗೆ ಫಾರಿನ್ ಖಾತೆ ಸಿಗುವ ಛಾನ್ಸೇ ...ಇಲ್ಲ. ಎಲೆಕ್ಷನ್ ಮುಗಿದು ಯುಪಿಎ ಮತ್ತೆ ...ಸರ್ಕಾರ ರಚಿಸುವ ಹಂತ ಬಂದಾಗ ಸೋನಿಯಾ ...ಮನಸ್ಸಿನಲ್ಲಿ ವಿದೇಶಾಂಗ ಸಚಿವರಾಗಿ ಪ್ರಣಬ್ ...ಮುಖರ್ಜಿ ಇರಲಿ ಎಂದಿತ್ತು. ಆದರೆ ಅತಿ ಹಿರಿಯ ...ಕಾಂಗ್ರೆಸ್ ನಾಯಕರಾದ ಪ್ರಣಬ್ ಅವರಿಗೆ ಬೇಕಾದ ...ಖಾತೆ ಆಯ್ಕೆ ಮಾಡಿಕೊಳ್ಳುವ ಸವಲತ್ತಿರುತ್ತದೆ. ...ಆ ಸಮಯ ಬಂದಾಗ ಸೋನಿಯಾಗೆ ಪ್ರಣಬ್ ...ಹೇಳಿದ್ದು: "ನನಗೆ ಹಣಕಾಸು ಖಾತೆ ಇರಲಿ" ...ಎಂದು. ಇದರಿಂದಾಗಿ ಕೃಷ್ಣ ಪಾಲಿಗೆ ಫಾರಿನ್ ಖಾತೆ ...ಬಂತು. ಕೃಷ್ಣರ ದುರಾದೃಷ್ಟ ಹೇಗಿತ್ತೆಂದರೆ ಈತ ...ಸಚಿವರಾದ ತಕ್ಷಣ ದೂರದ ಆಸ್ಟ್ರೇಲಿಯಾದಲ್ಲಿ ...ಭಾರತೀಯ ವಿದ್ಯಾರ್ಥಿಗಳ ಮೇಲೆ ಹಲ್ಲೆ ಘಟನೆಗಳು ...ನಡೆದವು. ಪಾಕಿಸ್ತಾನದೊಂದಿಗಿನ ಮಾತುಕತೆ ...ಬರದಲ್ಲಿ ವಿನಾಕಾರಣ ಬಲೂಚಿಸ್ತಾನ್ ವಿಷಯ ...ಪ್ರಸ್ತಾಪವಾಗಿ ಭಾರತ ಮುಜುಗರ ಅನುಭವಿಸಿತು. ...ಚೀನಾ ಸೈನಿಕರು ಅರುಣಾಚಲ ಪ್ರದೇಶದಲ್ಲಿ ಗಡಿ ...ದಾಟಿ ನುಗ್ಗಿ ಬಂದರು. ಜೊತೆಗೆ ದಲೈಲಾಮ ...ಅರುಣಾಚಲಕ್ಕೆ ಭೇಟಿ ನೀಡುವುದನ್ನು ಚೀನಾ ...ವಿರೋಧಿಸುತ್ತಿದೆ. ಈ ಗದ್ದಲದಲ್ಲಿ ಏನು ...ಮಾಡಬೇಕು, ಏನು ಹೇಳಬೇಕು ಎಂದು ದಿಕ್ಕು ...ತೋಚದೆ ಕೃಷ್ಣ ಆಂಧ್ರ ಸಿಎಂ ವೈ.ಎಸ್. ರಾಜಶೇಖರ ...ರೆಡ್ಡಿ ಅಂತ್ಯಸಂಸ್ಕಾರಕ್ಕೆ ಹೋಗಬೇಕು ಎಂದು ...ಹೊರಟು ಆಕಾಶದಲ್ಲೇ ಸಿಕ್ಕಿಹಾಕಿಕೊಂಡು ಒದ್ದಾಡಿದ ...ಪ್ರಹಸನವೂ ಆಗಿಹೋಗಿದೆ.

...ಈ ಕೃಷ್ಣ ಎಂಥ ಅಪ್ರಬುದ್ಧ ಮಂತ್ರಿ ...ಎಂಬುದಕ್ಕೆ ಇದೊಂದು ಕ್ಲಾಸಿಕ್ ...ಉದಾಹರಣೆ.

...ಈತ ಫಾರಿನ್ ಮಂತ್ರಿಯಾದ ...ಮೇಲೆ ಮಾಡಿರುವ ಕೆಲಸವೆಂದರೆ: ...ಆಸ್ಟ್ರೇಲಿಯಾದಲ್ಲಿ ಇಂಡಿಯಾ ...ವಿದ್ಯಾರ್ಥಿಗಳಿಗೆ ತೊಂದರೆ ಆಗಬಾರದು' ...ಎಂಬ ಗುಮಾಸ್ತರ ಶೈಲಿಯ ಒಂದು ...ಹೇಳಿಕೆ.

...ಪಾಕಿಸ್ತಾನ ಭಯೋತ್ಪಾದಕರನ್ನು ...ಹಾಕಬೇಕು' ಎಂಬ ಪೊಲೀಸ್ ಕಾನ್ಸ್‌ಸ್ಟೆಬಲ್ ...ಬೇಡಿಕೆ.


...ಒಂದು ಜಪಾನ್ ಟ್ರಿಪ್ಪು,

...ಹಿಲರಿ ಕ್ಲಿಂಟನ್ ಹಿಂದೆಮುಂದೆ ನಿಂತು ...ಫೋಟೋ ಸೆಷನ್ - ಇವಿಷ್ಟು ಕೆಲಸ ಆಗಿದ್ದವು.

...ಈ ಮಧ್ಯೆ ಸೆಪ್ಟೆಂಬರ್ 1 ರಿಂದ 4ರವರೆಗೂ ...IBSA (ಇಂಡಿಯಾ -ಬ್ರೆಜಿಲ್-ಸೌತ್ ಆಫ್ರಿಕಾ) ...ದೇಶಗಳ ವ್ಯಾಪಾರ ಸಂಘಟನೆಯ ಮಾತುಕತೆಗೆಂದು ...ಬ್ರೆಜಿಲ್‌ಗೆ ಹೋದರು.

...ಅಂಥ ತಮಾಷೆಯ ಘಟನೆ ಇತ್ತೀಚೆಗೆ ...ಸುದ್ದಿ ನಡೆದಿರದ ಕಾರಣ ಇದನ್ನಿಲ್ಲಿ ...ದಾಖಲಿಸಲಾಗಿದೆ.

...ಹಾಗೆ ಬ್ರೆಜಿಲ್‌ಗೆ ಹೋದ ಕೃಷ್ಣ ಸೆಪ್ಟೆಂಬರ್ 1 ...ರಂದು ಬ್ರೆಜಿಲ್ ಅಧ್ಯಕ್ಷರ ಭೇಟಿ ಮಾಡಿದರು. ...ಸೆಪ್ಟೆಂಬರ್ 2 ರಿಂದ IBSA ಸಭೆ ...ಆರಂಭವಾಗುವುದಿತ್ತು, 2007 ರಲ್ಲೇ ನಿಗದಿಯಾಗಿದ್ದ ಸಭೆ ...ಈ ಸಭೆಗಾಗಿ ಭಾರತದ ಅಧಿಕಾರಿಗಳು ...ಅಂದರೆ ಬ್ರೆಜಿಲ್, ದಕ್ಷಿಣ ಆಫ್ರಿಕಾದ ವಿದೇಶಾಂಗ



ಸಚಿವರು, ವಾಣಿಜ್ಯ ಇಲಾಖೆಗಳ ಹಿರಿಯ ಅಧಿಕಾರಿಗಳೆಲ್ಲಾ ಬಂದಿದ್ದರು.

ಆದರೆ ಸಭೆಗೆ ಸಂಬಂಧಿಸಿದಂತೆ ಕೃಷ್ಣರ ತಲೆಯ ಮೇಲೆ ಒಂದು ವಿಗ್ ಇತ್ತಾಗಲಿ ತಲೆಯೊಳಗೆ ನಯಾಪೈಸೆಯಷ್ಟು ತಯಾರಿ ಇರಲಿಲ್ಲ ಹಾಗೂ ಹೀಗೂ ಮೊದಲೆರಡು ದಿನ ಸಭೆಯಲ್ಲಿ ಕೂತಿದ್ದ ಕೃಷ್ಣ ಅಲ್ಲಿಂದ ಪಾರಾಗಲು ಯೋಚಿಸುತ್ತಿದ್ದರೋ ಏನೋ ಅದೇ ಸಮಯಕ್ಕೆ ಆಂಧ್ರ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯ ಹೆಲಿಕಾಪ್ಟರ್ ಉರುಳಿ ಬಿದ್ದು ಸತ್ತರೆನ್ನುವ ಸುದ್ದಿ ಸಿಕ್ಕಿದೆ. ತಕ್ಷಣ ಕೃಷ್ಣ ಮೀಟಿಂಗ್ ಅರ್ಧಕ್ಕೇ ನಿಲ್ಲಿಸಿ ವಿಮಾನ ಹತ್ತಿ ಭಾರತದತ್ತ ಹೊರಟುಬಿಡಬೇಕೆ?

ಇದೆಂಥ ವಿಪರ್ಯಾಸ ನೋಡಿ. ಕೃಷ್ಣ ವೈಎಸ್‌ಆರ್ ನೆಂಟನೇನಲ್ಲ, ಆಂಧ್ರ ರಾಜಕಾರಣಿಯೂ ಅಲ್ಲ, ಕಾಂಗ್ರೆಸ್‌ನ ಮಹಾನ್ ನಾಯಕನೂ ಅಲ್ಲ. ಆಂಧ್ರದಲ್ಲಿ ನಡೆದ ದುರ್ಘಟನೆಗೂ ಕೃಷ್ಣರ ಬ್ರೆಜಿಲ್ ಸಭೆಗೂ ನೇರ ಸಂಬಂಧವೂ ಇರಲಿಲ್ಲ.

ಆದರೂ ಕೃಷ್ಣ ತಮ್ಮ ಜವಾಬ್ದಾರಿ ಮರೆತು ಓಡಿಬಂದರು. ಹೋಗಲಿ ಹಾಗೆ ಅರ್ಜೆಂಟಾಗಿ ಬಂದು ವೈಎಸ್‌ಆರ್ ಅಂತ್ಯಸಂಸ್ಕಾರಕ್ಕಾದರೂ ಹೋದರಾ ಅಂದರೆ ಅದೂ ಇಲ್ಲ.

ಒಂದು ದಿನ ಪೂರ್ತಿ ಅಂತರಿಕ್ಷದಲ್ಲೇ ನೇತಾಡುತ್ತಾ ಕಾಲಕಳೆದರು.



ಅದಿನ್ನೊಂದು ಪ್ರಹಸನ.

ಬ್ರೆಜಿಲ್‌ನಿಂದ ನೇರ ದುಬೈಗೆ ಬಂದ ಕೃಷ್ಣ ಅಲ್ಲಿಂದ ಸೆಪ್ಟೆಂಬರ್ 3 ರಂದು ದೆಹಲಿಗೆ ಬರಬೇಕಿತ್ತು, ಆದರೆ ಹವಾಮಾನ ಸರಿಯಿರದ ಕಾರಣ ವಿಮಾನ ಕೆಳಗಿಳಿಯಲಾಗದೆ ಪೈಲೆಟ್ ಕರಾಚಿಗೆ ಹೋದ. ಅಲ್ಲಿ ಕೃಷ್ಣ ವಿಮಾನದಿಂದ ಹೊರಬರಲು ಅನುಮತಿ ಸಿಗಲಿಲ್ಲ, ಗಂಟೆಗಟ್ಟಲೆ ಕಾದನಂತರ ಇಂಧನ ಭರ್ತಿ ಮಾಡಿಸಿಕೊಂಡು ಮತ್ತೆ ದುಬೈಗೆ ಹೋದ ಪೈಲೆಟ್ ಇವರನ್ನೆಲ್ಲಾ ಏರ್‌ಪೋರ್ಟಿನಲ್ಲೇ ಉದುರಿಸಿ ಸೀದಾ ಮನೆಗೆ ಹೋದ. ಇತ್ತ ಟೆನ್ಷನ್ ಮಾಡಿಕೊಂಡ ಕೃಷ್ಣ ಇನ್ನಾವುದೋ ವಿಮಾನ ಏರಿ ಬೆಂಗಳೂರಿಗೆ ಬಂದುಬಿದ್ದರು.


ಈ ಕೃಷ್ಣ ಅಮೆರಿಕಾದಲ್ಲಿ ಓದಿದವರು, ಹತ್ತಾರು ದೇಶಗಳನ್ನು ಸುತ್ತಾಡಿದ್ದಾರಾದರೂ ಫಾರಿನ್ ಪಾಲಿಸಿ ಇತ್ಯಾದಿಗಳ ಎಬಿಸಿಡಿಯೂ ಗೊತ್ತಿರದ ರಾಜಕಾರಣಿ. ಹಾಲಿ ಭಾರತದ ವಿದೇಶಾಂಗ ಸಚಿವರಾಗಿರುವ ಕೃಷ್ಣ ತಮ್ಮ ಖಾತೆಯನ್ನು ಎಷ್ಟು ಅಸಂಬದ್ಧವಾಗಿ ಮತ್ತು ಅಪ್ರಬುದ್ಧವಾಗಿ ನಿಭಾಯಿಸುತ್ತಿದ್ದಾರೆನ್ನಲು ಈತನ ನಗೆಪಾಟಲು ವರ್ತನೆಗಳೇ ಸಾಕ್ಷಿ!

● ಬಿಳಿದಾಳೆ ಪಾರ್ವತೀಶ

ಇಲ್ಲಿಂದ ಪುಲಿನೆಂದುಲಾಗಾಗಲಿ, ಕರ್ನೂಲಿಗಾಗಲಿ ಹೋಗಲಾಗದೆ ಕೊನೆಗೆ ಬೆಂಗಳೂರಿನಲ್ಲೇ ಅನಗತ್ಯ ಪತ್ರಿಕಾಗೋಷ್ಠಿ ನಡೆಸಿ ದೆಹಲಿಗೆ ಹಾರಿ ಹೋದರು.

ಈ ಕೃಷ್ಣಗೆ ವಿದೇಶಾಂಗ ಖಾತೆ ಎಂದರೇನು? ತನ್ನ ಜವಾಬ್ದಾರಿಯೇನು? ಯಾವ ಟೈಮಿನಲ್ಲಿ ಹೇಗೆ ವರ್ತಿಸಬೇಕು ಎಂಬುದು ಗೊತ್ತಿಲ್ಲದೆ ಹಾಸ್ಯಾಸ್ಪದ ಸನ್ನಿವೇಶ ನಿರ್ಮಿಸಿಬಿಟ್ಟರು.

ಇದಕ್ಕೆ ಇಂಬು ನೀಡುವಂತೆ ಮೌರ್ಯ ಶೆರಟನ್ ಹೋಟೆಲ್‌ನಿಂದ ಹೊರದಬ್ಬಿಸಿಕೊಂಡ ಘಟನೆಯೂ ಆಗಿದೆ. ತನ್ನ ಸಚಿವ ನಿವಾಸ ರೆಡಿಯಾಗಿಲ್ಲವೆಂದು ಕಳೆದ ಮೂರು ತಿಂಗಳಿಂದ ಮೌರ್ಯ ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ವಾಸವಿದ್ದರು ಕೃಷ್ಣ. ಇದರ ದಿನ ಬಾಡಿಗೆಯೇ ಒಂದು ಲಕ್ಷ. ಅಂದರೆ 3 ತಿಂಗಳಿಗೆ 1 ಕೋಟಿ ರೂಪಾಯಿ ಬಾಡಿಗೆ. ಇನ್ನೂ ಊಟ, ತಿಂಡಿ



ಶಾಸ್ತ್ರಿಯ ಅಡ್ನಾಡಿ ಸಲಹೆ!

ವಗೈರೆಯೆಂದು ಇನ್ನೊಂದು ಕೋಟಿ ಆಗೇ ಇರುತ್ತದೆ. ದೆಹಲಿಯ DNA ಪತ್ರಿಕೆ ಕೃಷ್ಣರ ಈ ಪಂಚತಾರ ತೆವಲನ್ನು ಖಂಡಿಸಿ ವರದಿ ಪ್ರಕಟಿಸಿದ್ದು ಸೋನಿಯಾ ಗಮನಕ್ಕೂ ಬಂತು. ಆಕೆ ಪ್ರಣಬ್ ಮುಖರ್ಜಿಗೆ ಹೇಳಿ ಕೃಷ್ಣ ಹಾಗೂ ಇನ್ನೊಬ್ಬ ಬಾಲಕ ಮಂತ್ರಿ ಶಶಿ ತರೂರ್‌ನನ್ನು ಹೋಟೆಲ್‌ನಿಂದ ಹೊರದಬ್ಬಿಸಿದರು. ಇದು ಶಾಲಾಮಕ್ಕಳನ್ನು ಕತ್ತು ಹಿಡಿದು ಆಚೆಗೆ ಎಸೆದಂತಿತ್ತು.

ಇಷ್ಟಾದರೂ ಮೀಸೆ ಮಣ್ಣಾಗದಂತೆ ಪೋಜು ಕೊಟ್ಟ ಕೃಷ್ಣ 'ಹೋಟೆಲ್ ಬಾಡಿಗೇನಾ ಸರ್ಕಾರದ ಹಣದಿಂದ ಕೊಡಲಿಲ್ಲ, ನಾನೇ ಕೊಟ್ಟೆ' ಅಂದರು. ಕೃಷ್ಣರ ಚೇಲಾ ಪತ್ರಕರ್ತನೊಬ್ಬ 'ಹೋಗಲಿ ಬಿಡಿ, ಬೇರೆ ಮಂತ್ರಿಯಾಗಿದಿದ್ದರೆ ಯಾರಾದರೂ ಕಾರ್ಪೊರೇಟ್ ಕಂಪನಿ ಕೈಲಿ ಖರ್ಚು ಹಾಕಿಸುತ್ತಿದ್ದರು' ಎಂದು ತಿಪ್ಪೆ ಸಾರಿಸಲು ನೋಡಿದ. ಮಜಾ ಅಂದರೆ ಕೃಷ್ಣರ ಹೋಟೆಲ್ ಬಿಲ್ ಕಟ್ಟಿದವನು ಕೆಫೆ ಕಾಫಿ ಡೇಯ ಓನರ್ ಸಿದ್ಧಾರ್ಥ.

ಇವನು ಕೃಷ್ಣರ ಅಳಿಯ!

ಶಾಸ್ತ್ರಿ ಎಂಬ ಅಡ್ನಾಡಿಯೇ ಸಲಹೆಗಾರ

ಎಸ್.ಎಂ. ಕೃಷ್ಣಗೆ ತನ್ನ ಹುದ್ದೆಯ ಬಗ್ಗೆ ಗಂಭೀರವಾದ ಗ್ರಹಿಕೆಯೇ ಇಲ್ಲವೆನ್ನಲು ಈ ರಾಘವೇಂದ್ರ ಶಾಸ್ತ್ರಿಯೆಂಬ ಸೇಲ್ಸ್‌ಮ್ಯಾನ್‌ನನ್ನು ಸ್ಪೆಷಲ್ ಆಫೀಸರ್ ಆಗಿ ನೇಮಿಸಿಕೊಂಡಿರುವುದೇ ಸಾಕ್ಷಿ. ಬೆಂಗಳೂರಿನ ಗೆಟಿಟ್ ಎಲ್ಲೋ ಪೇಜಸ್ ಎಂಬ ಟೆಲಿಫೋನ್ ಡೈರಕ್ಟರಿ ಪ್ರಿಂಟು ಮಾಡಿಸಿ ಮಾರುತ್ತಿದ್ದ ಶಾಸ್ತ್ರಿಗೂ ಇಂಡಿಯಾದ ಫಾರಿನ್ ಪಾಲಿಸಿಗಳಿಗೂ ನೇರ ಸಂಬಂಧವಿಲ್ಲ, ಆದರೂ ಈ ಕಳಪೆ ಮನುಷ್ಯನನ್ನೇ ಕೃಷ್ಣ ಯಾಕೆ ತಮ್ಮ ಕಚೇರಿಯಲ್ಲಿಟ್ಟುಕೊಂಡಿದ್ದಾರೆ?

ತಮ್ಮ ವಿದೇಶಾಂಗ ಇಲಾಖೆಯ ಪ್ರಭಾವ ಬಳಸಿಕೊಂಡು ಅಳಿಯ ಸಿದ್ಧಾರ್ಥನ ಬ್ಯುಸಿನೆಸ್ ಬೆಳೆಸಲಿಕ್ಕಾ?

ಈ ಶಾಸ್ತ್ರಿ ಎಂಥ ಸುಳ್ಳುಗಾರನೆಂದರೆ ತಾನು ಅಮೆರಿಕದ ಹಾರ್ವರ್ಡ್, ಚಿಕಾಗೊ, ಕೊಲಂಬಿಯಾ ಯೂನಿವರ್ಸಿಟಿಗಳ ಬ್ಯುಸಿನೆಸ್ ಸ್ಕೂಲ್‌ಗಳಲ್ಲಿ ಓದಿಬಂದಿದ್ದೇನೆ ಎಂದು ಪ್ರಚಾರ ಮಾಡಿಕೊಂಡಿದ್ದಾನೆ. ಆದರೆ ಕೆಲವರಿಗೆ ಅನುಮಾನ ಬಂದು ಹುಡುಕಿದಾಗ ಅಲ್ಲೆಲ್ಲೂ ರಾಘವೇಂದ್ರ ಶಾಸ್ತ್ರಿ ಓದಿದ್ದನೆಂಬುದಕ್ಕೆ ದಾಖಲೆಗಳೇ ಸಿಕ್ಕಿಲ್ಲ. ಈ ಶಾಸ್ತ್ರಿ ಒಂದು ಸಾರಿ ಬೆಂಗಳೂರು ಪೊಲೀಸರಿಗೆ 3 ಕೋಟಿ ದಾನ ನೀಡುವ ಆಸೆ ಹುಟ್ಟಿಸಿ ಕೈಕೊಟ್ಟಿದ್ದ. ನ್ಯೂಯಾರ್ಕ್ ಪೊಲೀಸ್ ಫೌಂಡೇಷನ್ ಥರ ಬೆಂಗಳೂರು ಪೊಲೀಸ್ ಫೌಂಡೇಷನ್ ಅನ್ನು ಅಸ್ತಿತ್ವಕ್ಕೆ ತರಬೇಕೆಂದು ಹೇಳಿ, ಅದಕ್ಕೆ ತಾನೂ 3 ಕೋಟಿ ರೂಪಾಯಿ ನೀಡುವುದಾಗಿ ಹೇಳಿ ಪ್ರಚಾರ ಗಿಟ್ಟಿಸಿದ್ದ.

ಆದರೆ ನಯಾಪೈಸೆಯನ್ನು ಕೊಡಲಿಲ್ಲ. ಇಂಥ ಅಲಾಲ್‌ಟೋಪಿಗಳನ್ನು ಸ್ಪೆಷಲ್ ಆಫೀಸರ್ ಆಗಿ ಹತ್ತಿರ ಇರಿಸಿಕೊಂಡಿರುವ ಕೃಷ್ಣ ಅದಿನ್ನೇನು ಕಿಸಿಯಲು ಸಾಧ್ಯ ಹೇಳಿ?

ಭಾರತದ ಇವತ್ತಿನ ಪರಿಸ್ಥಿತಿಯಲ್ಲಿ ವಿದೇಶಾಂಗ ನೀತಿಗಳು ಎಷ್ಟು ಮಹತ್ವದ್ದೋ ವಿದೇಶಾಂಗ ಸಚಿವನೂ ಅಷ್ಟೇ ಮುಖ್ಯ. ಪ್ರಣಬ್ ಮುಖರ್ಜಿ ಬಿಟ್ಟರೆ ಉಳಿದ ನಟವರ್‌ಸಿಂಗ್, ಮಾಧವ್ ಸಿನ್ಹ್ ಸೋಳಂಕಿ ಮುಂತಾದವರೆಲ್ಲಾ ಅಂತ ಛಾಪು ಮೂಡಿಸಿರಲಿಲ್ಲ. ಇನ್ನು ಮೊದಲೆಲ್ಲಾ ಅತೀ ದಕ್ಷ ಆಫೀಸರ್‌ಗಳಾದರು ಇದ್ದರು. ಜೆ.ಎನ್. ದೀಕ್ಷಿತ್, ಎಂ.ಕೆ. ನಾರಾಯಣನ್ ಮುಂತಾದ ಫಾರಿನ್ ಸೆಕ್ರೆಟರಿಗಳು ಇಲಾಖೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗಿದ್ದರು. ಈಗ ಅನುಭವಿ ನಿರುಪಮಾ ರಾವ್ ಅಲ್ಲಿದ್ದಾರೆ. ರಾಘವೇಂದ್ರ ಶಾಸ್ತ್ರಿ ಎಂಬ ವಂಚಕನಿದ್ದಾನೆ.

ಕೃಷ್ಣಗೆ ಇಲಾಖೆಯ ತಲೆಬುಡ ಗೊತ್ತಾಗುತ್ತಿಲ್ಲ.

ಇದಿಷ್ಟೇ ಅಲ್ಲ.

ಎಸ್.ಎಂ. ಕೃಷ್ಣಗೆ ಈಗ ಎಪ್ಪತ್ತೇಳು ವರ್ಷ ಆಗಿಹೋಗಿದೆ. ಒಂದು ಕಿವಿ ಸರಿಯಾಗಿ ಕೇಳಿಸುವುದಿಲ್ಲ. ಹಿಲರಿ ಕ್ಲಿಂಟನ್ನೋ ಮತ್ತ್ಯಾರಾದರೂ ಫೋನ್ ಮಾಡಿದರೆ ಅವರೊಂದು ಹೇಳಿ, ಅದು ಕೃಷ್ಣಗೆ ಇನ್ನೇನೋ ಕೇಳಿಸಿ ಕೊನೆಗೆ ಅನೇಕ ಎಡವಟ್ಟುಗಳಾಗುವ ಸಾಧ್ಯತೆಗಳೂ ಇಲ್ಲದಿಲ್ಲ.


ಒಟ್ಟಿನಲ್ಲಿ ಹೇಳಬೇಕೆಂದರೆ ಕೃಷ್ಣ ಕೆಲಸ ಯಾರಿಗೂ ಇಂಪ್ರೆಸ್ ಮಾಡುತ್ತಿಲ್ಲ ಅಷ್ಟೆ. ●


ಮೊಯ್ಲಿ- ವಿಶಿಷ್ಟ ಮಂತ್ರಿಗಿರಿ

ಈಗಿನ ಯುಪಿಎ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಒಂದಲ್ಲ ಒಂದು ಕಾರಣಕ್ಕೆ ಸುದ್ದಿಯಲ್ಲಿದ್ದಾರೆ ಕೇಂದ್ರ ಕಾನೂನು ಸಚಿವ ವೀರಪ್ಪ ಮೊಯ್ಲಿ. ಅಪರಿಚಿತವಾಗಿದ್ದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಮೊಯ್ಲಿ ಗೆಲ್ಲುವ ಬಗ್ಗೆಯೇ ಅನೇಕರಿಗೆ ಅನುಮಾನವಿತ್ತು. ಆದರ ಮೊಯ್ಲಿ ಗೆದ್ದರು ಅಷ್ಟೇ ಅನಿರೀಕ್ಷಿತವಾಗಿ ಇಂಡಿಯಾದಂತಹ ದೊಡ್ಡ ದೇಶದ ಕಾನೂನು ಮಂತ್ರಿಯೂ ಆದರು. ವಕೀಲರಾಗಿ ದಶಕಗಳ ಕಾಲದ ಅನುಭವ. ನಿಷ್ಠಾವಂತ ಕಾಂಗ್ರೆಸ್ಸಿಗ ಹಾಗೂ ಪ್ರಾಮಾಣಿಕ ರಾಜಕಾರಣಿಯಾದ ಮೊಯ್ಲಿಗೆ ಈ ಹುದ್ದೆ ಹೇಳಿಮಾಡಿಸಿದಂತಿದೆ.

ನ್ಯಾಯಾಧೀಶರುಗಳ ಆಸ್ತಿ ಘೋಷಣೆ ವಿಚಾರ, ತ್ವರಿತಗತಿಯಲ್ಲಿ ಕೇಸ್‌ಗಳ ವಿಲೇವಾರಿ, ಸಲಿಂಗಕಾಮಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ಬಗ್ಗೆ ಈಗ ದೇಶಾದ್ಯಂತ ಹೊಸ ಚರ್ಚೆಗಳು ಚಾಲ್ತಿಗೆ ಬರಲು ಮೊಯ್ಲಿಯವರ ಕ್ರಿಯಾಶೀಲತೆಯೇ ಕಾರಣ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇನ್ನಷ್ಟು ಕಸುವು ತುಂಬಬಲ್ಲ ಈ ವಿಚಾರಗಳಿಂದಾಗಿ ಮೊಯ್ಲಿ ಮೀಡಿಯಾಗಳಲ್ಲೂ ಮಿಂಚುತ್ತಿದ್ದಾರೆ.

Good Going Moily.





ನ್ಯಾ. ದಿನಕರನ್ ವಿರುದ್ಧ ಗುರುತರವಾದ ಆರೋಪಗಳು

ದಿನಕರನ್ ಮೇಲಿರುವ ಮೊದಲ ಆರೋಪ ಎಂದರೆ ಕಾನೂನನ್ನು ರಕ್ಷಿಸಬೇಕಾದ ಅವರೇ ಕಾನೂನನ್ನು ಗಾಳಿಗೆ ತೂರಿ ತಮಿಳುನಾಡಿನ ತಮ್ಮ ಹುಟ್ಟೂರು ಮತ್ತಿತರ ಗ್ರಾಮೀಣ ಪ್ರದೇಶದಲ್ಲಿ ಭಾರಿ ಪ್ರಮಾಣದ ಜಮೀನು ಖರೀದಿಸಿಟ್ಟುಕೊಂಡಿದ್ದಾರೆ ಎಂಬುದು. ಯಾವುದೇ ರೀತಿಯ ಪೂರ್ವಾಗ್ರಹ, ಒತ್ತಡ, ಆಮಿಷಗಳಿಗೆ ಒಳಗಾಗದೇ ದೇಶದ ಸಂವಿಧಾನ ಮತ್ತು ಕಾನೂನುಗಳನ್ನು ಎತ್ತಿ ಹಿಡಿಯುತ್ತಾ ನಿಷ್ಪಕ್ಷಪಾತವಾಗಿ ತೀರ್ಪು ನೀಡಬೇಕಾದದ್ದು ನ್ಯಾಯಾಧೀಶರೊಬ್ಬರ ಪ್ರಾಥಮಿಕ ಕರ್ತವ್ಯ. ಆದರೆ, ದಿನಕರ್ ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡು ಅನೇಕ ತೀರ್ಪುಗಳನ್ನು ನೀಡಿದ್ದಾರೆಂಬ ಆರೋಪವೂ ಅವರ ಮೇಲಿದೆ.


ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿ ಪಿ.ಡಿ.ದಿನಕರನ್ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಲಂಚಗುಳಿತನ ಮುಂತಾದ ಆರೋಪಗಳನ್ನು ಎದುರಿಸುತ್ತಿದ್ದಾರೆ. ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳನ್ನಾಗಿ ನೇಮಿಸಿಕೊಳ್ಳುವುದಕ್ಕೆ ಸಿದ್ಧಗೊಂಡಿರುವ ಐವರು ನ್ಯಾಯಾಧೀಶರ ಪಟ್ಟಿಯಲ್ಲಿ ದಿನಕರನ್ ಕೂಡ ಇದ್ದಾರೆ ಎಂಬ ಸುದ್ದಿ ಹೊರಬೀಳುತ್ತಿದ್ದಂತೆಯೇ ಈ ಆರೋಪಗಳು ಗರಿಗೆದರಿ ಹಾರಲಾರಂಭಿಸಿವೆ.

ದಿನಕರನ್ ಅವರು ಈ ಹಿಂದೆ ಸುದೀರ್ಘ ಕಾಲ ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಈಗ ಅದೇ ಚೆನ್ನೈ ಬಾರ್‌ನಲ್ಲಿ ಹಿರಿಯ ವಕೀಲರಾದ ಆರ್.ವೈಗೈ, ಶ್ರೀರಾಮ್ ಪಂಚು, ಕೆ.ಆರ್.ತಮಿಜ್ಜಮನಿ, ಅಣ್ಣಾ ಮ್ಯಾಥ್ಯೂ, ಎಸ್.ಎಸ್.ವಾಸುದೇವನ್, ಗೀತಾ ರಮೇಶನ್, ಸುಧಾ ರಾಮಲಿಂಗಂ, ಎನ್.ಎಲ್.ರಾಜಾ, ದಿ.ನಾಗಶೈಲ, ಎಸ್.ದೇವಿಕರಾಣಿ ಮತ್ತು ಟಿ.ಮೋಹನ್ ಅವರುಗಳು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಅವರಿಗೆ ಸುದೀರ್ಘ ಪತ್ರ ಬರೆದು ದಿನಕರನ್ ಅವರು ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅಧಿಕಾರದ ದುರುಪಯೋಗ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಕಾನೂನು, ನೀತಿನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಭಾರಿ ಪ್ರಮಾಣದ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆಂದು ಆರೋಪಿಸಿದ್ದಾರೆ. ಜೊತೆಗೆ, ಭ್ರಷ್ಟ ನ್ಯಾಯಾಧೀಶರೊಬ್ಬರನ್ನು ದೇಶದ ಅತ್ಯುನ್ನತ ನ್ಯಾಯಾಲಯವಾದ ಸುಪ್ರೀಂ ಕೋರ್ಟಿಗೆ ಕರೆಸಿಕೊಳ್ಳಬಾರದೆಂದು ಮನವಿ ಮಾಡಿಕೊಂಡಿದ್ದಾರೆ. ದಿನಕರನ್‌ರಂತಹವರು ಸುಪ್ರೀಂಕೋರ್ಟಿನ ನ್ಯಾಯಮೂರ್ತಿಗಳಾಗಿ ನೇಮಕಗೊಂಡರೆ ನ್ಯಾಯಾಂಗ ವ್ಯವಸ್ಥೆಯ ಮೇಲೆ ದೇಶದ ಜನತೆ ಇಟ್ಟಿರುವ ವಿಶ್ವಾಸವನ್ನೇ ಹಾಳುಗೆಡುವುತ್ತದೆ ಎಂದು ಎಚ್ಚರಿಸಿದ್ದಾರೆ.



ನಾರಿಮನ್

ಮದ್ರಾಸ್ ಹೈಕೋರ್ಟಿನ ಹಿರಿಯ ನ್ಯಾಯವಾದಿಗಳ ಈ ಮನವಿಯ ಬೆನ್ನ ಹಿಂದೆಯೇ ಸುಪ್ರೀಂ ಕೋರ್ಟಿನ ಹಿರಿಯ ವಕೀಲರಾಗಿರುವ ಫಾಲಿ ನಾರಿಮನ್, ಶಾಂತಿಭೂಷಣ್ ಹಾಗೂ ರಾಮ್ ಜೇಠ್ಮಲಾನಿಯವರೂ ಕೂಡ ದಿನಕರನ್ ಅವರನ್ನು ಸುಪ್ರೀಂಕೋರ್ಟಿನ ನ್ಯಾಯಮೂರ್ತಿಯನ್ನಾಗಿ ನೇಮಿಸುವ ಮುನ್ನ ಸೂಕ್ತ ವಿಚಾರಣೆ ನಡೆಸಬೇಕೆಂದು ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್, ರಾಷ್ಟ್ರಪತಿ ಪ್ರತಿಭಾ ಪಾಟೀಲ್, ಪ್ರಧಾನಿ ಮನಮೋಹನ್ ಸಿಂಗ್ ಹಾಗೂ ಕೇಂದ್ರ ಕಾನೂನು ಸಚಿವ ವೀರಪ್ಪ ಮೊಯ್ಲಿಯವರಿಗೆ ಪತ್ರ ಬರೆದಿದ್ದಾರೆ.



ಶಾಂತಿಭೂಷಣ್

ದಿನಕರನ್ ವಿರುದ್ಧ ಇಂತಹ ಆರೋಪಗಳ ಸುರಿಮಳೆಯೇ ಸುರಿಯುತ್ತಿರು ವುದರಿಂದ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಅವರು ದಿನಕರನ್ ಅವರನ್ನು ನವದೆಹಲಿಗೆ ಕರೆಸಿಕೊಂಡು ಚರ್ಚಿಸಿದ್ದಾರೆ. ಆದರೆ ದಿನಕರನ್ ಅವರು ಮದ್ರಾಸ್‌ನ ವಕೀಲರ ಆರೋಪಗಳನ್ನೆಲ್ಲಾ ಸಾರಾಸಗಟಾಗಿ ನಿರಾಕರಿಸಿದ್ದಾರೆ.

2008ರ ಆಗಸ್ಟ್‌ನಲ್ಲಿ ಪಿ.ಡಿ.ದಿನಕರನ್ ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಇಲ್ಲಿಯತನಕ ಒಟ್ಟು 72,795 ಕೇಸುಗಳನ್ನು ಇತ್ಯರ್ಥ ಮಾಡಿರುವ ಖ್ಯಾತಿಯನ್ನೂ ಅವರು ಪಡೆದಿದ್ದಾರೆ. ಕರ್ನಾಟಕ ಹೈಕೋರ್ಟಿನಲ್ಲಿ ನೆನೆಗುದಿಗೆ ಬಿದ್ದಿದ್ದ ಕೇಸುಗಳ ತ್ವರಿತ ವಿಲೇವಾರಿಗಾಗಿ ವಿಶೇಷ ಕ್ಯಾಂಪೇನ್ ಎತ್ತಿಕೊಂಡು ಪ್ರತಿ 30 ಸೆಕೆಂಡಿಗೆ ಒಂದು ಅರ್ಜಿಯಂತೆ ದಾಖಲೆಯ ಅವಧಿಯಲ್ಲಿ 300 ಅರ್ಜಿಗಳನ್ನು ವಿಲೇವಾರಿ ಮಾಡಿದ/ಮಾಡಿಸಿದ ಖ್ಯಾತಿ ಅವರದ್ದು. ದಿನಕರನ್ ಅವರೇ ಖುದ್ದಾಗಿ 20 ನಿಮಿಷಗಳಲ್ಲಿ 46 ಕೇಸುಗಳಿಗೆ ಸಂಬಂಧಿಸಿದಂತೆ ಜಾಮೀನು ನೀಡಿದ್ದರು.

ಆದರೀಗ ಅವರ ವಿರುದ್ಧ ಮದ್ರಾಸಿನ ಹಿರಿಯ ವಕೀಲರು ಗುರುತರವಾದ ಆರೋಪಗಳನ್ನು ಮಾಡಿದ್ದಾರೆ. ನ್ಯಾಯಾಧೀಶರ ವಿರುದ್ಧ- ಅದರಲ್ಲೂ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳ ವಿರುದ್ಧ - ಯಾರೂ ಸುಖಾಸುಮ್ಮನೇ ಆರೋಪ ಮಾಡುವುದಿಲ್ಲ. ಅಷ್ಟೇ ಅಲ್ಲ, ದಿನಕರನ್ ಅವರ ವಿರುದ್ಧ ದೊಡ್ಡ ಆರೋಪ ಪಟ್ಟಿಯನ್ನೇ ಸಲ್ಲಿಸಿರುವ ವಕೀಲರು ಇದನ್ನು ಸಾಮಾಜಿಕ ಕಾಳಜಿಯಿಂದ ಮತ್ತು ದೇಶದ ನ್ಯಾಯಾಂಗ ವ್ಯವಸ್ಥೆಯ ಸ್ವಾಸ್ಥ್ಯ ಕಾಪಾಡುವ ಉದ್ದೇಶದಿಂದ ಮಾಡಿರುವುದಾಗಿ ಹೇಳಿದ್ದಾರೆ.

ದಿನಕರನ್ ವಿರುದ್ಧದ ಆರೋಪಗಳೇನು?


ದಿನಕರನ್ ಮೇಲಿರುವ ಮೊದಲ ಆರೋಪ ಎಂದರೆ ಕಾನೂನನ್ನು ರಕ್ಷಿಸಬೇಕಾದ ಅವರೇ ಕಾನೂನನ್ನು ಗಾಳಿಗೆ ತೂರಿ ತಮಿಳುನಾಡಿನ ತಮ್ಮ ಹುಟ್ಟೂರು ಮತ್ತಿತರ ಗ್ರಾಮೀಣ ಪ್ರದೇಶದಲ್ಲಿ ಭಾರಿ ಪ್ರಮಾಣದ ಜಮೀನು ಖರೀದಿಸಿಟ್ಟುಕೊಂಡಿದ್ದಾರೆ ಎಂಬುದು. Tamilnadu Land Reforms (Fixation of Ceiling on Land) Act – 1961 ಪ್ರಕಾರ ಐದು ಜನರಿರುವ ಒಂದು ಕುಟುಂಬ 15 ಎಕರೆಗಳಿಗಿಂತ ಹೆಚ್ಚು ಸಾಮಾನ್ಯ ದರ್ಜೆಯ ಜಮೀನನ್ನು ಹೊಂದುವಂತಿಲ್ಲ.

ಆದರೆ ದಿನಕರನ್ ಅವರು ತಮ್ಮ ಹುಟ್ಟೂರಾದ ತಮಿಳುನಾಡಿನ ವೆಲ್ಲೂರು ಜಿಲ್ಲೆಯ ಅರಕ್ಕೋಣಂ ತಾಲ್ಲೂಕಿನ ಅಗ್ಗೈಸಮ್ ಮತ್ತು ಮುಲ್ಲೈ ಎಂಬ ಊರುಗಳಲ್ಲಿ ತಿರುವಳ್ಳುವರ್ ಜಿಲ್ಲೆಯ ತಿರುಟ್ಟಣಿ ತಾಲ್ಲೂಕಿನ ಕಾವೇರಿರಾಜಪುರಂನಲ್ಲಿ ಏನಿಲ್ಲವೆಂದರೂ 500 ಎಕರೆ ಜಮೀನಿಗೆ ಒಡೆಯರಾಗಿದ್ದಾರೆ. ಆ ಊರುಗಳ ಒಟ್ಟು ಜಮೀನೇ 1700 ಎಕರೆ. ಅದರಲ್ಲಿ ದಿನಕರನ್ ಅವರ ಬಳಿ ಇರುವುದು ಹೆಚ್ಚೂ ಕಡಿಮೆ ಊರಿನ ಮೂರನೇ ಒಂದು ಭಾಗ!

ಈ ಜಮೀನನ್ನು ಅವರು ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಳ್ಳುವ ಮೊದಲೇ ಖರೀದಿಸಲು ಪ್ರಾರಂಭಿಸಿ, ನೇಮಕವಾದ ಮೇಲೆ ತಮಗೆ ಸಿಕ್ಕ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡು ಇಷ್ಟೊಂದು ದೊಡ್ಡ ಸಾಮ್ರಾಜ್ಯ ಕಟ್ಟಿಕೊಂಡಿದ್ದಾರೆ ಎಂಬುದು ಅವರ ಮೇಲಿರುವ ಆರೋಪ. ಈ ಹಳ್ಳಿಗಳಲ್ಲಿ ಪ್ರಧಾನವಾಗಿ ದಲಿತರು, ಇರುಳರು ಎಂಬ ಬುಡಕಟ್ಟು ಜನರು, ನಾಯ್ಡು ಮತ್ತು ಬೋಯರ್ ಎಂಬ ಹಿಂದುಳಿದ ವರ್ಗದವರು ವಾಸಿಸುತ್ತಿದ್ದಾರೆ. ಇವತ್ತು ದಿನಕರನ್ ಅವರ ಕುಟುಂಬರ ಹೆಸರಲ್ಲಿರುವ ಜಮೀನು ವಾಸ್ತವದಲ್ಲಿ ಈ ಹಿಂದುಳಿದ ವರ್ಗಗಳಿಗೆ ಸಲ್ಲಬೇಕಿತ್ತು ಎಂಬುದು ಆರೋಪದ ಮುಖ್ಯಾಂಶ.



ದಿನಕರನ್ ಅವರ ಈ 500 ಎಕರೆ ಜಮೀನಿನಲ್ಲಿ 440 ಎಕರೆ ಜಮೀನು ಕಾವೇರಿರಾಜಪುರಂ ಒಂದರಲ್ಲೇ ಇದೆ. ಅದರಲ್ಲಿ 310.33 ಎಕರೆ ಜಮೀನು ದಿನಕರನ್, ಅವರ ಪತ್ನಿ ಡಾ.ವಿನೋದಿನಿ, ಅವರ ಹೆಣ್ಣುಮಕ್ಕಳಾದ ಅಮುಧಾ ಪರ್ಕೋಡಿ ಹಾಗೂ ಅಮೃತ ಪರ್ಕೋಡಿಯವರ ಹೆಸರಿನಲ್ಲೇ ಇದೆ. ಒಂದಿಷ್ಟು ಕಣ್ಣನ್ ಹಾಗು ಮತ್ತೊಬ್ಬನ ಹೆಸರಿನಲ್ಲೂ ಇದ್ದು ಅವರಿಬ್ಬರೂ ದಿನಕರನ್ ಅವರ ಹತ್ತಿರದ ಸಂಬಂಧಿಗಳಾಗಿದ್ದಾರೆ ಎಂಬುದು ವಕೀಲರ ಆರೋಪ.



ಇದೆಲ್ಲವೂ ಪಟ್ಟಾ ಭೂಮಿಯಾಗಿದೆ. ಈ ಭೂಮಿಯ ಸುತ್ತ ಇರುವ ಸರ್ಕಾರಿ ಭೂಮಿಯನ್ನು ನಿಧಾನಕ್ಕೆ ದಿನಕರನ್ ಕುಟುಂಬ ಒತ್ತುವರಿ ಮಾಡಿಕೊಂಡು ಬೇಲಿಹಾಕಿಕೊಂಡಿದೆ. ಇವರ ಜಮೀನಿನ ಪಕ್ಕದಲ್ಲಿರುವ 41.27 ಎಕರೆ ಸಾರ್ವಜನಿಕ ಸೊತ್ತಾಗಿದ್ದು ಅದರಲ್ಲಿ ನೀರಿನ ತೊರೆ, ಕಾಲುದಾರಿ, ಮರಗಿಡಗಳು ಇವೆ. ಇವೆಲ್ಲಾ ಆ ಊರಿನ ಜನರ ಸಾಮೂಹಿಕ ಉಪಯೋಗಕ್ಕೆ ಇರಬೇಕಾಗಿದ್ದ ಜಮೀನು. ಆದರೆ ದಿನಕರನ್ ಅದೆಲ್ಲವನ್ನೂ ಸೇರಿಸಿ ಬೇಲಿ ಹಾಕಿಕೊಂಡಿದ್ದಾರೆ. ಅಲ್ಲದೇ, ದಿನಕರನ್ ವಶದಲ್ಲಿರುವ 88.33 ಎಕರೆ ಜಮೀನನ್ನು ಸರ್ಕಾರಿ ದಾಖಲೆಗಳು 'ಅನಾಧಿನಂ' ಎಂದು ವರ್ಗೀಕರಿಸಿವೆ. ಅಂದರೆ, ಈ ಜಮೀನನ್ನು ತಮಿಳುನಾಡು ಸರ್ಕಾರದ ಅಧಿಕೃತ ಆದೇಶದ ಪ್ರಕಾರ ಕೇವಲ ಭೂರಹಿತ ಕಡುಬಡವರಿಗೆ ಮಾತ್ರವೇ ನೀಡತಕ್ಕದ್ದು. 2006ರಲ್ಲೇ ಇಲ್ಲಿನ ಭೂಹೀನ ಬಡವರು, ದಲಿತರು ಉಳುವುದಕ್ಕೆ ತಮಗೆ ಭೂಮಿಯನ್ನು ಕೊಡಬೇಕೆಂದು ತಮಿಳುನಾಡು ಸರ್ಕಾರಕ್ಕೆ ಅರ್ಜಿ ಹಾಕಿ ಮನವಿ ಮಾಡಿಕೊಂಡಿದ್ದರು. ಆದರೆ ಇಂತಹದ್ದೊಂದು ಅರ್ಜಿ ಸರ್ಕಾರಕ್ಕೆ ಹೋಗಿದೆ ಎಂದು ಗೊತ್ತಾಗುತ್ತಿದ್ದಂತೆಯೇ ದಿನಕರನ್ ಅವಸರವಸರವಾಗಿ ಆ ಜಮೀನ... ಬೇಲಿಹಾಕಿಕೊಂಡು ತಮ್ಮ ಸಾಮ್ರಾಜ್ಯ ವಿಸ್ತರಿಸಿಕೊಂ... ಬಿಟ್ಟರು. ಈಗ ಆ ಜಮೀನನ್ನು ಉಳುವುದು ಬದಿಗಿರ... ಕನಿಷ್ಠ ಅಲ್ಲಿ ಹೋಗುವುದಕ್ಕೂ ಜನರಿಗೆ ಅವಕಾಶವಿ... ಅದೆಲ್ಲಾ ದಿನಕರನ್ ಅವರ ಅಧಿಕ... ಸೊತ್ತಾಗಿ ಹೋಗಿದೆ. ಅಲ್ಲಿ ಹಲವು ಕ... ಬೋರ್‌ವೆಲ್‌ಗಳನ್ನೂ ಕೊರೆಸಿ ಒಂದು... ವಿಶಾಲ ಫಾರ್ಮ್ ಮಾಡಲಾಗಿ... ಎಂದೂ ವಕೀಲರು ತಮ್ಮ ದೂರಿನ... ಹೇಳಿದ್ದಾರೆ.

ಈ ಕುರಿತು ತನಿಖೆ ನಡೆಸಲು... ವಕೀಲರ ತಂಡ ಅಲ್ಲಿಗೆ ಹೋದಾ... ಅವರ ಕಣ್ಣಿಗೆ ಇನ್ನೂ ಹಲವು ವಿಚಿ... ಸಂಗತಿಗಳು ಕಂಡುಬಂದವಂತೆ. "ದಿ... ಕರನ್ ಅವರ ಈ ಆಸ್ತಿಗೆ ಪೊಲೀಸರು... ಖುದ್ದಾಗಿ ರಕ್ಷಣೆ ಕೊಟ್ಟು ಜನರು ... ಕಡೆ ಸುಳಿಯದಂತೆ ಬೆದರಿಸುತ್ತಿದ್ದಾರೆ. ಈ ಆಸ್ತಿಗೆ ಬೇಕಿರು... ಮೂಲಭೂತ ಸೌಕರ್ಯಗಳನ್ನು ಪುಕ್ಕಟೆಯಾಗಿ ಸ್ಥಳೀಯ... ಆಡಳಿತದಿಂದ ಪಡೆಯಲಾಗುತ್ತಿದೆ. ಈ ತೋಟಕ್ಕೆ ಸಂಪರ್ಕ... ಕಲ್ಪಿಸುವುದಕ್ಕಾಗಿ ಒಂದು ರಸ್ತೆಯಿದ್ದು ಅದಕ್ಕೆ 'ನೀ... ಅರಸರ್ ಪಿ.ಡಿ.ದಿನಕರನ್ ಸಾಲಾಯ್' ಎಂದು ತಮಿಳಿನ... ನಾಮಕರಣ ಮಾಡಲಾಗಿದೆ (ಕನ್ನಡದಲ್ಲಿ ಅದರ ಅರ್ಥ... 'ನ್ಯಾಯ ಚಕ್ರವರ್ತಿ ಪಿ.ಡಿ.ದಿನಕರನ್ ರಸ್ತೆ' ಎಂದು) ಎಂದು ಆರೋಪಿಸಿದ್ದಾರೆ.

ವೆಲ್ಲೂರು ಜಿಲ್ಲೆಯ ಪೂವಲೈ ಎಂಬ ಹಳ್ಳಿಯಲ್ಲಿ... ದಿನಕರನ್‌ಗೆ 50 ಎಕರೆ ಮಾವಿನ ತೋಟವಿದ್ದು ಅವ... ಆಗಾಗ ಅಲ್ಲಿಗೆ ಹೋಗಿಬರುತ್ತಾ... ಕುಟುಂಬವೊಂದು 15 ಎಕರೆಗಿಂತ ಹೆಚ್ಚು... ಆಸ್ತಿ ಹೊಂದಬಾರದೆಂಬ ಕಾನೂನಿದ್ದರೂ... ದಿನಕರನ್ 550 ಎಕರೆ... ಮಾಲಿಕರಾಗಿದ್ದಾರೆ. ಇದನ್ನೆಲ್ಲ ವಿಚಾರಣೆ... ಒಳಪಡಿಸಬೇಕೆಂಬುದು ವಕೀಲರ ಮನ...

ಇನ್ನು ತಮಿಳುನಾಡಿನ ರಾಜಧಾ... ಚೆನ್ನೈನಲ್ಲೂ ದಿನಕರನ್‌ಗೆ ಅಪಾ... ಪ್ರಮಾಣದ ಆಸ್ತಿಯಿದೆಯಂತೆ. ನಂ.2... ಈಸ್ಟ್ ಪಾರ್ಕ್ ರೋಡ್, ಶೆಣೈ ನಗ... ಚೆನ್ನೈ – 30 ವಿಳಾಸದಲ್ಲಿ ಐದ... ಅಂತಸ್ತುಗಳ ವಿಶಾಲ ಕಟ್ಟಡವೊಂದಕ್ಕೆ ದಿನಕರನ್ ಅವ... ಮಾಲಿಕರಂತೆ. ಆ ನಿರ್ದಿಷ್ಟ ಸೈಟಿನ ಉದ್ದಗಲ, ಸುರಕ್ಷತಾ... ಕ್ರಮಗಳು, ಸುತ್ತಮುತ್ತಲ ಪರಿಸರ ಎಲ್ಲವನ್ನು... ಗಮನದಲ್ಲಿಟ್ಟುಕೊಂಡು ಹೇಳುವುದಾದ... ಡೆವಲಪ್‌ಮೆಂಟ್ ಕಂಟ್ರೋಲ್ ನಿಯಮಗಳ ಪ್ರಕಾ... ಅಲ್ಲಿ ಬಹುಮಹಡೀಯ ಕಟ್ಟಡವನ್ನು ನಿರ್ಮಿಸುವಂತಿ... ಆದರೂ ಕಾನೂನನ್ನು ಗಾಳಿಗೆ ತೂರಿ ದಿನಕರನ್ ಅ... ಬಹುಮಹಡಿ ಕಟ್ಟಡವನ್ನು ನಿರ್ಮಿಸಿಕೊಂಡಿದ್ದಾ... ಎಂಬುದು ಮತ್ತೊಂದು ಗುರುತರವಾದ ಆರೋಪ.

ಹಾಗೆಯೇ ಜಿ-81, ಮೊದಲ ಮುಖ್ಯರಸ್ತೆ, ಅ... ನಗರ ಈಸ್ಟ್, ಚೆನ್ನೈ-02 ಎಂಬಲ್ಲಿ ಒಂದು ಕಟ್ಟ... ನಿರ್ಮಾಣ ನಡೆಯುತ್ತಿದ್ದು ದಿನಕರನ್ ಆಗಾಗ ಅಲ್ಲಿ... ಹೋಗಿ ಅದನ್ನು ಪರಿವೀಕ್ಷಿಸುತ್ತಿರುತ್ತಾರೆ. ಹೀಗಾಗಿ, ಅದ... ಕೂಡ ಅವರ ಮಾಲೀಕತ್ವದ್ದೇ ಎಂಬ ಅನುಮಾನವಿ...

ನಗೆ ಆರಕ್ಷೋಣಂನಲ್ಲಿ ಒಂದು ಮನೆಯಿದ್ದು ಅದರ ದಿನ ಮುಖ್ಯ ರಸ್ತೆಯಲ್ಲಿ ಹತ್ತು ಅಡಿಯನ್ನು ಒತ್ತುವರಿ ಸಿಕೊಂಡು ಕಾಂಪೌಂಡ್ ಕಟ್ಟಿಕೊಂಡಿದ್ದಾರೆ ಎಂದು ನ ಪತ್ರದಲ್ಲಿ ಹೇಳಲಾಗಿದೆ.

ಕಾರ್ಯವಿಧಾನದಲ್ಲೂ ಲೋಪ?

ಯಾವುದೇ ರೀತಿಯ ಪೂರ್ವಾಗ್ರಹ, ಒತ್ತಡ, ಷಗಳಿಗೆ ಒಳಗಾಗದೇ ದೇಶದ ಸಂವಿಧಾನ ಮತ್ತು ಯಮಗಳನ್ನು ಎತ್ತಿ ಹಿಡಿಯುತ್ತಾ ನಿಷ್ಪಕ್ಷಪಾತವಾಗಿ ರ್ಪ ನೀಡಬೇಕಾದದ್ದು ನ್ಯಾಯಾಧೀಶರೊಬ್ಬರ ಪ್ರಾಥಮಿಕ ವ್ಯ. ಆದರೆ, ದಿನಕರ್ ಇದಕ್ಕೆ ತದ್ವಿರುದ್ಧವಾಗಿ ಸಿಕೊಂಡು ಅನೇಕ ತೀರ್ಪುಗಳನ್ನು ನೀಡಿದ್ದಾರೆಂಬ ಪವೂ ಅವರ ಮೇಲಿದೆ. ಅಂತಹದ್ದೊಂದು ಪ್ರಕರಣ ಲಿಮಿಟೆಡ್ ಭೂಮಿಯನ್ನು ಅತ್ಯಂತ ಕಡಿಮೆ ಬೆಲೆಗೆ ಎಸ್‌ಐ ಲಿಮಿಟೆಡ್ ಎಂಬ ಕಂಪನಿಗೆ ಮಾರುವಂತೆ ಶಿಸಿ ದಿನಕರನ್ ನೀಡಿದ್ದು ತೀರ್ಪು ಎಂದು ರು ಆರೋಪಿಸಿದ್ದಾರೆ.

ತಮಿಳುನಾಡಿನ ಪೆರಂಬೂರಿನಲ್ಲಿ ಬಿನ್ನಿ ಲಿಮಿಟೆಡ್‌ನ ಡು 70 ಎಕರೆ ಬೆಲೆಬಾಳುವ ಜಮೀನಿತ್ತು. ಅದರ ನಿರ್ದೇಶಿತ ಮೌಲ್ಯ 180 ಕೋಟಿ ರೂಪಾಯಿ ತ್ತು. ಆದರೆ, ಅದನ್ನು ಕೇವಲ 66 ಕೋಟಿಗಳಿಗೆ ಜು ಹಾಕುವುದಕ್ಕೆ ಇದೇ ದಿನಕರನ್ ಯಾಕೆ ತೀರ್ಪು ದ್ದರು ಎಂಬುದು ವಕೀಲರ ಪ್ರಶ್ನೆಯಾಗಿದೆ.

ದಿನಕರನ್ ಕರ್ನಾಟಕ ಹೈಕೋರ್ಟಿಗೆ ಮುಖ್ಯ ಮೂರ್ತಿಯಾಗಿ ಬಂದ ಮೇಲೆ ದಾಖಲೆಯ ಯಲ್ಲಿ ಪ್ರಕರಣಗಳ ವಿಲೇವಾರಿ ಮಾಡಿದ್ದರ ಬಗ್ಗೆಯೂ ರು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಒಂದು ಪ್ರತಿ 30 ಸೆಕೆಂಡಿಗೆ ಒಂದು ಅರ್ಜಿಯಂತೆ ರಿಯ ಅವಧಿಯಲ್ಲಿ 300 ಅರ್ಜಿಗಳನ್ನು ವಿಲೇವಾರಿ ಲಾಯಿತು. ದಿನಕರನ್ ಅವರೇ ಖುದ್ದಾಗಿ 20 ಷಗಳಲ್ಲಿ 46 ಕೇಸುಗಳಿಗೆ ಸಂಬಂಧಿಸಿದಂತೆ ನು ನೀಡಿದ್ದರು. ಅಂದು ಜಾಮೀನು ಪಡೆದವರಲ್ಲಿ ನೂರ್ ಜುವೆಲ್ಲರ್ಸ್ ದರೋಡೆ ಪ್ರಕರಣದಲ್ಲಿ ಯಾಗಿದ್ದ ವಸಂತ ಸಾಲಿಯಾನ್ ಕೂಡ ಇದ್ದ.

ನ್ನೊಂದು ಪ್ರಕರಣದಲ್ಲೂ ದಿನಕರನ್ ಅವರ ನಿಲುವಿನ ವಕೀಲರ ಸಂಶಯ ವ್ಯಕ್ತಪಡಿಸಿದ್ದಾರೆ. ಅದು ಟಕದಲ್ಲಿ ನಡೆಯುತ್ತಿರುವ ಗಣಿಗಾರಿಕೆಗೆ ಸಂಬಂಧಿ ಗಣಿಗಾರಿಕೆ ನಡೆಸುತ್ತಿದ್ದವರೊಬ್ಬರು 540 ಎಕರೆ ಭೂಮಿಯನ್ನು ಲೀಸ್ ಆಧಾರದಲ್ಲಿ ಕೊಡಬೇಕೆಂದು ರಕ್ಕೆ ಅರ್ಜಿ ಸಲ್ಲಿಸಿದ್ದರು. ಸರ್ಕಾರ 380 ಅರಣ್ಯ ಯಲ್ಲಿ ಗಣಿಗಾರಿಕೆ ನಡೆಸುವುದಕ್ಕೆ ಅನುಮತಿ ತ್ತು. ಇದರ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ಾಯಿತು. ಅದನ್ನು ವಿಚಾರಣೆ ನಡೆಸಿದ ಏಕ ನ್ಯಾಯಪೀಠವು ಸರ್ಕಾರ ಲೈಸನ್ಸ್ ಕೊಡುವಲ್ಲಿ ನು, ನೀತಿನಿಯಮಗಳನ್ನು ಉಲ್ಲಂಘಿಸಿದೆ ಎಂದು ಯಪಟ್ಟಿತು. ಆದರೆ, ಅದೇ ಪ್ರಕರಣ ಮುಖ್ಯ ಮೂರ್ತಿ ಪಿ.ಡಿ.ದಿನಕರನ್ ಅವರ ಎದುರು ಗ ಸರ್ಕಾರ ಗಣಿಗಾರಿಕೆಗೆ ನೀಡಿದ್ದ ಅನುಮತಿಯನ್ನು ಮಾನ್ಯ ಮಾಡಿದರಲ್ಲದೇ, ಇನ್ನಷ್ಟು ಭೂಮಿಯನ್ನು ಬೇಕೆಂದು ನಿರ್ದೇಶಿಸಿದರು ಯಾಕೆ ಎಂದೂ ರು ಪ್ರಶ್ನಿಸಿದ್ದಾರೆ.

ದ್ರಾಸಿನ ವಕೀಲರು ಸಲ್ಲಿಸಿರುವ ಮನವಿಯಲ್ಲಿ ಆರೋಪ ದಿನಕರನ್ ಅವರ ಅಧಿಕೃತ ಕಾರಿಗೆ ಧಿಸಿತ್ತು, ಅವರ ಕಾರ್ (ಕೆಎ-03, ಜಿಎ-5767) ಪ್ಲೇಟ್ ಕೆಂಪು ಹಿಂಬಣ್ಣವನ್ನು ಹೊಂದಿದ್ದು ಮೇಲೆ ಬಂಗಾರದ ಬಣ್ಣದ ಲೋಹ ಅಕ್ಷರಗಳನ್ನು ದೆ. ವಾಸ್ತವದಲ್ಲಿ ಮೋಟಾರು ವಾಹನ ನಿಯಮಗಳ ದೇಶದ ರಾಷ್ಟ್ರಪತಿ ಹಾಗೂ ರಾಜ್ಯಗಳ ರಾಜ್ಯಪಾಲರು ಈ ರೀತಿಯ ನಂಬರ್ ಪ್ಲೇಟ್‌ಗಳನ್ನು ಹಾಕಿ ಹುದು. ದೇಶದ ಪ್ರಧಾನಿ ಹಾಗೂ ಸುಪ್ರೀಂ ನ ಮುಖ್ಯ ನ್ಯಾಯಮೂರ್ತಿಗಳೂ ಕೂಡ ಈ ನಂಬರ್ ಪ್ಲೇಟ್‌ಗಳನ್ನು ಅಳವಡಿಸಿಕೊಳ್ಳುವಂತಿಲ್ಲ. ಪಿ.ಡಿ.ದಿನಕರನ್ ಆ ನಿಯಮವನ್ನೆಲ್ಲಾ ಗಾಳಿಗೆ ದ್ದಾರೆ ಎಂದು ಆರೋಪಿಸಲಾಗಿದೆ.

ಗೆ, ನ್ಯಾಯಾಧೀಶ ಪಿ.ಡಿ. ದಿನಕರನ್ ವಿರುದ್ಧ ನ ಕೆಲ ವಕೀಲರ ಹತ್ತು ಹಲವು ಆರೋಪಗಳನ್ನು ದ್ದಾರೆ. ಇದನ್ನು ನೋಡಿ ಚಿಂತಾಕ್ರಾಂತರಾಗಿರುವ ್. ನಾರಿಮನ್ ಮತ್ತು ಇತರೆ ಹಿರಿಯ ವಕೀಲರು ್ ಅವರ ವಿರುದ್ಧ ಮಾಡಲಾಗಿರುವ ಆರೋಪ ವಿಚಾರಣೆಗೆ ಒಳಪಡಿಸಬೇಕೆಂದೂ, ಅಲ್ಲಿಯತನಕ ಸುಪ್ರೀಂಕೋರ್ಟಿನ ನ್ಯಾಯಮೂರ್ತಿಯಾಗಿ ಬಾರದೆಂದೂ ಕೋರಿದ್ದಾರೆ.

ಗ ರಾಷ್ಟ್ರಪತಿ, ಪ್ರಧಾನಿ, ಕಾನೂನು ಸಚಿವ ಮತ್ತು ಕ ಜವಾಬ್ದಾರಿಗಿ ಸುಪ್ರೀಂಕೋರ್ಟಿನ ಮುಖ್ಯ ಮೂರ್ತಿ ಬಾಲಕೃಷ್ಣನ್ ಅವರು ಏನು ಮಾಡು ಇಡೀ ದೇಶವೇ ಕಾಯುತ್ತಿದೆ..


● ವರದಿಗಾರ

ಗೋರಿಪಾಳ್ಯ: ಜಮೀರ್-ಆರಿಫ್ ಭಾಯಿ ಭಾಯಿ!

ತನ್ನ ಹತ್ಯೆಗೆ ಚಾಮರಾಜಪೇಟೆ ಶಾಸಕ ಜಮೀರ್ ಮತ್ತು ಗೋರಿಪಾಳ್ಯದ ಪೊಲೀಸ್ ಇನ್ಸ್‌ಪೆಕ್ಟರ್ ಕೋದಂಡರಾಮ ಇಬ್ಬರೂ ಸೇರಿಕೊಂಡೇ ಕತ್ತಿಮಸೆಯುತ್ತಿದ್ದಾರೆಂದು ಹಳೇ ಪಂಟರ್ ಕಂ ಹಾಲಿ ಕಾಂಗ್ರೆಸ್ ನಾಯಕ ಅಲ್ತಾಫ್ ಖಾನ್ ಗೃಹ ಸಚಿವ ಆಚಾರ್ಯರಿಗೆ ದೂರು ಕೊಟ್ಟಿದ್ದಾನೆ. ತನ್ನ ತಮ್ಮಂದಿರನ್ನು ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಗ್ಯಾಂಗ್ ನಡುರಸ್ತೆಯಲ್ಲಿ ಕೊಚ್ಚಿಕೊಂದಿದ್ದರ ವಿರುದ್ಧ ಕೋರ್ಟಿನಲ್ಲಿ ಸಾಕ್ಷಿ ಹೇಳದಂತೆ ಎಮ್ಮೆಲ್ಲೇ ಜಮೀರ್ ಬೆದರಿಕೆ ಹಾಕಿದ್ದಾರಂತೆ.

ಗೋರಿಪಾಳ್ಯದ ಮುಸ್ಲಿಂ ಅಂಡರ್‌ವರ್ಲ್ಡ್ ಮತ್ತೆ ಬಗ್ಗಡಗೊಂಡಿದೆ.

ತನ್ನ ಹತ್ಯೆಗೆ ಚಾಮರಾಜಪೇಟೆ ಶಾಸಕ ಜಮೀರ್ ಮತ್ತು ಗೋರಿಪಾಳ್ಯದ ಪೊಲೀಸ್ ಇನ್ಸ್‌ಪೆಕ್ಟರ್ ಕೋದಂಡರಾಮ ಇಬ್ಬರೂ ಸೇರಿಕೊಂಡೇ ಕತ್ತಿಮಸೆಯುತ್ತಿದ್ದಾರೆಂದು ಹಳೇ ಪಂಟರ್ ಕಂ ಹಾಲಿ ಕಾಂಗ್ರೆಸ್ ನಾಯಕ ಅಲ್ತಾಫ್ ಖಾನ್ ಗೃಹ ಸಚಿವ ಆಚಾರ್ಯರಿಗೆ ದೂರು ಕೊಟ್ಟಿದ್ದಾನೆ. 2004ರ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿದ್ದ ತನ್ನ ತಮ್ಮಂದಿರಾದ ಅಂಜದ್ ಮತ್ತು ಏಜಾಜ್‌ರನ್ನು ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಗ್ಯಾಂಗ್ ನಡುರಸ್ತೆಯಲ್ಲಿ ಕೊಚ್ಚಿಕೊಂದಿದ್ದರ ವಿರುದ್ಧ ಕೋರ್ಟಿನಲ್ಲಿ ಸಾಕ್ಷಿ ಹೇಳದಂತೆ ಎಮ್ಮೆಲ್ಲೇ ಜಮೀರ್ ಬೆದರಿಕೆ ಹಾಕಿದ್ದಾರಂತೆ.



ಜಮೀರ್

ಎಮ್ಮೆಲ್ಲೆಯ ಅಣತಿಯ ಮೇರೆಗೇ ಗೋರಿಪಾಳ್ಯದ ಇನ್ಸ್‌ಪೆಕ್ಟರ್ ಕೋದಂಡರಾಮ್ ಹಂತಕರಾದ ಆರಿಫ್ ಗ್ಯಾಂಗಿನ ಜೊತೆ ಕೈ ಜೋಡಿಸಿದ್ದಾರೆಂದೂ ತನ್ನನ್ನು ಕೊಲ್ಲುವಲ್ಲಿ ಅವರಿಗೆ ನೆರವಾಗುವುದಕ್ಕೆಂದೇ ತನಗೆ ಕಾವಲಿದ್ದ ಪೊಲೀಸ್ ಪಹರೆಯನ್ನು ಹಿಂಪಡೆದಿದ್ದಾರೆಂದೂ ಅಲ್ತಾಫ್ ವರಿಷ್ಠಾಧಿಕಾರಿಗಳಿಗೆ ದೂರು ಕೊಡುತ್ತಲೇ ಇದ್ದಾನೆ.

ಅಲ್ತಾಫ್‌ನ ಆರೋಪ ಮತ್ತು ಆತಂಕಕ್ಕೆ ಇರುವ ಕಾರಣಗಳೂ ವಿಚಿತ್ರವಾಗಿವೆ. ಅದು ಆತನ ಇಬ್ಬರು ತಮ್ಮಂದಿರ ಕೊಲೆ ಕೇಸು. 2004ರ ಚುನಾವಣೆಯಲ್ಲಿ ಲೇಔಟ್ ಕೃಷ್ಣಪ್ಪನವರ ಜೊತೆ ಅಲ್ತಾಫ್ ಪ್ರಚಾರಕ್ಕೆಂದು ಹೋಗಿದ್ದಾಗಲೇ ಗೋರಿಪಾಳ್ಯದ ಮಾಜಿ ಕೌನ್ಸಿಲರ್ ಆರಿಫ್ ಗ್ಯಾಂಗ್ ದಾಳಿ ನಡೆಸಿದೆ. ಅದೃಷ್ಟವಶಾತ್ ಅಲ್ತಾಫ್ ಬಚಾವಾದರೂ ಆತನ ಅಮಾಯಕ ತಮ್ಮಂದಿರಾದ ಅಂಜದ್ ಮತ್ತು ಏಜಾಜ್‌ರನ್ನು ಆರೀಫ್ ಮತ್ತು ಆತನ ಮಕ್ಕಳಾದ ಇಮ್ರಾನ್, ಇರ್ಫಾನ್ ಮುಂತಾದವರೆಲ್ಲ ಸೇರಿ ಕೊಲ್ಲುತ್ತಾರೆ.



ಇಮ್ರಾನ್

ಈ ಪ್ರಕರಣದಲ್ಲಿ ಅಣ್ಣ ಅಲ್ತಾಫನೇ ಪ್ರತ್ಯಕ್ಷದರ್ಶಿಯಾದ್ದರಿಂದ ಕೇಸಿಗೆ ಆತನ ಸಾಕ್ಷಿಯೇ ಮುಖ್ಯ. ಅಲ್ತಾಫ್‌ಗೂ ಆರಿಫ್‌ಗೂ ಇರುವ ಹಳೇ ದುಷ್ಮನಿ ಗೊತ್ತಿದ್ದೂ ಎಮ್ಮೆಲ್ಲೆ ಜಮೀರ್ ಈ ಪ್ರಕರಣಕ್ಕೆ ತಲೆಹಾಕಿದ್ದು ಇಲ್ಲಿಗೆ ವರ್ಷದ ಹಿಂದೆ. ಕಳೆದ ಚುನಾವಣೆಯಲ್ಲಿ ಚಾಮರಾಜಪೇಟೆಯ ಜೆಡಿಎಸ್ ಅಭ್ಯರ್ಥಿಯಾಗಿದ್ದ ಜಮೀರ್ ಪರವಾಗಿ ಇನ್ನಿಲ್ಲದಂತೆ ಪ್ರಚಾರ ಮಾಡಿದ್ದು ಆರಿಫ್ ಮತ್ತು ಆತನ ಮಗ ಕೇಡಿ ಇಮ್ರಾನ್ ಗ್ಯಾಂಗ್. ಗೆದ್ದ ಋಣ ತೀರಿಸಬೇಕಲ್ಲ; ಅದಕ್ಕೆ ಜಮೀರ್ ಅಲ್ತಾಫ್‌ನನ್ನು ಕರೆಸಿ ತಮ್ಮಂದಿರ ಕೊಲೆ ಕೇಸಿಗೆ ಸಾಕ್ಷಿ ಹೇಳಕೂಡದು ಎಂದೂ ಅದಕ್ಕೆ ಪ್ರತಿಯಾಗಿ ಆರಿಫ್‌ನಿಂದ ಐವತ್ತು ಲಕ್ಷ ಕೊಡಿಸುತ್ತೇನೆಂದೂ ಡೀಲು ಕುದುರಿಸಲು ಮುಂದಾಗಿದ್ದಾರೆ.

ಕೊಲೆಯಾಗಿದ್ದು ನನ್ನ ತಮ್ಮಂದಿರು. ಐವತ್ತಲ್ಲ, ಎರಡು ಕೋಟಿ ಕೊಟ್ಟರೂ ನನ್ನ ತಮ್ಮಂದಿರು ಸಿಗುತ್ತಾರಾ? ಎಂದೇ ಅಲ್ತಾಫ್ ತಿರುಗಿಬಿದ್ದಿದ್ದಾನೆ. ತಮ್ಮಂದಿರ ಜೋಡಿ ಕೊಲೆ ಕೇಸಿನಲ್ಲಿ ಆರಿಫ್ ಮತ್ತಾತನ ಮಕ್ಕಳು ಇವತ್ತಲ್ಲಾ ನಾಳೆ ಜೈಲು ಪಾಲಾಗುವುದಂತೂ ಶತಸ್ಸಿದ್ಧ. ಹಾಗಂತ ಆರಿಫ್ ಸುಮ್ಮನೆ ಕೂತಿಲ್ಲ. ತಾನು ಜೈಲು ಸೇರುವುದಕ್ಕೂ ಮೊದಲೇ ಅಲ್ತಾಫ್‌ನನ್ನು ಮುಗಿಸಿಬಿಡಲು ಒಂದಲ್ಲಾ ಒಂದು ರೌಡಿ ಗ್ಯಾಂಗನ್ನು ಛೂಬಿಡುತ್ತಲೇ ಇದ್ದ. ಇದು ಗೊತ್ತಾಗಿಯೇ ಅಲ್ತಾಫ್ ಪೊಲೀಸ್ ರಕ್ಷಣೆ ಕೋರಿದ. ಗೋರಿಪಾಳ್ಯದ ಅಲ್ತಾಫ್ ಮನೆ ಮುಂದೆ ದಿನದ ಯಾವ ಗಳಿಗೆಯಲ್ಲೂ ಕನಿಷ್ಠ ಇಬ್ಬರು ಬಂದೂಕುಧಾರಿ ಪೊಲೀಸರಿರುತ್ತಿದ್ದರು.

ಹೀಗಿದ್ದ ಪೊಲೀಸ್ ಪಹರೆಯನ್ನು ಏಕಾಏಕಿ ರದ್ದುಗೊಳಿಸಿದ್ದು ಜೆಜೆ ನಗರದ ಇನ್ಸ್‌ಪೆಕ್ಟರ್ ಕೋದಂಡರಾಮ. ಮೊನ್ನೆ ಅಂದರೆ ಸೆಪ್ಟೆಂಬರ್ 3ರಂದು ಪೊಲೀಸ್ ಕಾವಲನ್ನು ಇದ್ದಕ್ಕಿದ್ದಂತೆ ನಿಲ್ಲಿಸಿದ ಇನ್ಸ್‌ಪೆಕ್ಟರ್ ಕೋದಂಡರಾಮ್ ಬಳಿ ಹೋದ ಅಲ್ತಾಫ್‌ಗೆ ಅಚ್ಚರಿ ಕಾದಿತ್ತು. 'ಅಲ್ಲಪ್ಪಾ ಯಾಕೆ ಸುಮ್ನೆ ಗಲಾಟೆ? ಬೇಕಾದ್ರೆ ಒಂದಷ್ಟು ದುಡ್ಡೂ ಕೊಡ್ತಾರೆ. ಆರಿಫ್ ಜೊತೆ ಕಾಂಪ್ರೊಮೈಸ್ ಆಗ್ಬಿಡು...!' ಎಂದು ಕೋದಂಡರಾಮ್ ಹೂಂಕರಿಸಿದ. ಅಲ್ಲಿಗೆ ಹಂತಕರ ಜೊತೆ ಇನ್ಸ್‌ಪೆಕ್ಟರ್ ಕೈ ಜೋಡಿಸಿದ್ದು ಅಲ್ತಾಫ್‌ಗೆ ನಿಕ್ಕಿಯಾಯಿತು.


ಹೇಳಿಕೇಳಿ ಇನ್ಸ್‌ಪೆಕ್ಟರ್ ಕೋದಂಡರಾಮ್‌ರನ್ನು ಜೆಜೆನಗರ ಪೊಲೀಸ್ ಠಾಣೆಗೆ ಹಾಕಿಸಿಕೊಂಡಿದ್ದೇ ಎಮ್ಮೆಲ್ಲೆ ಜಮೀರ್. 'ನಾನು ಎಮ್ಮೆಲ್ಲೆಯಾದೆ ಅಂದ್ರೆ ಆರಿಫ್ ಎಮ್ಮೆಲ್ಲೆ ಆದ ಹಾಗೇನೆ' ಎಂದು ಕಂಡಕಂಡಲ್ಲಿ ಜಮೀರ್ ಭಾಷಣ ಮಾಡುತ್ತಾರೆ. ಆರಿಫ್ ಗ್ಯಾಂಗ್ ವಿರುದ್ಧ ಕೋರ್ಟಿಗೆ ಬಂದು ಸಾಕ್ಷಿ ಹೇಳದಂತೆ ಸ್ವತಃ ಎಮ್ಮೆಲ್ಲೆಯೇ ಅಲ್ತಾಫನನ್ನು ಕರೆಸಿ ಧಮಕಿ ಕೊಡುತ್ತಾರೆ. ಇನ್ನು ಇನ್ಸ್‌ಪೆಕ್ಟರ್ ಕೋದಂಡರಾಮ್ ವಿಷಯಕ್ಕೆ ಬಂದರೆ ಇಡೀ ಜೆಜೆನಗರ ಪೊಲೀಸ್ ಠಾಣೆಯನ್ನೇ ಆರಿಫ್‌ನ ಹಂತಕ ಪಡೆಗೆ ಗುತ್ತಿಗೆ ಕೊಟ್ಟಂತೆ ವರ್ತಿಸುತ್ತಾರೆ.



ಅಲ್ತಾಫ್

ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ಯಾರನ್ನೋ ಕತ್ತರಿಸಿದನೆಂದು ಆರಿಫ್ ಶಿಷ್ಯ ಶಾನು ರೌಡಿಯನ್ನು ಪೊಲೀಸರು ಠಾಣೆಗೆ ಎಳೆದೊಯ್ದರೆ, ಪಾತಕಿ ಎಸ್.ಐ. ಕಾಲರ್ ಪಟ್ಟಿ ಹಿಡಿದು ಹಲ್ಲೆಗೆ ಯತ್ನಿಸುತ್ತಾನೆ. ಎಸ್‌ಐನನ್ನು ಏಕವಚನದಲ್ಲಿ ಮಾತನಾಡಿಸಿ, ಏನ್ ಮಾಡ್ಕೋತೀಯೋ ಎಂದು ಪ್ಯಾಂಟಿನ ಜಿಪ್ ಬಿಚ್ಚಿ ಹೀಯಾಳಿಸಿದ್ದಾನೆ. ಬೇರೆ ಯಾರೇ ಇನ್ಸ್‌ಪೆಕ್ಟರ್ ಆಗಿದ್ದರೆ ಒದ್ದು ಲಾಕಪ್ಪಿಗೆ ಹಾಕುತ್ತಿದ್ದರು. ಆದರೆ ಇನ್ಸ್‌ಪೆಕ್ಟರ್ ಕೋದಂಡರಾಮ್ ಉಗಿಸಿಕೊಂಡ ಪೊಲೀಸರಿಗೇ ಸಾಂತ್ವನ ಹೇಳಿ ರೌಡಿ ಶಾನುನನ್ನು ಬಿಟ್ಟು ಕಳಿಸಿದ್ದಾರೆ!

ಇದು ಇನ್ಸ್‌ಪೆಕ್ಟರ್ ಕೋದಂಡರಾಮ್ ಮತ್ತು ಆರಿಫ್ ಹಂತಕ ಪಡೆಗಿರುವ ಆತ್ಮೀಯತೆ. ಇದಾಗಿ ಎರಡು ತಿಂಗಳಿಗೇ ಗಸ್ತು ಡ್ಯೂಟಿಯಲ್ಲಿದ್ದ ಜೆಜೆನಗರ ಪೊಲೀಸ್ ಠಾಣೆಯ ಪೇದೆಗಳಾದ ಪುಟ್ರಾಜು ಮತ್ತು ಮಲ್ಲೇಶಪ್ಪ ಆರಿಫ್ ಮನೆಯೆದುರಿಗೆ ಗಲಾಟೆ ಮಾಡುತ್ತಿದ್ದವನೊಬ್ಬನನ್ನು ಬಂಧಿಸಲು ಯತ್ನಿಸಿದ್ದಾರೆ. ಅದೆಲ್ಲಿದ್ದರೋ ಆರಿಫ್ ಮಕ್ಕಳಾದ ಇಮ್ರಾನ್ ಮತ್ತು ಇರ್ಫಾನ್ ಬಂದಿದ್ದೇ ಪೊಲೀಸರ ರೈಫಲ್ ಕಿತ್ತುಕೊಂಡು ಓಡಿಸಿದ್ದಾರೆ. ಪೇದೆಗಳ ನೆರವಿಗೆಂದು ಬಂದ ಎಸ್.ಐ.ಸತ್ಯನಾರಾಯಣ ಸಿಂಗ್‌ರನ್ನೇ ಆರಿಫ್ ಗ್ಯಾಂಗ್ ಏಕವಚನದಲ್ಲಿ ಹೀಯಾಳಿಸಿ ಓಡಿಸಿದೆ. ಹೀಗಿದ್ದೂ ಇನ್ಸ್‌ಪೆಕ್ಟರ್ ಕೋದಂಡರಾಮ್ ಆರಿಫ್ ಗ್ಯಾಂಗಿಗೂ ಒದೆತಿಂದ ಪೊಲೀಸರಿಗೂ ರಾಜಿ ಮಾಡಿಸುತ್ತಾರೆಯೇ ಹೊರತು ಹಂತಕರ ಮೈಮುಟ್ಟುವುದಿಲ್ಲ!



ಆರಿಫ್


ಸದ್ಯ ಗೋರಿಪಾಳ್ಯದಲ್ಲಿ ಆರಿಫ್ ಗ್ಯಾಂಗಿನ ಪುಂಡಾಟಿಕೆ ವಿರುದ್ಧ ಯಾರೇ ದೂರೊಯ್ದರೂ ಇನ್ಸ್‌ಪೆಕ್ಟರ್ ಸಾಹೇಬರು ರಾಜಿ ಮಾಡಿ ಕಳಿಸುತ್ತಾರೆಯೇ ಹೊರತು ಒದೆ ತಿಂದವರ ಪರ ವಹಿಸುವುದಿಲ್ಲ. ಇದು ಕೇವಲ ಅಲ್ತಾಫ್ ಅನುಯಾಯಿಗಳ ಆರೋಪವಷ್ಟೇ ಅಲ್ಲ, ಸ್ವತಃ ಜೆಜೆನಗರದ ಪೊಲೀಸರಿಗೇ ಇನ್ಸ್‌ಪೆಕ್ಟರ್ ವಿರುದ್ಧ ಹೇಸಿಗೆ ಶುರುವಾಗಿದೆ. ಇಂಥಾ ಕೋದಂಡರಾಮ್ ಸಾಹೇಬರು ಏಕಾಏಕಿ ಅಲ್ತಾಫ್ ರಕ್ಷಣೆಗಿದ್ದ ಪೊಲೀಸರನ್ನು ಹಿಂಪಡೆದಿದ್ದಕ್ಕೆ ಕಾರಣವಿಲ್ಲ. ರಕ್ಷಣೆಕೊಡಿ ಎಂದು ಕೇಳಹೋದ ಅಲ್ತಾಫ್‌ಗೆ ತಮ್ಮಂದಿರ ಕೊಲೆ ವಿರುದ್ಧ ಸಾಕ್ಷಿ ಹೇಳದಂತೆ ಹಂತಕರ ವಕಾಲತ್ತು ವಹಿಸುವುದೂ ಬೇಕಿರಲಿಲ್ಲ. ವಿಧಿಯಿಲ್ಲದೇ ಅಲ್ತಾಫ್ ಬ್ಯಾಟರಾಯನಪುರ ಎಸಿಪಿ ಜಮೀಲ್ ಅಹ್ಮದ್‌ಗೆ ದೂರು ಕೊಟ್ಟಿದ್ದಾನೆ. ಡಿ.ಜಿ.ಪಿ. ಅಜಯ್‌ಸಿಂಗ್, ಪೊಲೀಸ್ ಕಮೀಷನರ್ ಬದರಿ ಸೇರಿದಂತೆ ಗೃಹಮಂತ್ರಿಯ ತನಕ ದೂರು ಹೋಗಿದೆ. ಸದ್ಯಕ್ಕೇನೋ ಎಸಿಪಿಯೇ ನಿಂತು ಅಲ್ತಾಫ್‌ಗೆ ಮತ್ತೆ ಪೊಲೀಸ್ ರಕ್ಷಣೆ ಕೊಡಿಸಿದ್ದಾರೆ.

ಆದರೆ ಒಬ್ಬ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಯಾಗಿ ಕೊಲೆಗೀಡಾದ ತಮ್ಮಂದಿರ ಪರವಾಗಿ ಹಂತಕರ ವಿರುದ್ಧ ಸಾಕ್ಷಿ ಹೇಳುವವನಿಗೇ ಧಮಕಿ ಹಾಕುವ ಕೋದಂಡರಾಮ್ ಕೈಗೆ ಗೋರಿಪಾಳ್ಯದಂಥ ಸೂಕ್ಷ್ಮ ಪೊಲೀಸ್ ಠಾಣೆ ಕೊಟ್ಟರೆ ಇನ್ನು ಜನಸಾಮಾನ್ಯರ ಗತಿ ಏನು?

ಎಮ್ಮೆಲ್ಲೆ ಜಮೀರ್ ಅಹ್ಮದ್‌ಗಿದು ಬೇಕಿತ್ತಾ? ರೌಡಿಗಳನ್ನು ಕಟ್ಟಿಕೊಂಡು ಆರ್.ವಿ. ದೇವರಾಜ್ ನಾಶವಾಗಿದ್ದನ್ನು ಕಂಡ ಮೇಲೂ ಜಮೀರ್ ಸಾಹೇಬರಿಗೆ ಬುದ್ಧಿ ಬೇಡವೇ?

● ರಾ.ಸೋಮನಾಥ್








ಪಾಂಡವಪುರ: ಕಲ್ಲುಕಳ್ಳ ಡಾ. ರವಿಶಂಕರನ ಪುಂಡಾಟ


ಪಾಂಡವಪುರ ಕಲ್ಲುಗಳ್ಳ ಡಾ. ರವಿಶಂಕರ್ ಗೂಂಡಾಗಿರಿಗೆ ಇಳಿದಿದ್ದಾನೆ. ಇವನ ಅಕ್ರಮ ಕಲ್ಲು ಗಣಿಗಾರಿಕೆಯಿಂದ ತೊಂದರೆಗೊಳಗಾದ ಗ್ರಾಮಸ್ಥರ ಪ್ರತಿಭಟನೆಯನ್ನು ಕಾನೂನಾತ್ಮಕವಾಗಿ ಎದುರಿಸಲಾಗದ ರವಿಶಂಕರ್ ಶಾಸಕ ಪುಟ್ಟರಾಜುವಿನ ಬೆಂಬಲದಿಂದ ಗೂಂಡಾಗಳನ್ನು ಛೂಬಿಟ್ಟು ಹಲ್ಲೆ ನಡೆಸಿದ್ದಾನೆ. ನೂರಾರು ರೈತ ಸಂಘದ ಕಾರ್ಯಕರ್ತರು ಆಸ್ಪತ್ರೆ ಸೇರಿದ್ದಾರೆ. ರೈತ ಮುಖಂಡ ಕಾಳೇಗೌಡರನ್ನು ಮುಗಿಸಲು ಬೆಟ್ಟಹಳ್ಳಿಕುಮಾರ, ಆಟೋ ಮೆಂಟಲ್ ಮಂಜ, ಕೋಳಿಬಾಲುಗಳೆಂಬ ಗೂಂಡಾಗಳಿಗೆ ಸುಪಾರಿ ಕೊಟ್ಟಿದ್ದಾನೆ ರವಿಶಂಕರ್. ಸದ್ಯಕ್ಕೆ ಸ್ವಲ್ಪದರಲ್ಲಿ ಪಾರಾಗಿರುವ ಮಾದೇಗೌಡರೂ ಆಸ್ಪತ್ರೆ ಸೇರಿದ್ದಾರೆ.



ಶಿವಗಿರಿ ಅಸೋಷಿಯೇಷನ್ ಹೆಸರಿನಲ್ಲಿ ಶಿವಗಿರಿ ಬೆಟ್ಟವನ್ನೇ ಅಗಿದು ನುಂಗಿ ಹಾಕುತ್ತಿದ್ದಾನೆ ರವಿಶಂಕರ್. ಬೆಟ್ಟದ ತಪ್ಪಲಿನ ಪಕ್ಕದಲ್ಲೇ ಇರುವ ವಡ್ಡರಹಳ್ಳಿ ಗ್ರಾಮದ ಜನತೆ ನಿತ್ಯ ಕಲ್ಲುಸ್ಫೋಟದ ಸದ್ದಿಗೆ, ಕಂಪನಕ್ಕೆ, ಧೂಳಿಗೆ ತತ್ತರಿಸುತ್ತಿದ್ದಾರೆ. ವಡ್ಡರಹಳ್ಳಿಯಲ್ಲಿರುವ ಇನ್ನೂರು ಮನೆಗಳೂ ಬಿರುಕುಬಿಟ್ಟಿವೆ. ಈ ಬೆಟ್ಟ ಶ್ರೇಣಿಯಲ್ಲಿನ ಗಣಿಗಾರಿಕೆಯಿಂದ ಕೆಆರ್‌ಎಸ್ ಡ್ಯಾಮ್‌ಗೂ ಅಪಾಯವಿದೆ ಎಂದು ಪರಿಸರ ತಜ್ಞರ ವರದಿ ಹೇಳಿದ್ದರೂ ಅಧಿಕಾರಿಗಳು ರವಿಶಂಕರ್ ದುಡ್ಡು ನುಂಗಿ ತೆಪ್ಪಗಿದ್ದಾರೆ. ಶಿವಗಿರಿ ಬೆಟ್ಟದ ಸರ್ವೆ ನಂಬರ್ 80/೩ ನಲ್ಲಿ 23 ಎಕರೆ ಪ್ರದೇಶದಲ್ಲಿ ಗಣಿಗಾರಿಕೆಗೆ ಪರವಾನಗಿ ಪಡೆದಿರುವ ರವಿಶಂಕರ್‌ನ ಇಡೀ ಬೆಟ್ಟಕ್ಕೆ ಕೈಹಾಕಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾನೆ. 50 ರಿಂದ 70 ಅಡಿವರೆಗೆ ರಿಗ್‌ಬೋರ್ ಹಾಕಿ ಪ್ರತಿದಿನ ರಾತ್ರಿ ಡೈನಾಮೆಟ್ ಸ್ಫೋಟಿಸುತ್ತಿದ್ದಾನೆ.

ರೈತ ಸಂಘದ ನೇತೃತ್ವದಲ್ಲಿ ಈ ಕಲ್ಲುಗಳ್ಳನ ವಿರುದ್ಧ ಗ್ರಾಮಸ್ಥರು ಸಂಘಟಿತರಾಗಿ ಹೋರಾಟಕ್ಕೆ ಇಳಿದಿದ್ದಾರೆ. ಶಿವಗಿರಿ ಕಂಪನಿಗೆ ಬೀಗ ಜಡಿದು ಕಲ್ಲು ಒಡೆಯುವುದನ್ನು ನಿಲ್ಲಿಸಿದ್ದರು. ಜಿಲ್ಲಾ ನ್ಯಾಯಾಲಯದಿಂದ ಗಣಿಗಾರಿಕೆಗೆ ತಡೆಯಾಜ್ಞೆಯನ್ನು ತಂದು ರವಿಶಂಕರನಿಗೆ ಸವಾಲು ಎಸೆದರು. ಆದರೆ ಅಧಿಕಾರಿಗಳ ನೆರವಿನಿಂದ 144 ಸೆಕ್ಷನ್ ವಿಧಿಸಿ ಮತ್ತೆ ಗಣಿಗಾರಿಕೆಗೆ ಇಳಿದ ರವಿಶಂಕ್ರ ಗೂಂಡಾಗಳ ನೆರವನ್ನೂ ಪಡೆಯತೊಡಗಿದ. ಪಟ್ಟುಬಿಡದ ಗ್ರಾಮಸ್ಥರು ಗೂಂಡಾಗಳನ್ನು ಓಡಿಸಿ ಗಣಿಗಾರಿಕೆಯನ್ನು ನಿಲ್ಲಿಸಿದರು. ಆಗ ಮಂಡ್ಯ ಪಾಂಡವಪುರಗಳಿಂದ ರೌಡಿ ಪಡೆ ಕರೆಸಿ ಪ್ರತಿಭಟಿಸುತ್ತಿದ್ದ ಜನರ ಮೇಲೆ ರವಿಶಂಕ್ರ ಹಲ್ಲೆ ನಡೆಸಿದ. ನೂರಾರು ಜನ ಗಾಯಗೊಂಡು ಆಸ್ಪತ್ರೆ ಸೇರುವಂತೆ ಮಾಡಿದ್ದಾನೆ. ಆರು ವರ್ಷದ ಪವನ ಎಂಬ ಮಗುವಿನ ತಲೆ ಒಡೆದು ಹಾಕಿದ್ದಾನೆ.

ಹಲ್ಲೆ ಮಾಡಿಸಿದ ಕಳ್ಳ ರವಿಶಂಕರ್ ಬಾಡಿಗೆ ಜನರನ್ನು ಮಂಡ್ಯಕ್ಕೆ ತಂದು, ತನ್ನ ಗಣಿಗಾರಿಕೆಗೆ ರಕ್ಷಣೆ ನೀಡಬೇಕೆಂದು ಪ್ರತಿಭಟನೆ ನಡೆಸುವ ಉದ್ಧಟತನವನ್ನು ಮಾಡಿದ್ದಾನೆ. ಎಲ್ಲೂ ನೆಲೆ ಕಾಣದೇ ಅಬ್ಬೆಪಾರಿಗಳಾಗಿರುವ ದ್ಯಾವಪ್ಪ, ಹನಕೆರೆ ಶಶಿ, ಬಿ.ಸಿ. ಶಿವಾನಂದರಂಥವರನ್ನು ಪ್ರತಿಭಟನೆಗೆ ಬಳಸಿಕೊಳ್ಳುತ್ತಿದ್ದಾನೆ. ತನ್ನ ಗಣಿಗಾರಿಕೆಯಿಂದ ಪರಿಸರಕ್ಕೆ ಧಕ್ಕೆ ಇಲ್ಲ ಎಂದು ಕೋಲಾರದ ಗಣಿ ವಿಜ್ಞಾನಿ ಶಾಸ್ತ್ರಿ ಎಂಬಾತನಿಂದ ಒಂದು ಸರ್ಟಿಫಿಕೇಟ್ ಮಾಡಿಸಿಕೊಂಡಿರುವ ರವಿಶಂಕ್ರನ ಅದನ್ನು ಹಿಡಿದು ತಿರುಗುತ್ತಿದ್ದಾನೆ. ಆದರೆ ಮೇಲುಕೋಟೆಯಿಂದ ಕೆ.ಆರ್.ಎಸ್.ನವರೆಗೂ ಅಪಾಯವಿದೆಯೆಂದು ಪರಿಸರತಜ್ಞರು ಹಲವಾರು ಬಾರಿ ವರದಿ ನೀಡಿದ್ದಾರೆ. ಮಂಡ್ಯದ ಭೂವಿಜ್ಞಾನ ಮತ್ತು ಗಣಿ ಇಲಾಖೆ ಮಾತ್ರ ರವಿಶಂಕರ್‌ನ ಪ್ರಸಾದಕ್ಕೆ ಶರಣಾದಂತಿದೆ. ರವಿಶಂಕರ್‌ನಂತೆಯೇ ಹಲವಾರು ಕಲ್ಲುಗಳ್ಳರೂ ಈ ಬೆಟ್ಟ ಶ್ರೇಣಿಗೆ ಮುಗಿಬಿದ್ದಿರುವುದು ಗಣಿ ಇಲಾಖೆಯ ಪ್ರೋತ್ಸಾಹದಿಂದಲೇ.



ಜಿಲ್ಲೆಯ ಜೀವನಾಡಿ ಕೆ.ಆರ್.ಎಸ್.ಗೂ ವಡ್ಡರಹಳ್ಳಿಯ ಸುತ್ತಮುತ್ತಲಿನ ಹಲವು ಗ್ರಾಮಗಳಿಗೂ ಕಂಟಕವಾಗಿರುವ ಗಣಿಗಾರಿಕೆಯನ್ನು ಸರ್ಕಾರ ಕೂಡಲೇ ನಿಲ್ಲಿಸಬೇಕಿದೆ. ಇಲ್ಲದಿದ್ದರೆ ರವಿಶಂಕ್ರನಿಗೂ, ಆತನ ಬೆಂಬಲಕ್ಕಿರುವ ಶಾಸಕ ಪುಟ್ಟರಾಜುವಿಗೂ ಜನರೇ ಪಾಠ ಕಲಿಸಲಿದ್ದಾರೆ.


●ಲಕ್ಷ್ಮಣ್ ಚೀರನಹಳ್ಳಿ

ಶಿವರಾಮೇಗೌಡ ಗಿಫ್ಟು



ನೂರಾರು ಕೋಟಿ ಬೆಲೆಬಾಳುವ ಈ ಕಲ್ಲುಕ್ವಾರಿಗಳನ್ನು ಡಾ. ರವಿಶಂಕರನಿಗೆ ಗಿಫ್ಟು ಕೊಟ್ಟವನು ನಾಗಮಂಗಲದ ಮಾಜಿ ಶಾಸಕ ಎಲ್.ಆರ್. ಶಿವರಾಮೇಗೌಡ. ಹಿಂದೆ 'ಲಂಕೇಶ್ ಪತ್ರಿಕೆ' ವರದಿಗಾರರಾಗಿದ್ದ ಕಂಚನಹಳ್ಳಿ ಗಂಗಾಧರಮೂರ್ತಿ ಕೊಲೆ ಮಾಡಿದ ಆರೋಪ ಹೊತ್ತು ಶಿವರಾಮೇಗೌಡ ಜೈಲು ಪಾಲಾದಾಗ ಅವನ ನೆರವಿಗೆ ಬಂದಿದ್ದು ಇದೇ ವೈದ್ಯ ರವಿಶಂಕರ. ಶಿವರಾಮೇಗೌಡನಿಗೆ ಆರೋಗ್ಯ ಸರಿಯಿಲ್ಲವೆಂದು ಸುಳ್ಳು ಸರ್ಟಿಫಿಕೇಟ್ ನೀಡಿದ್ದ ರವಿಶಂಕರ್ ಶಿವರಾಮೇಗೌಡನನ್ನು ಜೈಲಿಂದ ಹೊರತರುವಲ್ಲಿ ಸಹಾಯ ಮಾಡಿದ್ದ. ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ಸೇರಿದ್ದ ಶಿವರಾಮೇಗೌಡ ಆಸ್ಪತ್ರೆಯಲ್ಲಿರದೇ ಹೊರಗೇ ಇರುತ್ತಿದ್ದ. ಈ ಕಾರಣಕ್ಕಾಗಿ ಆತನನ್ನು ಬೌರಿಂಗ್ ಆಸ್ಪತ್ರೆಯಲ್ಲಿ ಕಾವಲು ಕಾಯುತ್ತಿದ್ದ ಇಬ್ಬರು ಪೇದೆಗಳು ಸಸ್ಪೆಂಡ್ ಆಗಿದ್ದರು. ಸುಳ್ಳು ಸರ್ಟಿಫಿಕೇಟ್ ನೀಡಿದ ವೈದ್ಯ ರವಿಶಂಕರ್ ಮಾತ್ರ ಸೇಫಾಗಿ ಪಾರಾಗಿದ್ದ. ರವಿಶಂಕರನ ಸಹಾಯಕ್ಕೆ ಕಾಣಿಕೆಯಾಗಿ ಈ ಕ್ವಾರಿಗಳನ್ನು ಶಿವರಾಮೇಗೌಡ ದಯಪಾಲಿಸಿದ್ದಾನೆ. ಅಕ್ರಮ ಗಣಿಗಾರಿಕೆಯಿಂದ ರವಿಶಂಕರ್ ದಿನೇದಿನೇ ಕೊಬ್ಬುತ್ತಿದ್ದಾನೆ.





ಬಿಜಾಪುರ : ಶಾಸಕ ಪಟ್ಟಣಶೆಟ್ಟಿ ಕೊಲೆಗೆ ಸ್ಕೆಚ್ಚು ಯಾರದು?

ಈಗ ಬಿಜಾಪುರ ಜಿಲ್ಲೆಯಾದ್ಯಂತ ಬಿಜಾಪುರ ನಗರ ಶಾಸಕ ಬಿಜೆಪಿಯ ಅಪ್ಪು ಪಟ್ಟಣಶೆಟ್ಟಿಯ ಕೊಲೆಗೆ ಸ್ಕೆಚ್ಚು ಹಾಕಿದ್ದವರು ಯಾರು? ಪ್ರಶ್ನೆಗಳನ್ನು ಇಟ್ಟುಕೊಂಡು ಜನ ಚರ್ಚೆ ಮಾಡುತ್ತಿದ್ದಾರೆ. ಸ್ಥಳೀಯ ಪತ್ರಿಕೆಗಳಲ್ಲಿ ಈ ವಿಷಯದ ಕುರಿತಾಗಿ ವರದಿಗಳು ಬರುತ್ತಲೇ ಇವೆ.

ಕಳೆದ ತಿಂಗಳು ಅಥಣಿಯಲ್ಲಿ ಸಿಕ್ಕಿಬಿದ್ದ ಕಾಶೀನಾಥ್ ಕಾರಿಕೊಳ್ಳನ ನೇತೃತ್ವದ ಸುಪಾರಿ ಕಿಲ್ಲರ್ಸ್ ಗ್ಯಾಂಗ್ ಹೇಳಿಕೆಯೇ ಈ ಚರ್ಚೆಗೆ ಕಾರಣವಾಗಿದೆ. ಅಥಣಿಯ ಸಿಪಿಐ ನ್ಯಾಮಗೌಡರು ಈ ಗ್ಯಾಂಗಿನ ವಿಚಾರಣೆ ನಡೆಸಿ ಬಿಜಾಪುರ ಪೊಲೀಸರಿಗೆ ಒಪ್ಪಿಸಿದರು. ಬಿಜಾಪುರ ಪೊಲೀಸರ ವಿಚಾರಣೆಯಲ್ಲಿ ಕಾಶೀನಾಥ್ 'ಬಿಜಾಪುರ ಎಂ.ಎಲ್.ಎ. ಪಟ್ಟಣಶೆಟ್ಟಿಯನ್ನು ಕೊಲ್ಲಲು ನಮಗೆ ಸುಪಾರಿ ನೀಡಲಾಗಿತ್ತು....' ಎಂದು ಹೇಳಿದ್ದಾನೆ. ಆದರೆ ಸುಪಾರಿ ನೀಡಿದವರಾರು ಎಂಬುದನ್ನು ಆತ ಹೇಳಿಲ್ಲ ಎಂದು ಪೊಲೀಸರು ಹೇಳುತ್ತಿದ್ದಾರೆ. ಇದರಿಂದ ಜನ ಯಾರಿರಬಹುದು ಎಂದು ಅಂದಾಜು ಹಾಕುತ್ತಿದ್ದಾರೆ.


ಅಪ್ಪು ಪಟ್ಟಣಶೆಟ್ಟಿ ಲ್ಯಾಂಡ್ ಡೀಲಿಂಗ್ ವ್ಯವಹಾರದಲ್ಲಿರುವಾತ, ಈತನ ಸಹೋದರ ಈರಣ್ಣ ಪಟ್ಟಣಶೆಟ್ಟಿ 'ಪಂಚಮಿ ಡೆವಲಪರ್ಸ್' ಹೆಸರಲ್ಲಿ ಭೂಗಳ್ಳತನ ಮಾಡುತ್ತಿದ್ದಾನೆ. ಅಧಿಕಾರಿಗಳು, ಪೊಲೀಸರ ಅಭಯಹಸ್ತ ಇರುವುದರಿಂದ ಈತ ಬಿಜಾಪುರದಲ್ಲಿ ಅಕ್ರಮವಾಗಿ ಭೂಮಿ ಗಿಟ್ಟಿಸುತ್ತಿದ್ದಾನೆ. ಇದರಿಂದ ಇತರ ನೆಲಗಳ್ಳರಿಗೆ ಹಿನ್ನಡೆ ಆಗುತ್ತಿದೆ. ಫಾರೇಖ್ ಸೇದಜಿ, ಗಿರಗಾಂವಕರ್, ಇಕ್ಬಾಲ್ ದಫೇದಾರ್, ಎಸ್.ಎ. ಹೊರ್ತಿ, ರೂಪಂ ಸೇದಜಿ ಇವರೆಲ್ಲರೂ ಲ್ಯಾಂಡ್ ಡೀಲಿಂಗ್‌ನಲ್ಲಿರುವ ಕುಳಗಳು. ಈ ಕುಳಗಳೇ ಸುಪಾರಿ ಕೊಟ್ಟಿರಬಹುದೇ ಎಂಬ ಗುಮಾನಿ ಎಲ್ಲೆಡೆ ಹಬ್ಬಿದೆ.

ಬಿಜಾಪುರದಲ್ಲಿ ಬಸನಗೌಡ ಯತ್ನಾಳರನ್ನು ಮೂಲೆಗುಂಪು ಮಾಡಿದ್ದು ಅಪ್ಪು ಪಟ್ಟಣಶೆಟ್ಟಿ. ಆ ಕಾರಣದಿಂದ ಯತ್ನಾಳ್ ಮೇಲೂ ಕೆಲ ಜನ ಗುಮಾನಿ ಪಡುತ್ತಿದ್ದಾರೆ.

ಸತ್ಯ ಏನೆಂದು ಬಯಲು ಮಾಡಬೇಕಾದ ಪೊಲೀಸ್ ಇಲಾಖೆ ಮಾತ್ರ ತುಟಿ ಬಿಚ್ಚುತ್ತಿಲ್ಲ.

ಆಲಬಾ

ಹವ್ಯಕರನ್ನು ಬೆದರಿಸಲು ಮಠಾಧೀಶನ ಸೇನೆ



ಹವ್ಯಕ ಸಮುದಾಯ ಬೆದರಿದೆ.

ರಾಮಚಂದ್ರಾಪುರ ಮಠದ ಜಗದೀಶ ಶರ್ಮನ ಅನಾಚಾರಗಳನ್ನು ಶ್ನಿಸಲೆಂದು ಸೆಪ್ಟೆಂಬರ್ 11 ರಂದು ಮಠಾಧೀಶ ರಾಘವೇಶ್ವರ ಸ್ವಾಮಿ ಳಿ ಹೋಗಿದ್ದ ಸಾಮಾನ್ಯ ಹವ್ಯಕ ಜನ ಧಮಕಿ ಹಾಕಿಸಿಕೊಂಡು ವಾಪಸ್ ಂದಿದ್ದಾರೆ.

ಇಡೀ ಮಲೆನಾಡು, ಕರಾವಳಿ ಪ್ರಾಂತ್ಯದ ಹವ್ಯಕ ಬ್ರಾಹ್ಮಣರ ನಡುವೆ ಗ ಇದರದ್ದೇ ಮಾತು.

"ಮಠದವರ ವಿರುದ್ಧ ಯಾರಾದರೂ ಮಾತಾಡಿದರೆ, ಪ್ರಶ್ನಿಸಿದರೆ, ಪಪ್ರಚಾರ ಮಾಡಿದರೆ ಅಂತವರಿಗೆ ಬುದ್ಧಿ ಕಲಿಸಲು ಮಠದ ಸೇನೆ ಚಿಸುವುದಾಗಿ" ಸ್ವಾಮಿಯ ಚೇಲಾಗಳು ಘೋಷಿಸಿದ್ದಾರೆ.

ಇದೆಂಥ ವಿಪರ್ಯಾಸ ನೋಡಿ.

ಹವ್ಯಕ ಬಾಲೆಯರ ಮಾನ-ಘನತೆಗೆ ಚ್ಯುತಿ ತಂದ ರಾಘವೇಶ್ವರ ವಾಮಿಯ ಭಾವ ಜಗದೀಶ ಶರ್ಮನ ಬಾನಗಡಿ ವಿಚಾರ ಈಗ ಇಡೀ ಜ್ಯದ ಜನತೆಗೆ ಗೊತ್ತಿದೆ. ಈ ನೀಚ ತಲೆ ತಪ್ಪಿಸಿಕೊಂಡೂ ಓಡಿಹೋಗಿದ್ದಾನೆ. ದುರ್ಘಟನೆ ನಡೆದಾಗ ರಾಘವೇಶ್ವರ ಸ್ವಾಮಿ ಹೊಸ ನಗರದಲ್ಲಿರಲಿಲ್ಲ. ತುರ್ಮಾಸವೆಂದು ಕೊಲ್ಕತ್ತಾದ ಇಮಾಮಿ ಕ್ರೀಂನವರ ಗೆಸ್ಟ್‌ಹೌಸ್‌ನಲ್ಲಿದ್ದರು. ಮಿ ಬಂದಮೇಲೆ ಜಗದೀಶ್ ಶರ್ಮನ ವಿರುದ್ಧ ಕ್ರಮ ವಹಿಸುವಂತೆ ತ್ತಾಯಿಸಲು ಹವ್ಯಕ ಭಕ್ತರು ಕಾದಿದ್ದರು. ಅದರಂತೆ ಮೊನ್ನೆ ಸೆಪ್ಟೆಂಬರ್ ರಂದು ಹೊಸನಗರದ ರಾಮಚಂದ್ರಾಪುರ ಮಠದಲ್ಲಿ ಒಂದು ಸಭೆ ಯಿತು. ಸಾಗರ, ಹೊಸನಗರ, ಸೊರಬ ಮುಂತಾದೆಡೆಯಿಂದ ಒಂದು ವಿರಕ್ಕೂ ಹೆಚ್ಚು ಜನ ಸೇರಿದ್ದರು. ಜನಾಂಗದ ಪ್ರಮುಖರಾದ ಭೀಮೇಶ್ವರಿ ೀಶಿ, ಆರ್.ಎಂ. ಭಟ್ ಮದುಗುಣಿ, ಸಾಗರದ ರಾಮಪ್ಪನವರೂ ದ್ದರು. ರಾಘವೇಶ್ವರ ಸ್ವಾಮಿಯೂ ಬಂದ. ಆದರೆ ಹಲಾಲ್‌ಟೋಪಿ, ಹರುಕ ಜಗದೀಶ ಶರ್ಮ ಬಂದು ಮುಖ ತೋರಿಸಲಿಲ್ಲ. ಶರ್ಮ

ತಪ್ಪಿತಸ್ಥ ಎನ್ನಲು ಇದಕ್ಕಿಂತ ಪುರಾವೆ ಬೇಕಿರಲಿಲ್ಲ. ಸಭೆಗೆ ಬಂದಿದ್ದ ಜನ ಹವ್ಯಕ ಬಾಲಕಿಯರ ಮಾನಹರಣ ಮಾಡಿದ ಜಗದೀಶ ಶರ್ಮನ ವಿಚಾರ ಪ್ರಸ್ತಾಪಿಸುತ್ತಿದ್ದಂತೆಯೇ ಇಡೀ ಸೀನೇ ದಿಢೀರನೆ ಬದಲಾಗಿಹೋಯಿತು. ಸ್ವಾಮಿಯ ಚೇಲಾ ಒಬ್ಬ, ಈ ಘಟನೆ ಹೊರಬರದಂತೆ ನೋಡಿಕೊಳ್ಳಬೇಕಾಗಿತ್ತು" ಎಂದ. RSS ಹೈದನೊಬ್ಬ ಎದ್ದು ನಿಂತು "ಯಾರ ಮೇಲೂ ಕಂಪ್ಲೆಂಟ್ ಹೇಳೋದು ಬೇಕಿಲ್ಲ. ಬೇಕಾದ್ರೆ ಇರಿ, ಇಲ್ಲಾಂದ್ರೆ ಹೊರಗೆ ಹೋಗಿ" ಎಂದುಬಿಟ್ಟ. ಇದರಿಂದ ಮಠದ ಭಕ್ತರು ಶಾಕ್ ಆಗಿ ಕುಳಿತಿರುವಾಗಲೇ ಸಾಕ್ಷಾತ್ ರಾಘವೇಶ್ವರ ಸ್ವಾಮಿಯೇ ಮಾತನಾಡಿ "ಮಠದಲ್ಲಿ ಹೀಗಾಗಿದೆ ಎಂದು ಯಾರೂ ಕಂಪ್ಲೆಂಟ್ ಮಾಡಿಲ್ಲ. ವಿಚಾರಣೆಯೂ ನಡೆದಿಲ್ಲ. ಆದರೂ ಜಗದೀಶ್ ಶರ್ಮನ ತಲೆದಂಡ ಕೇಳೋದು ಯಾಕೆ?" ಅಂದಿದ್ದಾರೆ.

ಅಲ್ಲಿಗೆ ಹವ್ಯಕ ಸಮುದಾಯವೇ ತಲೆತಗ್ಗಿಸುವಂತಹ ದುರಾಚಾರವೊಂದಕ್ಕೆ ಘಟನೆಗೆ ತೇಪೆ ಹಚ್ಚುವ ಕೆಲಸ ಮುಗಿದಂತಾಯಿತು. ಆದರೂ ಸಮಾಧಾನಗೊಳ್ಳದ ಕೆಲವರು ಮತ್ತೆ ಮತ್ತೆ ಪ್ರಶ್ನೆ ಕೇಳಲು ಶುರು ಮಾಡಿದಾಗ 'ಸೇನೆ'ಯ ಪ್ರಸ್ತಾಪ ಮಾಡಿದ್ದಾರೆ ಕೆಲವರು.

ಅಂದರೆ ಮಠದ ವಿರುದ್ಧವಾಗಲಿ, ಮಠಾಧೀಶರ ಮೇಲಾಗಲಿ ಯಾರಾದರೂ ದನಿ ಎತ್ತಿದರೆ ಅಂಥವರ ಬಾಯಿ ಬಡಿದು ಕೂರಿಸಲು ಸೇನೆ ರಚಿಸುವುದಾಗಿ ಬಹಿರಂಗವಾಗೇ ಘೋಷಿಸಲಾಗಿದೆ.

ಸೀಮಾ ಪರಿಷತ್ ವಿಸರ್ಜನೆ

ಹೀಗೆ ಜಗದೀಶ ಶರ್ಮನ ಪರ ನಿಂತು ಸಮರ್ಥಿಸಿಕೊಂಡ ಸ್ವಾಮಿ ಆನಂತರ ಭಕ್ತರ ನಿರೀಕ್ಷೆಗೆ ವಿರುದ್ಧವಾಗಿ ಹವ್ಯಕ ಜನರ ಸಂಘಟನೆಯಾದ ಎಲ್ಲಾ ಸೀಮಾ ಪರಿಷತ್‌ಗಳನ್ನು ಏಕಾಏಕಿ ವಿಸರ್ಜಿಸಿಬಿಟ್ಟರು.

ಇದಕ್ಕೆ ಕಾರಣ ಏನೆಂದು ಯಾರಿಗೂ ಅರ್ಥವಾಗಿಲ್ಲ. ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಮುಂತಾದೆಡೆ ಹೆಚ್ಚು ನೆಲೆಸಿರುವ ಕೃಷಿಕ ಜನರಾದ ಹವ್ಯಕರು ಹೋಬಳಿಗೊಂದರಂತೆ ತಮ್ಮದೇ ಸೀಮಾ ಪರಿಷತ್‌ಗಳನ್ನು ರಚಿಸಿಕೊಂಡಿದ್ದಾರೆ. ಈ ಸೀಮಾ ಪರಿಷತ್‌ಗಳು ಶಿವಮೊಗ್ಗ, ಬೆಂಗಳೂರು, ಮಂಗಳೂರು, ಮುಂಬೈಗಳಲ್ಲೂ ಇವೆ. ಇದೊಂದು ರೀತಿ ಹವ್ಯಕರ ನಡುವಿನ ಆಂತರಿಕ ಸಾಮಾಜಿಕ ಘಟಕಗಳಂತೆ, ಪರಸ್ಪರರನ್ನು ಬೆಸೆಯುವ ಕೆಲಸ ಮಾಡುತ್ತಿರುತ್ತವೆ. ಆದರೆ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು ಎನ್ನುವಂತೆ ಕಾಮುಕ ಪಾತಕಿ ಜಗದೀಶ ಶರ್ಮನನ್ನು ಮಠದಿಂದ ಒದ್ದೋಡಿಸುವ ಬದಲಾಗಿ ರಾಘವೇಶ್ವರರು ಹವ್ಯಕರ ಸಂಘಟನೆಯನ್ನೇ ವಿಸರ್ಜಿಸಿರುವುದು ಅನೇಕರಿಗೆ ಅನುಮಾನ ಉಂಟುಮಾಡಿದೆ. ರಾಘವೇಶ್ವರನ ಬಗ್ಗೆ ಬೇಸರವನ್ನು ಜಾಸ್ತಿ ಮಾಡಿದೆ. ಆದರೆ ಮಠಾಧೀಶ ಇದನ್ನೆಲ್ಲಾ ಕೇರ್ ಮಾಡದೆ "ನೀವೆಲ್ಲಾ ಹೀಗೆ ಒತ್ತಡ ತಂದರೆ ನಾನೇ ಮಠ ಬಿಟ್ಟು ಹೋಗಿಬಿಡುತ್ತೇನೆ" ಎಂದು ಬೆದರಿಸಿದ್ದಾರೆ. ಆಗ ಸಭೆಯಲ್ಲಿದ್ದ ಕೆಲವರು "ದಯವಿಟ್ಟು ಹೋಗಿಬಿಡಿ" ಎಂದಾಗ "ನೀವೆಲ್ಲಾ ಅದನ್ನು ಹೇಳುವ ಹಾಗಿಲ್ಲ. ನನಗಿಷ್ಟ ಬಂದಾಗ ಬಿಟ್ಟು ಹೋಗುತ್ತೇನೆಂದು" ಭಂಡತನ ತೋರಿಸಿದ್ದಾನೆ. ಮಠದೊಳಗೆ ಇಷ್ಟೆಲ್ಲಾ ದುರಾಚಾರ, ಲೈಂಗಿಕ ಹಗರಣಗಳೆಲ್ಲಾ ನಡೆದ ಮೇಲೂ ನೊಂದಿರುವ ಭಕ್ತರನ್ನು ಸಂತೈಸದೆ, ತಪ್ಪಿತಸ್ಥ ಜಗದೀಶ ಶರ್ಮನನ್ನು ಶಿಕ್ಷಿಸದೆ, ಸೆಕ್ಸ್ ಬಾಂಬ್ ಮಲ್ಲಿಕಾ ಶೆರಾವತ್ ಹಿಂದೆ ಸುತ್ತಿದ್ದಕ್ಕೆ ವಿವರಣೆ ಕೊಡದ ರಾಘವೇಶ್ವರ ಸ್ವಾಮಿ ಬಗ್ಗೆ ಹವ್ಯಕರಲ್ಲೇ ಈಗ ಹತಾಶೆಯ ಭಾವನೆ ಬಂದುಬಿಟ್ಟಿದೆ.

ವಿಷಯ ಇಷ್ಟು ರಾಡಿಯಾದ ಮೇಲೂ ತನ್ನ ತಪ್ಪುಗಳನ್ನು ತಿದ್ದಿಕೊಳ್ಳದ ರಾಘವೇಶ್ವರ ಸ್ವಾಮಿ ಕೆಲ ಅವಿವೇಕಿಗಳ ಮಾತುಕೇಳಿ ಈಗ ಸೇನೆ ರಚಿಸುವ ಮಾತನಾಡುತ್ತಿದ್ದಾನೆ. ಅಸಲಿಗೆ ಯಾತಕ್ಕೆ ಈ ಸೇನೆ?

ಹವ್ಯಕ ಸಮುದಾಯದವರನ್ನೇ ಬೆದರಿಸಿ ಹತೋಟಿಯಲ್ಲಿಡಲಿಕ್ಕಾ! ●

ಹವ್ಯಕರೊಬ್ಬರ ನೋವಿನ ಪ್ರತಿಕ್ರಿಯೆ

ಮಾಡಬಾರದ ಕೆಲಸವನ್ನು ಮಾಡಹೊರಟರೆ ಏನಾಗುತ್ತದೆ ಎಂಬುದಕ್ಕೆ ರಾಘವೇಶ್ವರ ಸ್ವಾಮಿಗಳೇ ಪ್ರತ್ಯಕ್ಷ ಉದಾಹರಣೆ. ಇವರ ಪೂರ್ವಾಶ್ರಮದ ಬಂಧು ಜಗದೀಶನ ಕಾಮುಕಾಂಡವನ್ನು ಹವ್ಯಕ ಪತ್ರಿಕೆ ದಿಟ್ಟತನದಿಂದ ತೆರೆದಿಟ್ಟರೂ ಅವನನ್ನು ರಕ್ಷಿಸಹೊರಟ ಈ ಸ್ವಾಮಿಗಳಿಗೆ ಏನೆನ್ನಬೇಕು? ಕೊಲ್ಕತ್ತಾದಲ್ಲಿ ಚಾತುರ್ಮಾಸ್ಯವನ್ನು ಮುಗಿಸಿ ಹೊಸನಗರಕ್ಕೆ ಬಂದ ಈ ಸ್ವಾಮಿ ಹವ್ಯಕರ ಸಂಘಟನೆಯನ್ನೇ ವಿಸರ್ಜಿಸಿದ್ದಲ್ಲದೆ ಪ್ರಶ್ನಿಸಿದವರಿಗೆ "ನೀವಿದ್ದೀರಿ, ನಿಮ್ಮ ಸಮಾಜವಿದೆ" ಎನ್ನುತ್ತಿದ್ದಾರೆ.

ಇವರ ಬಂಧು ಜಗದೀಶ ಮಾಡಬಾರದ ಕಾರ್ಯ ಮಾಡಿದ್ದಕ್ಕೆ ಇದು ಪ್ರಾಯಶ್ಚಿತ್ತವೇ? ತಪ್ಪು ಮಾಡಿದ ವ್ಯಕ್ತಿಗೆ ಶಿಕ್ಷೆಯನ್ನು ನೀಡದೆ ಅವನನ್ನು ರಕ್ಷಿಸಿ ಅವನ ಹೇಯಕೃತ್ಯದ ಬಗ್ಗೆ ತುಟಿಪಿಟಕ್ ಎನ್ನದೆ ಸಮಾಜವನ್ನು ದೂರುವುದು ಎಷ್ಟು ಸರಿ?

ನಾನಾ ರೀತಿಯ ಸೋಗಿನಿಂದ (ರಾಮಸತ್ರ, ವಿಶ್ವ ಗೋ ಸಮ್ಮೇಳನ ಕೆಲ ಉದಾಹರಣೆಗಳಷ್ಟೇ) ಕೋಟಿ ಕೋಟಿ ಹಣಸಂಪಾದನೆ ಆಗಿದೆ. ಆ ಹಣದಿಂದ ಅಲ್ಲಲ್ಲಿ ತನ್ನ ಪೂರ್ವಾಶ್ರಮದ ಸಂಬಂಧಿಗಳ ಹೆಸರಿನಲ್ಲಿ ಭೂಮಿಯನ್ನು ಖರೀದಿಸಿ ದಾಖಲಿಸಿಯೂ ಆಗಿದೆ. ಇನ್ನೇನಾಗಬೇಕಾಗಿದೆ? ಯಥೇಚ್ಛ ಮೆಂದಾಗಿದೆ. ಈಗ ಮಠ ಬಿಟ್ಟು ಜಗದೀಶನೊಡನೆ ಹೊರಟುಹೋಗುವುದಷ್ಟೇ ಬಾಕಿ ಇದೆ. ಸ್ವಾಮಿಗಳಿಗೆ ನೆನಪಿರಲಿ. ಅವರು ಅಕ್ರಮವಾಗಿ ಎಷ್ಟೆಷ್ಟು ಭೂಮಿ, ಹಣ ಸಂಪಾದಿಸಿದ್ದಾರೆ ಎನ್ನುವುದರ ಬಗ್ಗೆ ಈಗಾಗಲೇ ಕೆಲವರು ದಾಖಲೆಗಳನ್ನು ಸಂಗ್ರಹಿಸುತ್ತಿದ್ದಾರೆ.

ಮಲ್ಲಿಕಾಳ ಸಂಗಡ ಸಮುದ್ರ ತೀರದಲ್ಲಿ ಫೋಟೋಗಳಿಗೆ ಪೋಸ್ ಕೊಟ್ಟಾಗ, ಬಂದುಬಂದ ಹೆಣ್ಣುಮಕ್ಕಳನ್ನು-ಮಹಿಳೆಯರನ್ನು ಮುಟ್ಟಿ ಮುಟ್ಟಿ ಅನುಗ್ರಹಿಸುವಾಗ ಅವರಿಗೆ ಸನ್ಯಾಸಾಶ್ರಮದ ನೀತಿ ನಿಬಂಧನೆಗಳು ನೆನಪಾಗಲಿಲ್ಲವೇ? ಅಥವಾ ತಾನು ಯತಿಯಲ್ಲ ಎಂಬ ಭಾವನೆ ಅವರದ್ದೇ?

ಸ್ವಾಮಿಗಳು ನಡೆಸುವ ಧರ್ಮಭಾರತಿ ಬಳಗದಲ್ಲಿ ದಕ್ಷಿಣ ಕನ್ನಡದ ಗೃಹಿಣಿಯೋರ್ವಳು ಕೆಲಸಕ್ಕಿದ್ದರು. ಆದರೆ ಸ್ವಾಮಿ ಹಾಗೂ ಜಗದೀಶನ ಜಟಾಪಟಿಯಿಂದ ಆತನ ಗಂಡನೇ ಅವಳನ್ನು ಬಿಡುವಂತಾಯಿತು. ಈಗ ಆಕೆಗೆ ಬ್ಯಾಂಕ್ ಒಂದರಲ್ಲಿ ಕೆಲಸ ಕೊಡಿಸಿರುವ ಸ್ವಾಮಿಯ ಘನಕಾರ್ಯಕ್ಕೆ ಏನೆನ್ನಬೇಕು. ಈಗ ಅವಳು ದಕ್ಷಿಣ ಕನ್ನಡದ ಶಾಖೆಯೊಂದರಲ್ಲಿ ಕೆಲಸ ಮಾಡುತ್ತಿರುವ ವಿಷಯ ಬಹಳಷ್ಟು ಜನರ ಗಮನಕ್ಕೆ ಬಂದಿಲ್ಲ.

ಮೊದಲು ಕಾಮುಕ ಜಗದೀಶನಿಗೆ ತಕ್ಕ ಶಿಕ್ಷೆಯಾಗಬೇಕಿದೆ. ನೊಂದ ಹವ್ಯಕ ವಿದ್ಯಾರ್ಥಿನಿಯರಿಗೆ ಸರಿಯಾದ ಪರಿಹಾರ ದೊರಕಬೇಕಿದೆ. ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಈ ಜಗದೀಶನ ಮೇಲೆ ಏಕೆ ಕ್ರಮ ತೆಗೆದುಕೊಳ್ಳಬಾರದು? ಭ್ರಷ್ಟ ಬಿಜೆಪಿ ಸರ್ಕಾರ, ದೊಗಲೆ ಚೆಡ್ಡಿಯ ಸಂಘ ಪರಿವಾರ ಮತ್ತು ಹಣವಂತ ಹವ್ಯಕರ ಶ್ರೀರಕ್ಷೆಯಲ್ಲಿ ಪಳಗಿ ಮದ್ದಾನೆಯಾಗಿರುವ ಈ ಮಹಾಸ್ವಾಮಿಗೆ ಅಂಕುಶವಿಡುವ ಮಾವುತ ಇನ್ನೂ ಎದ್ದುಬರಲಿಲ್ಲವೇ?

ಗೋಕರ್ಣದ ವಿಚಾರದಲ್ಲಿ ಆಸಕ್ತಿ ಇಲ್ಲ ಎನ್ನುವ ಸ್ವಾಮಿಗಳಿಗೆ ನ್ಯಾಯಾಲಯ ನಿಂದನೆಯಿಂದ ಆರಂಭಿಸಿ ಎಲ್ಲ ವಿಧದಲ್ಲೂ ಹಿನ್ನಡೆಯುಂಟಾಗಿದೆ. ಈ ಸ್ಥಿತಿಯಲ್ಲಿ ಎಲ್ಲ ಬಿಟ್ಟು ಸಮಾಜವನ್ನು, ಶಿಷ್ಯರನ್ನು ದೂಷಿಸಿ, ಕಾಮುಕ ಕೀಚಕನನ್ನು ರಕ್ಷಿಸುವ ಇವರ ಪರಿಗೆ ಏನೆನ್ನಬೇಕು?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರ ಕೆಲ ಪುಂಡ ಹವ್ಯಕ ಅಭಿಮಾನಿಗಳು ಸ್ವರ್ಣವಲ್ಲಿ ಸ್ವಾಮಿಗಳ ಆಗಮನಕ್ಕೆ ಹಾಗೂ ಅವರು ಕೈಗೊಂಡ ಗೀತಾ ಅಭಿಯಾನಕ್ಕೆ ಘೇರಾವ್ ಹಾಕುವ ಮಟ್ಟಕ್ಕೆ ಬಂದಿದ್ದಾರೆಂದರೆ ಇವರ ಹೀನಚಿಂತನೆಗೆ ಏನೆನ್ನಬೇಕು?


ಸಮಾಜದಲ್ಲಿ ಶಿಷ್ಟರೂ ಸಭ್ಯರೂ ಇದ್ದಾರೆ. ಮಠದ ಶಿಷ್ಯ ಕೋಟಿಯನ್ನು ದೂರುವ ಬದಲಾಗಿ ಸ್ವಾಮಿಯು ಕೂಡಲೆ ನಾನಾ ರೀತಿಯ ಸೋಗು ಹಾಕುವುದನ್ನು ಬಿಟ್ಟು ಈ ಕ್ಷಣವೇ ಪೀಠ ತ್ಯಾಗಮಾಡಲಿ. ತಾನು ಮಾಡಿರುವ ತಪ್ಪುಗಳನ್ನು ಒಪ್ಪಿಕೊಳ್ಳಲಿ. ಅದು ಅವರಿಂದ ಸಾಧ್ಯವೇ?

ಈ ಎಲ್ಲ ಕೃತ್ಯಗಳನ್ನು ದೂರದಿಂದ ವೀಕ್ಷಿಸುತ್ತಿರುವ ಹವ್ಯಕ ಸಮಾಜದವನಾದ ನಾನು ನನ್ನ ಹೆಸರನ್ನು ಇಲ್ಲಿ ತಿಳಿಸಿ ಅವರ ಗೂಂಡಾಗಿರಿಗೆ ಸಿಕ್ಕಿಹಾಕಿಕೊಳ್ಳುವ ಇಚ್ಛೆ ಇಲ್ಲ.

ಸದಾ ಇವರೊಂದಿಗೆ ಇರುವ ಕಾಮುಕ ಜಗದೀಶನ ಎಲ್ಲ ಪೂರ್ವ ಇತಿಹಾಸವನ್ನು ಸಂಗ್ರಹಿಸಿ ಸಮಾಜದ ಮುಂದಿಟ್ಟು ಅವನಿಗೆ ಶಿಕ್ಷೆಯಾಗುವಂತೆ ಮಾಡಬೇಕಿದೆ. ಮಾತ್ರವಲ್ಲ ಸುಸಂಸ್ಕೃತ ಹವ್ಯಕ ಸಮಾಜಕ್ಕೆ ಇನ್ನೊಬ್ಬ ಯೋಗ್ಯ ವಿರಕ್ತ ಅನುಷ್ಠಾನನಿಷ್ಠ ಮಠಾಧೀಶರನ್ನು ಆಯ್ಕೆ ಮಾಡಿದರೆ ಸಮಾಜಕ್ಕೆ ಉಪಕಾರ ಮಾಡಿದಂತಾಗುತ್ತದೆ.

-ಕೆ. ಎಂ. ಹೆಗ್ಡೆ ಬೆಂಗಳೂರು

ಹಫ್ತಾ ವಸೂಲಿಗೆ ಹಿನ್ನಡೆ



ಕರ್ನಾಟಕದ ಐದಾರು ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಒಂದು ಪುಟ್ಟ ಕೃಷಿಕ ಸಮುದಾಯವಾಗಿರುವ ಹವ್ಯಕ ಬ್ರಾಹ್ಮಣರಿಗೆ ರಾಮಚಂದ್ರಾಪುರ ಮಠದ ಬಗ್ಗೆ ಬಹಳ ನಿರೀಕ್ಷೆಗಳಿದ್ದವು. ಆದರೆ ರಾಘವೇಶ್ವರ ಸ್ವಾಮಿ ಬಂದಮೇಲೆ ದಿನಕ್ಕೊಂದು ಹಗರಣ, ವಿವಾದಗಳು ನಡೆಯುತ್ತಿವೆ. ಮಠದ ಸಾಮ್ರಾಜ್ಯ ವಿಸ್ತರಿಸಲು ಹೋಗಿ ಅಂಬಾಗಿರಿ ಮಠ ಪ್ರಯತ್ನ, ಗೋಕರ್ಣ ಮಠ ವಿವಾದ, ಅಮೃತ ಮಹಲ್ ಕಾವಲ್ ನುಂಗಲು ಯತ್ನಿಸಿದ್ದು ಜನರಲ್ಲಿ ಮಠದ ಬಗ್ಗೆ ಅಸಹ್ಯ ಮೂಡಿಸಿವೆ.

ಈಗ ಸ್ವಾಮಿಯ ಭಾವ ಜಗದೀಶ ಶರ್ಮನೇ ಹವ್ಯಕ ಬಾಲೆಯರ ಮಾನಹರಣ ಮಾಡಿದನೆಂಬ ವಿಚಾರ ಆ ಸಮುದಾಯದ ಜನರನ್ನು ವಿಪರೀತ hurt ಮಾಡಿದೆ. ಈ ರಾಘವೇಶ್ವರ ಸ್ವಾಮಿ ತಾನೊಂದು ದೊಡ್ಡ ಮಠ ಕಟ್ಟುವುದಾಗಿ ಹೊರಟು ಪ್ರತಿಯೊಂದಕ್ಕೂ ಭಕ್ತರಿಂದ ಹಣ ವಸೂಲಿ ಮಾಡುತ್ತಿದ್ದಾನೆ.

ಮುಷ್ಟಿಭಿಕ್ಷೆ, ಕುಂಕುಮಾರ್ಚನೆ, ಸಿಂಧು ಬಿಂದು, ಕರ್ಮಧನ ಎಂಬ ವಸೂಲಿ ಸ್ಕೀಂಗಳ ಒಂದು ರೀತಿಯವು. ಇನ್ನು ಹುಟ್ಟಿದರೆ ಇಷ್ಟು, ಸತ್ತರೆ ಅಷ್ಟು, ಉಪನಯನಕ್ಕೆ ಇಷ್ಟು, ಮದುವೆಗೆ ಇಂತಿಷ್ಟು ಕಾಣಿಕೆ ಎಂದು ರೇಟ್ ಫಿಕ್ಸ್ ಮಾಡಿದ್ದಾನೆ. ಇನ್ನು ಹವ್ಯಕ ಕೃಷಿಕರಿಂದ ಎಕರೆಗೆ ನಾಲ್ಕು ಕೆಜಿ ಅಡಿಕೆ, ವರ್ಷಕ್ಕೆ 10 ದಿನಗಳ ಆದಾಯವನ್ನು ಕೊಡಬೇಕೆಂದು ಗುರುಗಳು ಅನುಶಾಸನ ಮಾಡಿದ್ದಾನೆಂದು ಭಕ್ತರು ಮಾತಾಡಿಕೊಳ್ಳುತ್ತಿದ್ದಾರೆ.

ಹವ್ಯಕ ಭಕ್ತರಿಂದ ಇಷ್ಟೆಲ್ಲಾ ಹಫ್ತಾ ವಸೂಲಿ ಮಾಡುವ ಸ್ವಾಮಿಗಳು ಭಕ್ತರ, ಅವರ ಕುಟುಂಬದ ಹೆಣ್ಣುಮಕ್ಕಳ ರಕ್ಷಣೆ ಮಾಡುತ್ತಿಲ್ಲ ಯಾಕೆ?

ಇದಕ್ಕೆ ಮಠದ ಭಕ್ತರು ಹೇಳುವುದಿಷ್ಟೇ.

ಹರೀಶ-ಜಗದೀಶ ಚಡ್ಡಿ ದೋಸ್ತ್‌ಗಳು. ಒಟ್ಟಿಗೆ ಬೆಳೆದವರು. ಅವರ ಪೈಕಿ ಹರೀಶ ಈಗ ರಾಮಚಂದ್ರಾಪುರದ ಮಠಾಧೀಶ ರಾಘವೇಶ್ವರ ಸ್ವಾಮಿಯಾಗಿ ಬದಲಾಗಿದ್ದಾರೆ.


ಇನ್ನು ಜಗದೀಶ....?

ಜಗದೀಶ ಶರ್ಮನಾಗಿ ಅದೇ ಮಠದ ಆಡಳಿತಾಧಿಕಾರಿಯಾಗಿದ್ದಾನೆ. ರಾಘವೇಶ್ವರರ ತಂಗಿಯನ್ನೇ ಮದುವೆಯಾಗಿದ್ದಾನೆ.

ಹರೀಶ-ಜಗದೀಶ ಒಬ್ಬರನ್ನೊಬ್ಬರ ತಲೆ ಕಾಯುತ್ತಾರೆಯೇ ವಿನಃ ತಲೆದಂಡ ಕೊಡಲಾರರು. ●

ವಿದ್ಯುತ್ ಹಾಹಾಕಾರದಲ್ಲೂ ಸರ್ಕಾರಿ ಡಕಾಯಿತಿ

ಕಲ್ಲಿದ್ದಲು ಕಳ್ಳ


ರಾಯಚೂರಿನ ಥರ್ಮಲ್ ಪವರ್ ಘಟಕ

● ರಾ. ಸೋಮನಾಥ್


ಕಲ್ಲಿದ್ದಲು ಕಳ್ಳ ಯಡ್ಡಿ

ಹಿಂದೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಮೂರು ವರ್ಷಗಳ ಭೀಕರ ಬರಗಾಲ ಬಂತಲ್ಲ; ಆಗ ಬಡಬಗ್ಗರು ಹಸಿದು ಸಾಯದಿರಲಿ ಎಂದು 'ಕೂಲಿಗಾಗಿ ಕಾಳು' ಯೋಜನೆ ತಂದರೆ. ಅಧಿಕಾರಿಗಳೆಲ್ಲ ಸೇರಿ ಮೂಟೆಗಟ್ಟಲೆ ಧಾನ್ಯವನ್ನೇ ಮಾರಿಕೊಂಡ ಕತೆ ನೆನಪಿರಬೇಕಲ್ಲವೆ?

ಈಗಿನದು ಅದೇ ಥರದ ವಿದ್ಯುತ್ ಕ್ಷಾಮದ ಕತೆ!

ಕರೆಂಟಿಲ್ಲದೇ ಇಡೀ ರಾಜ್ಯ ತತ್ತರಿಸುತ್ತಿದ್ದರೆ ವಿದ್ಯುತ್ ಕ್ಷಾಮ ನೀಗಿಸುತ್ತೇನೆಂದು ಅದಕ್ಕೆ ಬೇಕಾದ ಕಲ್ಲಿದ್ದಲಿನಲ್ಲೇ ನೂರಾರು ಕೋಟಿ ದೋಚಲು ಹೋಗಿ ಮುಖ್ಯಮಂತ್ರಿ ಯಡ್ಡಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ!

ಮುಖ್ಯಮಂತ್ರಿಯ ಕಲ್ಲಿದ್ದಲು ಲೂಟಿಗೆ ಎಂತೆಂಥಾ ಡಕಾಯಿತರು ಸುಲಿಗೆಕೋರರೂ ನಾಚಿಕೊಳ್ಳಲೇಬೇಕು. ನಾಡಿಗೆ ವಿದ್ಯುತ್ ಬರ ಬಂದು ಜನ ಹಾಹಾಕಾರ ಮಾಡುತ್ತಿದ್ದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಇಂಥ ಹಾಹಾಕಾರದಲ್ಲೇ ನೂರಾರು ಕೋಟಿ ಮೊತ್ತದ ಡಕಾಯಿತಿಯೊಂದಕ್ಕೆ ಪಾಯ ಹಾಕುತ್ತಿದ್ದರು. ಈಗಾಗಲೇ ಸರಿಸುಮಾರು ನೂರೈವತ್ತು ಕೋಟಿಯಷ್ಟು ಕಬಳಿಸಿದ್ದಕ್ಕೆ ದಾಖಲೆಗಳಿವೆ. ಮುಖ್ಯಮಂತ್ರಿಯ ಹಸ್ತಾಕ್ಷರ ಸಮೇತ ಸಾಕ್ಷ್ಯಾಧಾರಗಳೂ ಸಿಕ್ಕಿಬಿದ್ದಿವೆ. ಉತ್ತರ ಕೊಡಲಾಗದೇ ವಿಧಾನಮಂಡಲದ ಅಧಿವೇಶನಕ್ಕೂ ಚಕ್ಕರ್ ಹಾಕಿ ತಲೆ ತಪ್ಪಿಸಿಕೊಳ್ಳುತ್ತಿರುವ ಯಡಿಯೂರಪ್ಪ ಈಗ ನ್ಯಾಯಾಂಗ ತನಿಖೆಯ ಡೈಲಾಗ್ ಹೊಡೆಯುತ್ತಿದ್ದಾರೆ.


ಆದರೆ ವಿರೋಧ ಪಕ್ಷಗಳು ಕೇಳಿದ್ದು ಸಿಬಿಐ ತನಿಖೆಯನ್ನು!

ಯಾರ ಕಿವಿಗೆ ಮುಖ್ಯಮಂತ್ರಿ ಹೂವಿಡುತ್ತಿದ್ದಾರೆ?

ಬರಗಾಲದಲ್ಲಿ ಕೂಲಿಗಳ ಕಾಳು ದೋಚಿದ್ದಕ್ಕೂ, ವಿದ್ಯುತ್ ಕ್ಷಾಮದಲ್ಲಿ ಕಲ್ಲಿದ್ದಲು ಖರೀದಿ ಹೆಸರಲ್ಲಿ ಬೊಕ್ಕಸಕ್ಕೆ ಕನ್ನ ಹಾಕಿದ್ದಕ್ಕೂ ದೊಡ್ಡ ವ್ಯತ್ಯಾಸವೇನಿಲ್ಲ. ಇಡೀ ಕರ್ಮಕಾಂಡದಲ್ಲಿ ಮುಖ್ಯಮಂತ್ರಿ ಯಡ್ಡಿಯೇ ರೂವಾರಿ. ಮಾತುಮಾತಿಗೆ ವಿದ್ಯುತ್ ಕ್ಷಾಮ ನೀಗಿಸುತ್ತೇನೆಂದು ಭಾಷಣ ಬಿಗಿಯುತ್ತಿದ್ದ ಯಡ್ಡಿಯ ಅಸಲೀ ಬುದ್ಧಿಯ ಹಿಂದಿದ್ದದ್ದು ನಾನೂರೈವತ್ತು ಕೋಟಿಯ ಭಾರೀ ದಕಾಯಿತಿಯೇ ಹೊರತು ಪ್ರಜಾ ಕಾಳಜಿಯಲ್ಲ ಎಂಬುದಕ್ಕೆ ಮೊದಲ ದಾಖಲೆಯಂತಿರುವುದು 2009 ಏಪ್ರಿಲ್ 22 ರಂದು KPCL ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದ ಆದೇಶ ಪತ್ರ!

ಅದಕ್ಕೆ, ಮುಖ್ಯಮಂತ್ರಿಗಳೇ ಸ್ವತಃ ಸಹಿ ಹಾಕಿದ್ದಾರೆ. ಚೆನ್ನೈ ಮೂಲದ ಮೆ. ಭಾಟಿಯಾ ಇಂಟರ್‌ನ್ಯಾಷನಲ್ಸ್ ಲಿಮಿಟೆಡ್ ಕಂಪೆನಿಯಿಂದ ಯಾವುದೇ ಕಾರಣಕ್ಕೂ ಕಲ್ಲಿದ್ದಲು ಖರೀದಿಯನ್ನು ಕಡಿತಗೊಳಿಸಕೂಡದು ಎಂಬುದು ಮುಖ್ಯಮಂತ್ರಿಗಳ ಆದೇಶದ ಸಾರಾಂಶ.

ಅದು ಆರು ಲಕ್ಷ ಟನ್ ಕಲ್ಲಿದ್ದಲು ಖರೀದಿಯ ಮೊದಲ ದೋಖಾ. ರಾಯಚೂರಿನ ಥರ್ಮಲ್ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೊಂದು ಕಲ್ಲಿದ್ದಲು ಖರೀದಿಸುವುದು ಆ ಕಾಲದಿಂದಲೂ ನಡೆದುಬಂದ ರೂಢಿ. ಆಂಧ್ರದ ಸಿಂಗರೇಣಿ ಗಣಿ,. ಮಹಾರಾಷ್ಟ್ರದ ವೆಸ್ಟರ್ನ್ ಕೋಲ್ ಗಣಿ ಮತ್ತು ಒರಿಸ್ಸಾದ ಮಹಾನದಿ ಕಲ್ಲಿದ್ದಲು ಗಣಿಗಳಿಂದ ಕಾಲಾನುಕಾಲಕ್ಕೆ ಕಲ್ಲಿದ್ದಲು ಖರೀದಿಸುತ್ತಲೇ ಬಂದ ಕರ್ನಾಟಕ ವಿದ್ಯುತ್ ನಿಗಮ ಈ ಬಾರಿ ಸರಿಸುಮಾರು ಎಂಟು ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಕಲ್ಲಿದ್ದಲು ಖರೀದಿಸಲೆಂದು ದೆಹಲಿಯ ಎಂ.ಎಂ.ಟಿ.ಸಿ. ಲಿಮಿಟೆಡ್ ಮತ್ತು ಚೆನ್ನೈನ ಮೆ. ಭಾಟಿಯಾ ಇಂಟರ್‌ನ್ಯಾಷನಲ್ಸ್ ಲಿಮಿಟೆಡ್ ಎಂಬ ಎರಡು ಕಂಪೆನಿಗಳಿಗೆ ಗುತ್ತಿಗೆ ನೀಡಿತ್ತು. ಈ ಪೈಕಿ ಭಾಟಿಯಾ ಇಂಟರ್‌ನ್ಯಾಷನಲ್ಸ್ ಕಂಪೆನಿಗೆ ಕೊಟ್ಟು 6 ಲಕ್ಷದ ಟೆಂಡರಿನಲ್ಲಿ ಶೇ. 15 ರಷ್ಟನ್ನು ಕಡಿತಗೊಳಿಸುವುದಕ್ಕೂ ಅವಕಾಶವಿತ್ತು, ಪ್ರತಿ ಮೆ.ಟನ್ನಿಗೆ 7899 ರೂಪಾಯಿಯಂತೆ ಗುತ್ತಿಗೆ ಪಡೆದಿದ್ದ ಭಾಟಿಯಾ ಕಂಪೆನಿ ಸರಿಸುಮಾರು ನಾಲ್ಕೂ ಮುಕ್ಕಾಲು ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲನ್ನು 2009 ರ ಏಪ್ರಿಲ್ 9 ರ ಹೊತ್ತಿಗೆ ಸರಬರಾಜು ಮಾಡಿತ್ತು. ಆದರೆ ಅದೇ ಹೊತ್ತಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಲ್ಲಿದ್ದಲಿನ ರೇಟು ಏಕಾಏಕಿ ಇಳಿಯಿತು. ಅದು ಪ್ರತಿ ಮೆ.ಟನ್ನಿಗೆ ಎರಡೂವರೆ ಸಾವಿರ ರೂ.ಗಳಷ್ಟು ದರ ಕುಸಿತ. ಇಂಥ ಸ್ಥಿತಿಯಲ್ಲಿ ಹಳೇ ರೇಟಿಗೇ ಕಲ್ಲಿದ್ದಲು ಖರೀದಿಸಿದರೆ KPCL ಗೆ ಅಂದರೆ ಸರ್ಕಾರಿ ಬೊಕ್ಕಸಕ್ಕೆ ಸರಿಸುಮಾರು 70 ಕೋಟಿ ರೂಪಾಯಿಗಳಷ್ಟು ಲುಕ್ಸಾನಾಗುತ್ತದೆಯೆಂದೂ, ಕೊಟ್ಟ ಟೆಂಡರ್ ಮೊತ್ತದಲ್ಲಿ ಶೇ. 15 ರಷ್ಟನ್ನು ಕಡಿತಗೊಳಿಸಲು ಒಪ್ಪಂದದಲ್ಲೇ ಅವಕಾಶವಿದೆಯಾದ್ದರಿಂದ ಭಾಟಿಯಾ ಕಂಪನಿಯ ಕಲ್ಲಿದ್ದಲನ್ನು 5.10 ಲಕ್ಷ ಮೆಟ್ರಿಕ್ ಟನ್ನಿಗಷ್ಟೇ ಸೀಮಿತಗೊಳಿಸುವುದೇ


ಮುಖ್ಯಮಂತ್ರಿಯ ಕಳ್ಳ ಆದೇಶ.. ಯಡ್ಡಿ ಹಸ್ತಾಕ್ಷರದಲ್ಲಿ 2ನೇ ಆದೇಶ....

ಲಾಭಕರ ಎಂದು ಆಗ KPCL ನ ಎಂ.ಡಿ.ಯಾಗಿದ್ದ ಪ್ರಾಮಾಣಿಕ ಐಎಎಸ್ ಅಧಿಕಾರಿ ಜಾಮದಾರ್ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ.

ಅಲ್ಲಿಗೆ ಭಾಟಿಯಾ ಕಂಪೆನಿ ಇನ್ನೂ 30 ಸಾವಿರ ಮೆ. ಟನ್ ಕಲ್ಲಿದ್ದಲನ್ನಷ್ಟೇ ಸರಬರಾಜು ಮಾಡಬೇಕು. ಉಳಿಕೆ 90 ಸಾವಿರ ಮೆ. ಟನ್ ಕಲ್ಲಿದ್ದಲನ್ನು ತಲಾ ಮೆ. ಟನ್ನಿಗೆ 2500 ರೂ. ಕಮ್ಮಿ ರೇಟಿಗೆ ಖರೀದಿಸುವುದರಿಂದ ರಾಜ್ಯ ಬೊಕ್ಕಸ 70 ಕೋಟಿ ರೂಪಾಯಿಗಳಷ್ಟು ಲಾಭವಾಗುತ್ತದೆ ಎಂದು KPCL ಆಡಳಿತ ಮಂಡಳಿ ಸ್ಪಷ್ಟ ನಿರ್ಧಾರಕ್ಕೆ ಬಂದಿತ್ತು.


ಕೆ.ಜೈರಾಜ್


ವಿ.ಪಿ.ಬಳಿಗಾರ್

ಆದರೆ KPCL ಅಂದರೆ ಕರ್ನಾಟಕ ವಿದ್ಯುತ್ ನಿಗಮದ ನಿರ್ಣಯ ಮತ್ತು ಅದರ ಎಂ.ಡಿ. ಜಾಮದಾರ್ ಸರ್ಕಾರಕ್ಕೆ ಮಾಡಿಕೊಂಡ ಮನವಿಯನ್ನೇ ಧಿಕ್ಕರಿಸಿದ ಮುಖ್ಯಮಂತ್ರಿ ಯಡಿಯೂರಪ್ಪ, ಭಾಟಿಯಾ ಕಂಪೆನಿಯಿಂದ ಪೂರ್ತಿ 6 ಲಕ್ಷ ಮೆ.ಟನ್ ಕಲ್ಲಿದ್ದಲನ್ನು ಖರೀದಿಸಲೇಬೇಕೆಂದು 2009 ರ ಏಪ್ರಿಲ್ 22 ರಂದು ದಬ್ಬಾಳಿಕೆಯ ಆದೇಶ ನೀಡುತ್ತಾರೆ.

ಅಂದರೆ ಮಾರುಕಟ್ಟೆ ರೇಟಿಗಿಂತ ಎರಡೂವರೆ ಸಾವಿರ ರೂಪಾಯಿ ಹೆಚ್ಚಿಗೆ ಕೊಟ್ಟು ಭಾಟಿಯಾ ಕಂಪೆನಿಯಿಂದ 90 ಸಾವಿರ ಮೆ. ಟನ್ನುಗಳಷ್ಟು ಕಲ್ಲಿದ್ದಲು ಖರೀದಿಸಬೇಕು!

ಮುಖ್ಯಮಂತ್ರಿಯೊಬ್ಬ ತನ್ನ ಇಂಥ ಆದೇಶದಿಂದ ರಾಜ್ಯ ಬೊಕ್ಕಸಕ್ಕೆ 70 ಕೋಟಿಯಷ್ಟು ನಷ್ಟವಾಗುತ್ತಿದೆ ಎಂದು ಗೊತ್ತಿದ್ದೂ ಅದನ್ನು KPCL ನ ಎಂ.ಡಿ.ಯೇ ವಿವರಿಸಿ ಪತ್ರ ಬರೆದಾಗಲೂ ಅದನ್ನು ಧಿಕ್ಕರಿಸಿ ಆದೇಶ ಕೊಡುತ್ತಾನೆಂದರೆ ಏನರ್ಥ?

ಇದು 70 ಕೋಟಿಯ ಮೊದಲ KPCL ಡಕಾಯಿತಿಯಾದರೆ ಇದಕ್ಕೆ ಪೂರಕವೆಂಬಂತೆ - ನಡೆದದ್ದು ದೆಹಲಿಯ ಎಂಎಂಟಿಸಿ ಕಂಪೆನಿಯಿಂದ ಮತ್ತೆ 6 ಲಕ್ಷ ಮೆ.ಟನ್ ಕಲ್ಲಿದ್ದಲು ಖರೀದಿಯ ಎರಡನೇ ಡಕಾಯಿತಿ.

ಹೇಗೂ ಭಾಟಿಯಾ ಕಂಪೆನಿ 2008 ರ ಸೆಪ್ಟೆಂಬರ್ ತಿಂಗಳಿಂದ ಕಲ್ಲಿದ್ದಲು ಪೂರೈಸುತ್ತದೆಯಾದ್ದರಿಂದ ತುರ್ತಾಗಿ ಅಂದರೆ 2008 ರ ಜುಲೈ ಮತ್ತು ಆಗಸ್ಟ್ ತಿಂಗಳಿಗೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಕೊರತೆಯಾದ 2 ಲಕ್ಷ ಟನ್ ಕಲ್ಲಿದ್ದಲನ್ನು ಯಾರಿಂದ? ಹೇಗೆ ಖರೀದಿಸಬೇಕೆಂಬುದು. ಅದಕ್ಕೆಂದು ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಆರ್. ಶ್ರೀನಿವಾಸಮೂರ್ತಿ, ಇಂಧನ ಖಾತೆ ಪ್ರಧಾನ ಕಾರ್ಯದರ್ಶಿ ಕೆ. ಜೈರಾಜ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ವಿ.ಪಿ. ಬಳಿಗಾರ್ ಮತ್ತು KPCL ಎಂ.ಡಿ.ಎಸ್.ಎಂ. ಜಾಮದಾರ್ ಇತ್ಯಾದಿ ಐಎಎಸ್ ಅಧಿಕಾರಿಗಳಿದ್ದ ಖರೀದಿ ಸಮಿತಿಯೊಂದನ್ನು 2008 ರ ಜುಲೈ 17 ರಂದು ಸರ್ಕಾರ ರಚಿಸುತ್ತದೆ.

ಈ ಸಮಿತಿ ದೆಹಲಿಯ ಎಂಎಂಟಿಸಿ ಕಂಪೆನಿಯಿಂದ ಕೇವಲ ಎರಡು ತಿಂಗಳಿಗೆ 2 ಲಕ್ಷ ಮೆ. ಟನ್ನುಗಳಷ್ಟು ಕಲ್ಲಿದ್ದಲನ್ನು ಖರೀದಿಸಲು ನಿರ್ಧರಿಸಿ 2008 ರ ಜುಲೈ 17 ರಂದು ಟೆಂಡರ್ ಕೊಡುತ್ತದೆ. ಆದರೆ ಇದಾಗಿ ಒಂದು ವಾರಕ್ಕೆ ಅಂದರೆ 2008 ರ ಜುಲೈ 24 ರಂದು KPCL ಎಂ.ಡಿ ಮತ್ತು ಇಂಧನ ಇಲಾಖೆಗೆ ಪ್ರಧಾನ ಕಾರ್ಯದರ್ಶಿ ಜೈರಾಜ್‌ಗೆ ಮುಖ್ಯಮಂತ್ರಿಗಳ ಎರಡನೇ ಆದೇಶ ಬರುತ್ತದೆ. ಎಂಎಂಟಿಸಿಯಷ್ಟೇ ಅಲ್ಲದೇ ಇನ್ನೂ

▶▶▶

ಕೇಂದ್ರ ಸರ್ಕಾರದ ನಿರ್ಬಂಧವಿದ್ದಾಗ್ಯೂ....?

ಚೆನ್ನೈನ ಭಾಟಿಯಾ ಕಂಪೆನಿ ಮತ್ತು ದೆಹಲಿಯ ಎಂಎಂಟಿಸಿ ಕಂಪೆನಿಗಳನ್ನು ಮುಂದಿಟ್ಟುಕೊಂಡು ಸರಿಸುಮಾರು 477 ಕೋಟಿ ರೂಪಾಯಿಗಳನ್ನು ದೋಚಲು ಮುಂದಾದ ಮುಖ್ಯಮಂತ್ರಿ ಯಡ್ಡಿ ಕೇವಲ ಅಧಿಕಾರಿಗಳ ಮನವಿಯನ್ನಷ್ಟೇ ಧಿಕ್ಕರಿಸಿಲ್ಲ; ಕೇಂದ್ರ ಸರ್ಕಾರದ ಕಾನೂನು ಕಟ್ಟಳೆಗಳನ್ನೆಲ್ಲ ಉಲ್ಲಂಘಿಸಿದ್ದಾರೆ.

ಕೇಂದ್ರ ಸರ್ಕಾರವೇ ವಿಧಿಸಿದ ನಿಯಮಾವಳಿಗಳ ಪ್ರಕಾರ ರಾಯಚೂರು ಥರ್ಮಲ್ ಪವರ್ ಘಟಕವು ಶೇ.60ರಷ್ಟು ದೇಶಿಯ ಕಲ್ಲಿದ್ದಲನ್ನು ಬಳಕೆ ಮಾಡಬೇಕು. ಅಂದರೆ ಸುಮಾರು 7 ಲಕ್ಷ ಮೆಟ್ರಿಕ್ ಟನ್ ದೇಶಿಯ ಕಲ್ಲಿದ್ದಲನ್ನು ಬಳಕೆ ಮಾಡಿ ಉಳಿದಂತೆ 5 ಲಕ್ಷ ಮೆಟ್ರಿಕ್ ಟನ್ ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಬಳಸತಕ್ಕದ್ದು. ಆದರೆ ಮುಖ್ಯಮಂತ್ರಿಗಳ ಆದೇಶದಿಂದಾಗಿ ಕೆಪಿಸಿಎಲ್ ಭಾಟಿಯಾ ಕಂಪೆನಿಯಿಂದ 6 ಲಕ್ಷ ಮೆಟ್ರಿಕ್ ಟನ್ ಮತ್ತು ಎಂಎಂಟಿಸಿಯಿಂದ ಹೆಚ್ಚುವರಿಯಾಗಿ 3 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲನ್ನು ಅಂದರೆ ಒಟ್ಟು 9 ಲಕ್ಷ ಮೆಟ್ರಿಕ್ ಟನ್ ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಬಳಸುತ್ತದೆ.

• ಇದು ಕೇಂದ್ರ ಶಾಸನದ ಸ್ಪಷ್ಟ ಉಲ್ಲಂಘನೆ. ಕಾಯ್ದೆ ಗೊತ್ತಿದ್ದೂ ಸಂಬಂಧಪಟ್ಟ ಅಧಿಕಾರಿಗಳು ಲಿಖಿತವಾಗಿ ಮನವಿ ಮಾಡಿದ ನಂತರವೂ ಅದನ್ನು ಕಸದಬುಟ್ಟಿಗೆಸೆದು ಸರಿಸುಮಾರು ಎರಡು ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಹೆಚ್ಚುವರಿ ಆಮದಿತ ಕಲ್ಲಿದ್ದಲನ್ನು ಖರೀದಿಸುತ್ತಾರೆಂದರೆ ಇದು ಉದ್ದೇಶಪೂರ್ವಕ ಹಗಲು ದರೋಡೆಯೇ ಹೊರತು ಮತ್ತೇನಲ್ಲ. ಸಿಬಿಐ ತನಿಖೆಯಾದರೆ ಮುಖ್ಯಮಂತ್ರಿ ಜೈಲು ಪಾಲಾಗುವುದಂತೂ ಗ್ಯಾರಂಟಿ.

ಮಾನದಲ್ಲಿ ಕಲ್ಲಿದ್ದಲನ್ನು ಖರೀದಿಸತಕ್ಕದ್ದು
ಯಮ್ ಆದೇಶವಾಗಿತ್ತು.
ಆದೇಶ ಸಿಕ್ಕಿದ್ದೇ ತಡ ಕೇವಲ 2 ಲಕ್ಷ
ಗುತ್ತಿಗೆ ಪಡೆದಿದ್ದ ಎಂಎಂಟಿಸಿಗೆ ಒಟ್ಟು
ಮೆ.ಟನ್ ಕಲ್ಲಿದ್ದಲು ಸರಬರಾಜು
ತೆ ವಿಚಿತ್ರ ಆದೇಶವೊಂದನ್ನು KPCL
ಸ್ತದೆ. ಅಗತ್ಯವೇ ಇಲ್ಲದೆ ನಾಲ್ಕು ಲಕ್ಷ
ಹೆಚ್ಚುವರಿ ಕಲ್ಲಿದ್ದಲನ್ನು ಅಧಿಕ ರೇಟು
ಖರೀದಿಸುವ ಸರ್ಕಾರಿ ದುರಾಚಾರದ
ಊದಲು ಕೋರ್ಟ್ ಕಟಕಟೆ ಹತ್ತಿದ್ದು
Knowledge infrastructure
pvt ltd. ಎಂಬ ಕಂಪನಿಯ
ಕೆ. ರಂಜನ್ ಎಂಬಾತ. ರಾಜ್ಯ
ನ ಏಕಪೀಠ ನ್ಯಾಯಾಲಯವು
ಸಿ. ಕಲ್ಲಿದ್ದಲು ಖರೀದಿ ಕುರಿತಂತೆ
ಜುಲೈ 24 ಮತ್ತು ಆಗಸ್ಟ್ 2 ರ
ರ್ಕಾರಿ ಅಧಿಸೂಚನೆಗಳಿಗೆ ತಡೆಯಾಜ್ಞೆ


ವಿರುದ್ಧ ಎಂಎಂಟಿಸಿ ಹೈಕೋರ್ಟಿನ
ಪೀಠಕ್ಕೆ ಮೇಲ್ಮನವಿ ಸಲ್ಲಿಸಿದರೆ,
ಾಡ ಈಗಾಗಲೇ ಖರೀದಿಸಿದ
ರೆ ಲಕ್ಷ ಟನ್‌ಗಷ್ಟೇ ಹಣ ಪಾವತಿ
ಳಿದಂತೆ ಖರೀದಿ ಪ್ರಕ್ರಿಯೆಯೇ ಅಕ್ರಮ
ನೂನುಬಾಹಿರ ಎಂದು ತೀರ್ಪಿತ್ತಿತು.
ದೇ 2009 ರ ಜುಲೈ 3 ರ ತನ್ನ
ಹೆಚ್ಚುವರಿ 4 ಲಕ್ಷ ಟನ್ ಖರೀದಿಸಿದ್ದೇ
ಬಾಹಿರವೆಂದೂ ಮುಖ್ಯಮಂತ್ರಿಗಳ ಪತ್ರದ
ಇದಕ್ಕೆ ಬೇರಾವುದೇ
ಲ್ಲವೆಂದೂ ಇಲ್ಲಿ ಸರ್ಕಾರವೇ
ಯೆಂದೂ ತೀರ್ಪು ಕೊಟ್ಟಿತು.
ಲ್ಲದೇ ಇಂಥ ಕಾನೂನುಬಾಹಿರ
ಯ ತಪ್ಪಾಗಿ ಸರ್ಕಾರದ ಆರ್ಥಿಕ
ಪ್ರಧಾನ ಕಾರ್ಯದರ್ಶಿ,
ಮಂತ್ರಿಗಳ ಪ್ರಧಾನ ಕಾರ್ಯದರ್ಶಿ
ಮತ್ತು KPCL ನ ಎಂ.ಡಿ; ಈ
ಲೂ 25 ಸಾವಿರ ರೂಪಾಯಿಗಳ ದಂಡ

ಕ್ಷ ಮೆ. ಟನ್ನಿಗೆ ಬದಲಾಗಿ 3.06 ಲಕ್ಷ
ಖರೀದಿಸಿದ್ದರಿಂದಾಗಿ ಸರ್ಕಾರಕ್ಕಾದ 1
ಟನ್ನಿನ 80 ಕೋಟಿ ರೂಪಾಯಿಗಳ
ತ್ತು ಭಾಟಿಯಾ ಇಂಟರ್‌ನ್ಯಾಷನಲ್ಸ್
ಂದ 90 ಸಾವಿರ ಮೆ.ಟನ್‌ಗೆ ಹೆಚ್ಚಿಗೆ
ಖರೀದಿಸಿದ್ದರಿಂದಾದ 70 ಕೋಟಿ
ಗಳ ಲುಕ್ಸಾನು ಸೇರಿದರೆ;
ಮಂತ್ರಿಗಳ 24-7-2008ರ ಆದೇಶ
ದಲೇ ರಾಜ್ಯ ಬೊಕ್ಕಸಕ್ಕೆ 150 ಕೋಟಿ
ಗಳ ನಷ್ಟವಾಗಿದೆ.
ಕ ಹೈಕೋರ್ಟ್ ತಡೆಯಾಜ್ಞೆ ಕೊಡದೇ
ಕಲ್ಲಿದ್ದಲು ಖರೀದಿಯೊಂದರಿಂದಲೇ
ಕ್ಕಸಕ್ಕೆ ಒಟ್ಟು 477 ಕೋಟಿ
ಗಳಷ್ಟು ಲುಕ್ಸಾನಾಗುತ್ತಿತ್ತು!
ಮಂತ್ರಿಯೊಬ್ಬ ತನ್ನದೇ ಕೈಕೆಳಗಿನ
ಅಧಿಕಾರಿಗಳು ಬರೆದ ಪತ್ರವನ್ನೂ
ಸರ್ಕಾರಕ್ಕೆ ನೂರಾರು ಕೋಟಿ ಲೆಕ್ಕದಲ್ಲಿ
ತ್ತದೆ ಎಂಬುದನ್ನೂ ಮುಚ್ಚಿಟ್ಟು, ತನ್ನದೇ
ಹಾಕಿ ಅಗತ್ಯವೇ ಇಲ್ಲದೇ, ಅಧಿಕ ರೇಟು
ಮಾವ್ಯಾವುದೋ ಮಧ್ಯವರ್ತಿ ಕಂಪನಿಗಳ
ಗಿ ಆದೇಶ ಹೊರಡಿಸುತ್ತಾನೆಂದರೆ-
ಮುಖ್ಯಮಂತ್ರಿಗೆ ಸಿಕ್ಕ ಕಮಿಷನ್ ಎಷ್ಟು?
ಳ್ಳ ಕಂಪನಿಗಳ ಹೆಸರಲ್ಲಿ
ಮಂತ್ರಿಯೇ ಎಸಗುತ್ತಿರುವ ಹಗಲು
ವಾ?
ಯಾಗಿರುವುದು ನೂರೈವತ್ತು ಕೋಟಿ.
ಜ್ಯ ಬೊಕ್ಕಸದ ಜನರ ದುಡ್ಡು ಸ್ವತಃ
ರ ಸರ್ಕಾರಕ್ಕೆ ಧೀಮಾರಿ ಹಾಕಿದೆ.
ಮಂತ್ರಿಗಳು ಬರೆದ ಪತ್ರದಿಂದಲೇ ಹಗಲು
ಯಾಗಿದೆಯೆಂದು ಸ್ಪಷ್ಟವಾಗಿ ತೀರ್ಪಿತ್ತಿದೆ.
ಮತ್ತೆ ಮತ್ತೆ ನ್ಯಾಯಾಂಗ ತನಿಖೆ
ಕೈಸಿಕ್ಕುವ ಮುಖ್ಯಮಂತ್ರಿಯ ಕಳ್ಳಾಟಕ್ಕೆ
?
ದೆತ್ತ ಲೆಕ್ಕ ಹಾಕಿದರೂ ಕಲ್ಲಿದ್ದಲು
ಹಗರಣದಲ್ಲಿ ಮುಖ್ಯಮಂತ್ರಿ,
ಗಿ ಸಿಕ್ಕಿ ಬೀಳುತ್ತಾರೆ.

ಶವ ಹುಡುಕಿದ ಕಮ್ಯಾಂಡೋಗಳು.........



ಫ್ಲೈಟ್ ರೆಕಾರ್ಡ್‌ರ್........



ವೈಎಸ್‌ಆರ್ ಸಾವು


ಅಪಘಾತದ ಭೀಕರತೆ ಬಿಂಬಿಸುವ ಫೋಟೋಗಳು


ಆಂಧ್ರ ಮುಖ್ಯಮಂತ್ರಿ ವೈಎಸ್ ರಾಜಶೇಖರ ರೆಡ್ಡಿಯ ಹೆಲಿಕಾಪ್ಟರ್ ಅಪಘಾತದ ಸಾವಿನ ತನಿಖೆ ಇನ್ನೂ ಪೂರ್ತಿಯಾಗಿಲ್ಲ. ಚಿತೆಯ ಮೇಲಿನ ಬೆಂಕಿ ಆರುವ ಮುನ್ನವೇ ವೈಎಸ್‌ಆರ್‌ನ ಕುಲಕಂಟಕ ಪುತ್ರ ಜಗನ್ ತಾನೇ ಸಿಎಂ ಆಗಲು ಮಾಡಿದ ಪ್ರಯತ್ನವೂ ಕೈಗೂಡಿಲ್ಲ. ಈ ನಡುವೆ ರಾಜಶೇಖರ್ ರೆಡ್ಡಿ ನಲ್ಲಮಲ ಅರಣ್ಯ ಪ್ರದೇಶದಲ್ಲಿ ಹೇಗೆ ತೀರಿ ಹೋಗಿರಬಹುದೆಂಬುದಕ್ಕೆ ಸಾಕ್ಷಿಯಾಗಿ ಕೆಲವು ಫೋಟೋಗಳು ಸಿಕ್ಕಿವೆ.


ಹೆಲಿಕಾಪ್ಟರ್‌ನಲ್ಲಿದ್ದ ಐದೂ ಜನರನ್ನು ಬಲಿ ತೆಗೆದುಕೊಂಡ ಈ ಆಕ್ಸಿಡೆಂಟ್‌ನ ಭೀಕರತೆ ಎಷ್ಟಿತ್ತೆಂದು ಇಲ್ಲಿರುವ ಫೋಟೋಗಳೇ ಹೇಳುತ್ತಿವೆ.




ಸುಟ್ಟು ಕರಕಲಾಗಿದ್ದ ವೈಎಸ್‌ಆರ್ ದೇಹ.....









ಪೈಲಟ್‌ಗಳು ಮತ್ತು ಜೊತೆಯಲ್ಲಿದ್ದವರ ಮೃತದೇಹಗಳು........

ಮಠ ಬಿಟ್ಟ ಮಂಚದ ಸ್ವಾಮಿ

ಸತತ ಎರಡು ವಾರ 'ಲಂಕೇಶ್' ಬಯಲು ಮಾಡಿದ ಸತ್ಯಗಳು, ವಿನಯ್ ಕುಲಕರ್ಣಿ ಗುಂಪಿನ ಒತ್ತಡ, ಭಕ್ತರ ಪ್ರಾಮಾಣಿಕ ಕಾಳಜಿಗಳು- ಇವೆಲ್ಲವನ್ನೂ ಎದುರಿಸಲಾಗದ ಮುರುಘಾಮಠದ ಮಂಚದ ಸ್ವಾಮಿ ಮಠ ತೊರೆದಿದ್ದಾನೆ. ಆ ಮೂಲಕ ಮಠಕ್ಕೆ ಮುಕ್ತಿ ನೀಡಿದ್ದಾನೆ. ನಡೆದಾಡುವ ದೇವರೆನಿಸಿದ ದಿವಂಗತ ಮಹಾಂತ ಅಪ್ಪ ಸ್ವಾಮಿಗಳ ಆತ್ಮಕ್ಕೆ ಕೊಂಚ ಶಾಂತಿ ಸಿಕ್ಕಂತಾಗಿದೆ.

ಕಳೆದ ವಾರ 'ಲಂಕೇಶ್' ಪ್ರಕಟಿಸಿದ ಮಲಗುವ ಸ್ವಾಮಿಯ ಮಂಚದ ಪುರಾಣ ಓದಿದ ಧಾರವಾಡ ಜನತೆ ಗಾಬರಿ ಬಿದ್ದರು. ಭಕ್ತರು ಗುಂಪುಗುಂಪಾಗಿ ಮಠಕ್ಕೆ ಬಂದು 'ಡಬಲ್ ಇಂಜನ್' ಶಿವಯೋಗಿಗೆ ಛೀ.. ಥೂ.. ಎಂದು ಉಗಿಯತೊಡಗಿದರು. ಉತ್ತರ ಕರ್ನಾಟಕದ ಪ್ರಮುಖ ಸ್ವಾಮಿಗಳೆಲ್ಲ ಫೋನ್ ಮೂಲಕ ಛೀಮಾರಿ ಹಾಕಿ, ಮಠ ತ್ಯಜಿಸುವಂತೆ ಬುದ್ಧಿ ಹೇಳಿದರು.


ಶಿವಯೋಗಿ....

ಈ ಎಲ್ಲ ಒತ್ತಡ ತಾಳಲಾಗದ ಸ್ವಾಮಿ ತನ್ನೆರಡೂ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿ ಕೋಣೆ ಹೊಕ್ಕುಬಿಟ್ಟ. ಕೋಣೆಯಲ್ಲಿ ಅದೇನು ಜ್ಞಾನೋದಯವಾಯ್ತೋ ಏನೋ, ಮಠ ತ್ಯಜಿಸುವ ನಿರ್ಧಾರ ಮಾಡಿದ. ಅಷ್ಟರಲ್ಲಾಗಲೇ, ಸ್ವಾಮಿಯ 'ಮಂಚದ ಮಹಾಭಾರತ'ಗಳೆಲ್ಲ ಸಿಡಿ ಆಗಿವೆ ಎಂಬ ಗುಲ್ಲೆದ್ದು ಬಿಟ್ಟಿತ್ತು. ಇನ್ನೇನು ಒದೆ ಬೀಳುವುದೊಂದು ಬಾಕಿಯಿತ್ತು. ಇದನ್ನರಿತ ಸ್ವಾಮಿ ತನ್ನ ಖಾಸಾ ಚೇಲಾಗಳಾದ ಚೆಡ್ಡಿ ಗುರುರಾಜ ಹುಣಸಿಮರದ, ಪಾಲಿಕೆ ಸದಸ್ಯ ಶಿವು ಹಿರೇಮಠ, ಅರುಣ್ ಚರಂತಿಮಠರ ಜೊತೆ ಚರ್ಚಿಸಿ ಪೀಠತ್ಯಾಗ ಮಾಡುವುದಾಗಿ ಘೋಷಿಸಿದ. ಸುಮ್ಮನೆ ಮಠಬಿಟ್ಟು ಹೋಗುವ ಬದಲು, ಮುಂದಿನ ಉತ್ತರಾಧಿಕಾರಿಯ ಆಯ್ಕೆ ಮಾಡಲೆಂದು ಎಂಟುಜನ ಸ್ವಾಮಿಗಳ ಸಮಿತಿಯೊಂದನ್ನು ತಾನೇ ರಚಿಸಿದ. ಅದರಲ್ಲಿ ತನ್ನ ಚೇಲಾಗಳನ್ನು, ವಿರೋಧಿ ಗುಂಪಿನ ವಿನಯ್ ಕುಲಕರ್ಣಿಯನ್ನು ಸೇರಿಸಿದ.

1988ರಿಂದ 21 ವರ್ಷಗಳ ಕಾಲ ಮಠವನ್ನು ಮೆಲ್ಲಮೆಲ್ಲಗೆ ಮುಕ್ಕುತ್ತ ಬಂದಿದ್ದ ಶಿವಯೋಗಿ ಧಾರವಾಡ, ಬೆಂಗಳೂರು, ದೆಹಲಿಗಳಲ್ಲಿ ಆಸ್ತಿ ಮಾಡಿದ್ದಾನೆ. ಪ್ರೇಯಸಿಯರಿಗೆ ಪ್ರಾಪರ್ಟಿ ಕೊಡಿಸಿದ್ದಾನೆ. ಆತನಿಂದ ಈಗ ಎಲ್ಲವನ್ನೂ ವಸೂಲಿ ಮಾಡುವತ್ತ ಭಕ್ತರು ಯೋಚಿಸಬೇಕಿದೆ.


ಮಹಾಂತಸ್ವಾಮಿ

ಮೊದ್ಲ ತರ್ಲೆ ನನ್ಮಗ

ಕುಂದಗೋಳ ತಾಲ್ಲೂಕಿನ ಪಶ್ಚುಪತಿಹಾಳದಲ್ಲಿ ಚಿಕ್ಕವನಿದ್ದಾಗಲೇ ತರ್ಲೆ ಕೆಲಸಗಳನ್ನು ಮಾಡುತ್ತಾ ಗ್ರಾಮದ ಜನರಿಗೆ ಬ್ಯಾಸ್ರ ಆಗಿದ್ದ ಈ ತರ್ಲೆ ನನ್ಮಗನನ್ನು ಸುಧಾರಿಸಲೆಂದು ಆತನ ತಂದೆ ಧಾರವಾಡದ ಮುರುಘಾಮಠಕ್ಕೆ ತಂದುಬಿಡುತ್ತಾರೆ. ಆದರೆ ಈ ತರ್ಲೆ ತಿಕ್ಕಲನಿಗೆ ವಿದ್ಯೆ ತಲೆಗೆ ಹತ್ತುವುದಿಲ್ಲ. 9ನೇ ಕ್ಲಾಸಿನಲ್ಲೇ ಡುಮುಕಿ ಹೊಡೆದು ತನ್ನ ವಿದ್ವತ್ ಪ್ರದರ್ಶನ ಮಾಡುತ್ತಾನೆ. ಅಸಲಿಗೆ ಮಠದ ಆಗಿನ ಸ್ವಾಮಿಗಳಾಗಿದ್ದ ಮಹಾಂತ ಅಪ್ಪನವರು ಶಿವಯೋಗಿಗೆ ಚಿಕ್ಕಪ್ಪರಾಗಬೇಕು. ಶಿವಯೋಗಿಯನ್ನು ಸುಧಾರಿಸಲು ಅವರು ಮಾಡಿದ ಯತ್ನಗಳೆಲ್ಲವೂ ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತಾಯಿತು. ಶಾಲೆ ಬಿಟ್ಟು ಅಬ್ಬೇಪಾರಿಯಂತೆ ಊರೂರು ತಿರುಗತೊಡಗಿದ. ಆಗಾಗ ಮಠದ ಸಿಬ್ಬಂದಿಗಳನ್ನು ಕಾಡತೊಡಗಿದ. ಮಠದ ಅಂಗಳದಲ್ಲೇ ಕುಡಿದು ತೂರಾಡಿ ಮುರುಘಾಮಠದ ಮಾನ ತೆಗೆದ.

ಮಹಾಂತ ಅಪ್ಪಗಳಿಗೆ ಅದ್ಯಾರು ಮಿಸ್‌ಗೈಡ್ ಮಾಡಿದರೋ ಏನೋ ಅವರು ಈ ಮುಠಾಳ ಶಿವಯೋಗಿಯನ್ನು ಮರಿಸ್ವಾಮಿಯನ್ನಾಗಿ ಮಾಡಿಬಿಟ್ಟರು. ಸ್ವಲ್ಪೇ ದಿನಗಳಲ್ಲಿ ಮಹಾಂತ ಅಪ್ಪಗಳು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆಯುವಾಗ ಅವರ ಬಾಯಿಗೆ ತನಿನೀರೂ ಬಿಡದ ಶಿವಯೋಗಿ, 'ಸಾರಾಯಿ ಸುರೀರಿ ಅಪ್ನ ಬಾಯ್ಗೆ' ಎಂದು ಉದ್ಧಟತನ ತೋರಿಸಿದ್ದ.

ಮಹಾಂತ ಅಪ್ಪಗಳ ಇಚ್ಛೆಯಂತೆ ಭಕ್ತರು ಶಿವಯೋಗಿಯನ್ನು ಪೀಠದಲ್ಲಿ ಕುಕ್ಕರಿಸಿ ಕೂಡ್ರಿಸಿದರು. ಅಲ್ಲಿಂದ ಶುರುವಾಯ್ತು ಶಿವಯೋಗಿ ಕಳ್ಳಾಟ, ಮಂಚದಾಟ. ಬೆಂಗಳೂರಿನ ಜಂಗಮ ಮಠವೊಂದರ ಸ್ವಾಮಿಯ ತಾಯಿ ಈತನ ಮೊದಲ ಪ್ರೇಯಸಿಯಾಗಿ, ಮಠದ ಐದಾರು ಕೋಟಿ ಬಾಚಿದಳು. ನಂತರ ಧಾರವಾಡದ ವಿಜಯಲಕ್ಷ್ಮಿ ಎಂಟ್ರಿ ಪಡೆದು, ಮೂರು ಮಕ್ಕಳ ತಾಯಾಗಿ ಮಠದ ಮೂರ್‍ನಾಲ್ಕು ಕೋಟಿ ಬಳುವಳಿ ಪಡೆದಳು. ಇನ್ನು ಸೈಡ್ ಲವರ್ಸ್‌ಗಳಾದ ರಾಯಚೂರಿನ ಪಾರ್ವತಿ, ಅತನೂರಿನ ಪರಿಮಳಾ ಸಿಕ್ಕಷ್ಟು ಸುಲಿದುಕೊಂಡು ಹಾಯಾಗಿದ್ದಾರೆ.

ಈಗ ಇವರ್‍ಯಾರಿಗೂ ಶಿವಯೋಗಿಯ ಸಹವಾಸವೇ ಬೇಡವಾಗಿದೆಯಂತೆ.

ಆತ್ಮಹತ್ಯೆ ಡ್ರಾಮಾ

"ನಮ್ ಮನ್ಸಿಗೆ ಬಾಳಾ ಬ್ಯಾಸರಾಗೈತಿ. ಇತ್ತಿತ್ತಲಾಗ ಕೆಲ್ವು ಮಂದಿ ನಮ್ಗ ಬಲೇ ತೊಂದ್ರಿ ಕೊಡ್ಡಾಕ ಹತ್ಯಾರ. ಹಿಂಗಾಗಿ ಸಾಯ್ಬೇಕು ಅಂತಾ ನಿರ್ಧಾರ ಮಾಡಿದ್ದೆ. ಆದ್ರ ನಮ್ಗೆ ಬಾಳಾ ಬೇಕಾದ ಭಕ್ತರು ಬಂದು ಹಾಂಗ ಮಾಡಿಕೊಬ್ಯಾಡ್ರಿ 'ಅಪ್ಪಾರ' ಅಂತಾ ಬೇಡಿಕೊಂಡ್ರು. ಹಂಗಾಗಿ ಸಾಯೋ ನಿರ್ಧಾರ ಕೈಬಿಟ್ಟೆ. ಈಗ ಪೀಠ ತ್ಯಾಗ ಮಾಡಿ ಮಠ ಬಿಡಾಕ ಹತ್ತೀನಿ" ಎಂದು ಪಕ್ಕಾ ಸಿನಿಮಾ ಶೈಲಿಯಲ್ಲಿ ಮಾಧ್ಯಮದವರೂ ಭಕ್ತರ ಮುಂದೆ ಡೈಲಾಗ್ ಹೊಡೆದ ಸ್ವಾಮಿ ಆತ್ಮಹತ್ಯೆಯ ಡ್ರಾಮಾ ಮೂಲಕ ಜನರಲ್ಲಿ ಸಿಂಪಥಿ ಮೂಡಿಸಲು ನೋಡಿದ. ಭಕ್ತರು ಮುಂದೆ ಬಂದು ಮತ್ತೆ ತನ್ನನ್ನೇ ಪೀಠಾಧೀಶನಾಗಿ ಮಾಡುವರೆಂದು ಶಿವಯೋಗಿ ಎಣಿಸಿದ್ದ. ಆದರೆ ಈತ ಮಠ ತೆರೆಯುವುದನ್ನೇ ಕಾಯುತ್ತಿದ್ದ ಭಕ್ತರು 'ಮೊದ್ಲು ಗಂಟು ಮೂಟೆ ಕಟ್ಟಪಾ' ಎಂದು ಸ್ವಾಮಿಗೆ ನಿರಾಶೆ ಮಾಡಿಬಿಟ್ಟರು.

ಎಲ್ಲಿಗೆ ಹೋಯಿತು ಡಬಲ್ ಇಂಜಿನ್?

ಮಠ ಬಿಟ್ಟ ಚಟಾಧೀಶ ಸ್ವಾಮಿ ಈಗೆಲ್ಲಿದ್ದಾನೆ? ಯಾವ ಪ್ರೇಯಸಿಯ ಅಂತಃಪುರ ಹೊಕ್ಕಿದ್ದಾನೆ ಎಂಬ ಪ್ರಶ್ನೆಗಳು ಧಾರವಾಡದ ಜನರನ್ನು ಕಾಡತೊಡಗಿವೆ.


ಮಠಬಿಟ್ಟ ಸ್ವಾಮಿ ಒಂದು ದಿನ ಧಾರವಾಡದ ಜಂಗಮರೊಬ್ಬರ ಮನೆಯಲ್ಲಿ ತಂಗಿದ್ದ. ನಂತರ ತನ್ನ ಕ್ಲೋಸ್ ಫ್ರೆಂಡ್ ಆಗಿರುವ ಇಂಗಳಗಾವಿಯ ಸ್ವಾಮಿಯ ಬಳಿ ಹೋಗಿದ್ದಾನೆ. ಧಾರವಾಡ ಪ್ರೇಯಸಿ ವಿಜಯಲಕ್ಷ್ಮಿಯೂ ಸ್ವಾಮಿಯೊಂದಿಗೆ ತಾತ್ಕಾಲಿಕವಾಗಿ ಮುನಿಸಿಕೊಂಡಿದ್ದಾಳಂತೆ. ಜನರ ಪ್ರಶ್ನೆ ಎದುರಿಸಲಾಗದ ಶಿವಯೋಗಿ ಎರಡೂ ಮೊಬೈಲ್ ಸ್ವಿಚ್ ಆಫ್ ಮಾಡಿದ್ದಾನೆ.


ಮೃತ್ಯುಂಜಯಸ್ವಾಮಿ

ಮಠದ ಆಸ್ತಿ ಮಾರಿ ಬಂದ ಹಣದಲ್ಲಿ ಬೆಂಗಳೂರಿನ ಹನುಮಂತನಗರ ದಲ್ಲಿರುವ ಜಂಗಮ ಮಠದ ಜಾಗದಲ್ಲಿ ಆರು ಭವ್ಯ ಮನೆಗಳನ್ನು ಕಟ್ಟಿಸಿರುವ ಶಿವಯೋಗಿ ಒಂದನ್ನು ತನ್ನ ಬೆಂಗಳೂರು ಡಾರ್ಲಿಂಗಿಗೆ, ಉಳಿದ ಐದನ್ನು ತಿಂಗಳಿಗೆ 20 ಸಾವಿರದಂತೆ ಬಾಡಿಗೆಗೆ ನೀಡಿದ್ದಾನೆ. ಧಾರವಾಡ ನಾರಾಯಣ ಪುರ ನಗರದಲ್ಲಿ ವಿಜಯಲಕ್ಷ್ಮಿ ಹೆಸರಲ್ಲಿ 40 ಲಕ್ಷದ ಮನೆಕಟ್ಟಿದ್ದಾನೆ.

ಉತ್ತರಾಧಿಕಾರಿ ಯಾರು?

ಈಗ ಉತ್ತರಾಧಿಕಾರಿಯ ಆಯ್ಕೆ ನಡೆಯಬೇಕಿದೆ. ಉತ್ತರಾಧಿಕಾರಿಯ ಆಯ್ಕೆಯಲ್ಲಿ ಚಿತ್ರದುರ್ಗದ ಮುರುಘಾಮಠದ ಪಾತ್ರ ದೊಡ್ಡದಿದೆ. ಮಹಾಂತ ಅಪ್ಪಗಳಿದ್ದಾಗ ಆದ ತಪ್ಪು ಈಗಾಗಬಾರದು. ಆಗ ನಿಜವಾಗಿಯೂ ಮಹಾಂತ ಅಪ್ಪಗಳ ಉತ್ತರಾಧಿಕಾರಿಯಾಗಲು ಯೋಗ್ಯರಾಗಿದ್ದವರು 12 ವರ್ಷಗಳ ಕಾಲ ಶಿಷ್ಯ ವೃತ್ತಿ ಮಾಡಿ, ದುಶ್ಚಟಗಳ ವಿರುದ್ಧ ಪಾದಯಾತ್ರೆ ಮಾಡಿ ಜನಜಾಗೃತಿಯುಂಟುಮಾಡಿದ್ದ ಮುಳಗುಂದ ಗವಿಮಠದ ಮಲ್ಲಿಕಾರ್ಜುನ ಸ್ವಾಮಿ. ಆದರೆ ಕೊನೆಕ್ಷಣದಲ್ಲಿ ಶಿವಯೋಗಿಗೆ ಆ ಭಾಗ್ಯ ದೊರಕಿತ್ತು.


ಭೂ ಖರೀದಿ ಪತ್ರ.....

ಈಗ ಟ್ರಸ್ಟಿನವರೂ ಭಕ್ತರು ಚಿತ್ರದುರ್ಗದ ಮಠದ ಸ್ವಾಮಿಗಳ ಸಲಹೆ ಪಡೆದು ಯೋಗ್ಯ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಬೇಕಿದೆ.

● ಹುರುಳಿಕುಪ್ಪಿ ವಿನಯ್


ಸಾಮಾನ್ಯನೆಂದೆಯ? ತಪ್ಪು ತಿಳಿದಿರು ಜೋಕೆ:
ಬೀದಿಗೆ ಕೈಯೊಡ್ಡದವ, ಕಪ್ಪಿಗೆ ಇಕ್ಕದುರುಳನ್ನೆ
ಕಚ್ಚುತ್ತ ಕದಿಯುತ್ತ ಸಿಗಿಯುತ್ತ ಅಗೆಯುತ್ತ
ಬಗೆಯುತ್ತಲೇ ಕಣ್ಣ ಮುಚ್ಚುವವ, 'ತಾಳಕ್ಕೆ ಸರಿ ಹೆಜ್ಜೆ'
ಹೂಂಕರಿಸುತ್ತಲಿದ್ದರೂ ನಿನ್ನ ಪಿಸ್ತೂಲು
ಮನಸ್ಸಿನಲ್ಲೇ ಬೇರೆ ತಾಳ ಲಯ ನಿಭಾಯಿಸುವ
ಹುಟ್ಟಾ ಸ್ವತಂತ್ರ ಪರಮಾಣುದೇಹಿ.

– *ಗೋಪಾಲಕೃಷ್ಣ ಅಡಿಗ*

ನಂಜೇರಿದ ಊರಿನಲ್ಲಿ ಬತ್ತುತ್ತಿರುವ ತೊರೆಗಳು

ಊರಲ್ಲಿ ಸಂಪ್ರದಾಯವಾದಿಯಾಗಿರುವುದು ಅನುಕೂಲಕರ; ಜಾತಿ, ಮಠ-ಮಾನ್ಯ ಅಧಿಕಾರಸ್ಥರ ಕೃಪೆಯಲ್ಲಿ ಬದುಕು ತಳ್ಳಬಹುದು. ಬಂಡುಕೋರರಾಗಿ ಬದುಕುವುದು ಸುಲಭವಲ್ಲದಿದ್ದರೂ, ಅಂಥವರಿಗೆ ಆದರ್ಶ, ಸೈದ್ಧಾಂತಿಕ ನಂಬಿಕೆಗಳ ಆಸರೆಯೂ, ಹಳೆಯದ್ದನ್ನು ಕಿತ್ತಿ ಒಗೆದೆನೆಂಬ ಉನ್ಮತ್ತತೆಯಿಂದ ಊರನ್ನು ಬೆಚ್ಚಿ ಬೀಳಿಸಿ ಜನರ ಗಮನವನ್ನು ಸೆಳೆಯಬಲ್ಲ ನಾಯಕನ ಆತ್ಮಸುಖದ ವಿಲಕ್ಷಣ ಆಕರ್ಷಣೆಯೂ ಇರುತ್ತದೆ. ಆದರೆ, ಈ ಎರಡೂ ಆಗಲೊಲ್ಲದ 'ಹುಟ್ಟಾ ಸ್ವತಂತ್ರ ಪರಮಾಣುದೇಹಿ'ಗಳ ಊರಿನ ಬದುಕು ಸಂಪ್ರದಾಯಸ್ಥರಷ್ಟು ನಿರುಮ್ಮಳವೂ ಅಲ್ಲ, ಬಂಡುಕೋರರಷ್ಟು ಆಕರ್ಷಕವೂ ಅಲ್ಲ. ಊ ಸಂದು-ಗೊಂದುಗಳು, ಜನರ ನಿತ್ಯ ಬದುಕಿನ ನಿಕಟ ವಿವರಗಳನ್ನು ಬಲ್ಲ ಇಂಥ ಮಂದಿ, ಕಾಣುವ ಮುಖಗಳಲ್ಲೇ 'ಸ್ವತಂತ್ರ ಪರಮಾಣುದೇಹಿ'ಗಳ ಚಹರೆ ಮೂಡುವುದನ್ನು ಕಾಯುತ್ತಿರುತ ಅಂಥ ಚಹರೆ ಕಂಡ ಗಳಿಗೆ ಅದರ ಎಳೆ ಹಿಡಿದು ಸೆಳೆದು ಸಹನೀಯವಾದ ಗೆಳೆಯರ ಬ ಕಟ್ಟಿಕೊಂಡು, 'ಮನಸ್ಸಿನಲ್ಲೇ ಬೇರೆ ತಾಳ ಲಯ ನಿಭಾಯಿಸುವ' ಗುಣವನ್ನು ಜನ ಬಿತ್ತಬಲ್ಲಂತಹ ಚಟುವಟಿಕೆಗಳನ್ನು ಮಾಡಿಕೊಂಡು ಇರುವುದರಲ್ಲಿ ಸಾರ್ಥಕತೆ ಕಾಣುತ್ತಾರ

ಅತ್ತ ಸಂಪ್ರದಾಯಸ್ಥರೂ ಇತ್ತ ಬಂಡುಕೋರರೂ ಅನುಮಾನಿಸುವ, ತಿವಿಯುವ ಈ ಜ ಮಹತ್ವ ಊರಿಗೆ ಆಗುತ್ತದೋ ಇಲ್ಲವೋ, ಊರನ್ನು ಗೊಡ್ಡಾಗದಂತೆ, ದುರುಳತನ ಬೆಳೆಸಿಕೊಳ್ಳದ ಬಂಡುಕೋರರು ಉಳಿದು ಬೆಳೆಯುವ ಸ್ವಾತಂತ್ರ್ಯಕ್ಕೆ ಧಕ್ಕೆಬಾರದಂತೆ ತಡೆಯುವ ಒಂ ವಾತಾವರಣವನ್ನು ಪೋಷಿಸುವವರು ಇವರು. ಉಡುಪಿಯಂಥ ಊರಿನಲ್ಲಿ ತ ಕಾರ್ಯಚಟುವಟಿಕೆಗಳ ಮೂಲಕ 'ಸ್ವತಂತ್ರ ಪರಮಾಣುದೇಹಿ'ಗಳ ವಿಶಾಲವಾದ ಸಮುದಾಯವ ಕಟ್ಟಿದ ಕೀರ್ತಿ ದಿವಗಂತ ಕು.ಶಿ.ಹರಿದಾಸ ಭಟ್ಟರದ್ದು. ಕರ್ನಾಟಕದ ಸಾಂಸ್ಕೃತಿಯ ವಲಯದ ಹೆಸರು ಮಾಡಿರುವ ಜಿ.ರಾಜಶೇಖರ್, ದಿ. ಮುರಾರಿ ಬಲ್ಲಾಳ್, ವಿಮರ್ಶಕ ಮುರಳಿ ಉಪಾಧ್ಯ, ಶಿಕ್ಷಣ ತಜ್ಞ-ಲೇಖಕ ಮಹಾ ಬಲೇಶ್ವರ ರಾವ್ ಇವರುಗಳ ಜೊತೆ ಹರಿದ ಭಟ್ಟರ ಸಾಂಸ್ಕೃತಿಕ ಗರಡಿಯ ಪಳಗಿದವರು ಕೆ.ಸುಬ್ರಮಣ್ಯ ಕೆದ್ಲಾ ಉಡುಪಿಯ 'ರಥಬೀದಿ ಗೆಳೆಯರ ಸಾಂಸ್ಕೃತಿಕ ಸಂಘಟನೆಯನ್ನು ಸ್ಥಾಪಿಸಿ ವರ್ಷಗಳ ಕಾಲ ಸಂಘಟನೆಯನ್ನು ಪೋ ಬೆಳೆಸಿದ ಕೆ.ಎಸ್.ಕೆದ್ಲಾಯ ತಮ್ಮ 62 ವಯಸ್ಸಿನಲ್ಲಿ, ದಿನಾಂಕ 18.8.2009ರಂ ತೀರಿಕೊಂಡರು.


ಕೆದ್ಲಾಯ...

ಕೃಷ್ಣಮಠದಲ್ಲಿ ಊಟಮಾಡಿಕೊಂ ವಿಜ್ಞಾನ ಪದವಿಯನ್ನು ಪಡೆದ ಕೆದ್ಲಾಯ ನಂತರ ಕನ್ನಡ ಎಂ.ಎ. ಮಾಡಿ, ಉಡುಪಿ ಸಮೀಪದ ಕಲ್ಯಾಣಪುರದ ಮಿಲಾಗ್ರೇಸ್ ಕಾಲೇಜಿನಲ್ಲಿ ಸುಮಾರು 25 ವರ್ಷಗಳ ಕಾಲ ಕ ಅಧ್ಯಾಪಕರಾಗಿದ್ದರು. ಮೊನಚಾದ ವಕ್ರ ಹಾಸ್ಯಕ್ಕೆ ಖ್ಯಾತರಾಗಿದ್ದ ಕೆದ್ಲಾಯ 'ಕಣ್ಣಿಗೆ ಕೈ ಹ ಮಾತನಾಡುವ' ನೇರ ಪ್ರವೃತ್ತಿಯ ಮನುಷ್ಯ. ಉಡುಪಿಯ 'ಜನಿವಾರವಿಲ್ಲದ' ಬೆರಳೆಣಿಕೆಯ ಬ್ರಾಹ್ಮಣರಲ್ಲಿ ಒಬ್ಬರಾಗಿದ್ದ ಕೆದ್ಲಾಯ, ಜಾತಿಯಾಚರಣೆಗಳಿಗೆ ವಿದಾಯ ಹೇಳಿದ್ದ ವಿಚಾರವ ಅಷ್ಟಮಠಗಳಿಂದ ಸುತ್ತುವರೆದಿರುವ ಉಡುಪಿಯ ರಥಬೀದಿಯಲ್ಲಿ, ದಿನವೂ ಪಟ್ಟಾಂ ಸೇರುತ್ತಿದ್ದ ಕಾಲೇಜು ಮೇಷ್ಟ್ರುಗಳು, ವ್ಯಾಪಾರಸ್ಥರನ್ನು ಜಾತಿ-ಮತ ಎಣಿಸದೆ ಒಟ್ಟುಗೂ 1981ರಲ್ಲಿ ಕೆದ್ಲಾಯ 'ರಥಬೀದಿ ಗೆಳೆಯರು' ಎಂಬ ಹೆಸರಿನಲ್ಲಿ ಹವ್ಯಾಸಿ ನಾಟಕ ತಂಡ ಕ ಕನ್ನಡದ ಹೊಸ ಅಲೆಯ ನಾಟಕ ಗಳನ್ನು ಆಡಿಸುವ ಮೂಲಕ ಸೂಕ್ಷ್ಮ ಕಲಾಭಿರುಚಿಯ ಉಡುಪಿಯ ನಾಗರಿಕರಲ್ಲಿ ಬಿತ್ತತೊಡಗಿದರು. ಈ ಸಂಸ್ಥೆಯ ವತಿಯಿಂದಾಗಿ ಭಾರತದ ಪ್ರ ನಾಟಕಗಳು ಉಡುಪಿಯಲ್ಲಿ ಪ್ರದರ್ಶನ ಕಂಡವು; ಪ್ರಖ್ಯಾತ ಚಿಂತಕರು, ಚಳವಳಿಗಾರ ಉಡುಪಿಗೆ ಬಂದು ಮಾತನಾಡಿದರು. ಈ ಕೀರ್ತಿಯಲ್ಲಿ ಸಿಂಹಪಾಲು ಕೆದ್ಲಾಯರಿಗೆ ಸೇರುತ

'ರಥಬೀದಿ ಗೆಳೆಯರು' ಸಂಘಟನೆಯ ಜೊತೆ ಬೆಳೆದವರು ಇಂದಿಗೂ ಕರಾವಳಿಯ ಸರ್ವವ್ಯಾಪಿಯಾಗಿರುವ ಹಿಂದೂತ್ವವಾದದ ವಿಷಕ್ಕೆ ತಮ್ಮ ಮನಸ್ಸನ್ನು ಕೊಟ್ಟಿಲ್ಲವೆಂಬುದ ಅರಿತರೆ, ಈ ಸಂಘಟನೆಯ ಸಾಮಾಜಿಕ ಮಹತ್ವವೂ, ಸಂಘಟಕ ಕೆದ್ಲಾಯರಂತಹ 'ಸ್ವತ ಪರಮಾಣುದೇಹಿ'ಯ ಬದುಕಿನ ಮಹತ್ವವೂ ಅರಿವಾದೀತು. 1990 ಅಕ್ಟೋಬರ್ ತಿಂಗಳ ರಥಬೀದಿಯಲ್ಲಿ ಅಡ್ವಾನಿಯ ರಥಯಾತ್ರೆಯ ರಾಜಕೀಯದ ವಿರುದ್ಧ ನಡೆದ ಚಾರಿತ್ರಿಕ ಪ್ರತಿಭಟ ಸಭೆಯ ಸಂಘಟನೆಯಲ್ಲಿ 'ರಥಬೀದಿ ಗೆಳೆಯ'ರೂ ಮುಖ್ಯ ಪಾತ್ರ ವಹಿಸಿದ್ದರು. ಹಾಗಿದ್ದೂ, ಸಂಘಟನೆ ಅಷ್ಟಮಠಗಳ ಜೊತೆ ಸಾಂಸ್ಥಿಕ ಒಡನಾಟವನ್ನೂ ಉಳಿಸಿಕೊಂಡಿದೆ. 199 ದಶಕದಲ್ಲಿ ಬಲಗೊಳ್ಳುತ್ತ ಹೋದ ಹಿಂದೂತ್ವವಾದಿ ಸಂಘಟನೆಗಳಿಗೆ ಈ ವೈವಿಧ್ಯತೆ ನುಂಗಲಾ ಬಿಸಿ ತುಪ್ಪ. ಉಡುಪಿಯಲ್ಲಿ ಎಡಪಂಥೀಯರ ಜೊತೆಗೂ ಪೇಜಾವರ ಮಠಾಧೀಶರ ಜೊತೆ ಸ್ನೇಹ-ವಾಗ್ವಾದಗಳ ಸಂಬಂಧ ಇಟ್ಟುಕೊಂಡಿರುವವರು 'ರಥಬೀದಿ ಗೆಳೆಯರು'. ಕೆದ್ಲಾಯರಂ ಸ್ವಾಮೀಜಿಯ ಹತ್ತಿರ ಯಾವ ಮುಲಾಜಿಲ್ಲದೆ ಮಾತನಾಡಬಲ್ಲವರು ಎಂಬ ಖ್ಯಾತಿ ಪಡೆದಿದ್ ಇದೇ ಕಾರಣಕ್ಕೆ ಅವರ ವಿರುದ್ಧ ಅಪಪ್ರಚಾರ, ವೈಯಕ್ತಿಕ ಬೆದರಿಕೆಗಳ ತಂತ್ರಗಳನ್ನೂ 'ದೇಶಭಕ್ತ ಪ್ರಯೋಗಿಸಿದ್ದರು. ಹೀಗೆ ಒಂದು ಪ್ರಸಂಗದಲ್ಲಿ ಅವರಿಗೆ ಫೋನ್ ಮೂಲಕ ಜೀವ ಬೆದ ಒಡ್ಡಿದ್ದಾಗ ನಾನು 'ಸ್ವಲ್ಪ ಹುಷಾರಿರಿ' ಎಂದೆ. ಕೆದ್ಲಾಯ ತಮ್ಮ ಟ್ರೇಡ್‌ಮಾರ್ಕ್ ವಕ್ರಹಾಸ 'ಅಯ್ಯೋ ಮಾರಾಯ! ನಮಗೆಲ್ಲ ಬರಿ ಪ್ಯಾಂಪ್ಲೆಟ್ಟು. ನೀವು ಒಂದು ಐದು ಜನ ಇದ್ದ ನಿಮಗೆ ಕಲ್ಲೇಟ್ಟು' ಎಂದು ಬಾಯ್ಮುಚ್ಚಿಸಿದ್ದರು.

ಉಡುಪಿಯಂಥ ಊರುಗಳ ದುರಂತ ನೋಡಿ. 1990ರ ದಶಕದಿಂದ ಹಿಂದು ಬೆಳೆಯುತ್ತಿದೆ. 'ರಥಬೀದಿ ಗೆಳೆಯರು' ಸಂಘಟನೆಗೆ ಯುವ ತಲೆಮಾರು ಬರುತ್ತಿಲ್ಲ. ಹರಿದಾಸಭಟ್ಟ 'ಸ್ವತಂತ್ರ ಪರಮಾಣುದೇಹಿ' ತೊರೆಗಳನ್ನು ಒಗ್ಗೂಡಿಸಿ ಒಂದು ಸಮೃದ್ಧ ಹೊಳೆಹರಿಸಿದ್ದರು. ನಂತರ ತೊರೆಗಳು ಬತ್ತುತ್ತುವೆಯೇ ಏನು, ಹೊಸ ತೊರೆಗಳು ಸೇರುತ್ತಿಲ್ಲ, ಈ ಹೊಳೆಯ ಈಜಿಕೊಂಡಿದ್ದ ಬಂಡುಕೋರ ಮೀನುಗಳೇ ಎಚ್ಚರವಿರಿ- ಈಗ ಮತ್ತೊಂದು ತೊರೆ ಬತ್ತ

● ಕೆ.ಫಣಿರಾ

ಮಂಜುನಾಥ್ ಲತಾ

ಜನಗೂಡು ತಾಲೂಕಿನ ತಗಡೂರು ಮೂಲದ ಮಂಜುನಾಥ್ (1975) ವೃತ್ತಿಯಿಂದ ಪತ್ರಕರ್ತರು. ಹಲವಾರು ಪತ್ರಿಕೆಗಳಲ್ಲಿ ಪಾದಕರಾಗಿ ಕೆಲಸ ಮಾಡಿರುವ ಇವರು ಹೆಸರಾಗಿರುವುದು ರಾಗಿಯಲ್ಲ, ತಮ್ಮ ಅತ್ಯುತ್ತಮ ಸಣ್ಣಕತೆಗಳಿಂದ. 'ತೆಂಕಲಕೇರಿ' (2003) ಸನ್ ಆಫ್ ಸಿದ್ಧಪ್ಪಾಜಿ' (2008) ಅವರ ಕಥಾಸಂಕಲನಗಳು.

ತೆ ಮತ್ತು ಅನುಭವದ ದೃಷ್ಟಿಯಿಂದ ಮಂಜುನಾಥ್ ದೇವನೂರರ ಬವರು; ತಮ್ಮ ಕಥೆಗಳಿಗೆ ದೇವನೂರರು ಒಂದು ಪ್ರೇರಣೆಯೆಂದು ಹೇಳಿಕೊಂಡೂ ಇದ್ದಾರೆ. ಶಕ್ತ ಲೇಖಕರ ಸೀಮೆಯಿಂದ ಬರುವ ಮುಂದೆ ಯಾವಾಗಲೂ ಎರಡು ಇಕ್ಕಟ್ಟುಗಳು ನಿಲ್ಲುತ್ತವೆ. ಅವೆಂದರೆ ಅವರ ಗಾಢಪ್ರಭಾವಕ್ಕೆ ಬಿದ್ದು ನಕಲು ರಚನೆಗಳನ್ನು ಮಾಡುತ್ತ ವುದು; ಇಲ್ಲವೇ ಅವರ ಪ್ರಭಾವದ ಪ್ರಭಾವಳಿಯನ್ನು ಹರಿದು ಡು ತಮ್ಮದೇ ಚಹರೆಯನ್ನು ಕಂಡುಕೊಳ್ಳುವುದು. ಮೊದಲನೆಯದು ಣೆಯ ಸುಲಭದ ಹಾದಿ; ಎರಡನೆಯದು ಕೆಚ್ಚಿನ ಹಾದಿ. ಇಂತಹ ತೋರದ ಅನೇಕ ಲೇಖಕರು ಬೇಂದ್ರೆ, ಕುವೆಂಪು ಅವರ ನೆಳಲುಗಳನ್ನು ವುದುಂಟು. ಮೈಸೂರು ಸೀಮೆಯಲ್ಲೂ ದೇವನೂರರ ಅನೇಕ ಬರೆಹಗಳು ಹುಟ್ಟಿವೆ. ನಂಜನಗೂಡು ಭಾಗದ ದಲಿತರ ಆಡುಮಾತನ್ನು ದುದೇ ಸಾಧನೆಯೆಂಬ ತಪ್ಪು ತಿಳಿವಳಿಕೆಯಲ್ಲಿ ಸಿಲುಕಿ ಕಲಾತ್ಮಕ ಮಾಡಲಾಗದವರೂ ಇಲ್ಲಿದ್ದಾರೆ. ಆದರೆ ಈ ಭಾಗದಿಂದ ಬರೆಯುತ್ತಿರುವ ಹೊಸತಲೆಮಾರಿನ ಲೇಖಕರು ಇಂತಹ ಪ್ರಭಾವ ವಲಯದಾಚೆ ಸ್ವಂತದ್ದನ್ನು ಸಾಧಿಸಲು ಯತ್ನಿಸಿರುವರು. ಮಂಜುನಾಥ್ ಬರೆಹದಲ್ಲೂ ಬರ ಚಿಹ್ನೆಗಳು -ಅದರಲ್ಲೂ 'ಕುಸುಮಬಾಲೆ' ಪ್ರಭಾವಗಳು - .. ಆದರೆ ತಮ್ಮ ಕೆಲವು ಕತೆಗಳಲ್ಲಿ ದೇವನೂರರನ್ನು ದಾಟಿಯೂ ವಲ್ಲ ಪ್ರತಿಭೆಯನ್ನು ಪ್ರಕಟಿಸುತ್ತಿರುವ ಲೇಖಕರಲ್ಲಿ ಒಬ್ಬರಾಗಿರುವರು.



ಅಸಹಾಯಕತೆಗಳಲ್ಲಿ ತೊಳಲಾಡುತ್ತಲೇ ತಮ್ಮ ತುಂಬು ಚೈತನ್ಯವನ್ನು ಪ್ರಕಟಿಸುವ ಅನೇಕ ಧೀಮಂತ ಮಹಿಳೆಯರನ್ನು ಇಲ್ಲಿನ ಕತೆಗಳು ಕಟೆದಿವೆ.

▶▶ 2

ಂಜುನಾಥ್ ಈ ಹೊತ್ತಿನ ಒಳ್ಳೆಯ ಕಥೆಗಾರರು ಅನಿಸಲು ಕೆಲವು ಳಿವೆ. ಅವೆಂದರೆ-

ಷೆಯನ್ನು ಅವರು ಕೇವಲ ಮಾಧ್ಯಮವಾಗಿ ಬಳಸುತ್ತಿಲ್ಲ, ಅದನ್ನು ಯವಾಗಿಯೂ ರೂಪಕಾತ್ಮಕವಾಗಿಯೂ ಧ್ವನಿಪೂರ್ಣವಾಗಿಯೂ ಮೂಲಕ, ಅದರ ಸಾಧ್ಯತೆಗಳನ್ನು ವಿಸ್ತರಿಸುತ್ತಿರುವ ಬಗೆಯು ರ್ಷವಾಗಿದೆ.

ನ ಕತೆಗಳಲ್ಲಿ ಮನುಷ್ಯರನ್ನು ಕುರಿತ ಗ್ರಹಿಕೆಯು ಸರಳವಾಗಿಲ್ಲ, ನ್ನು ಅಸಗತ್ಯವಾಗಿ ದುರಳೀಕರಿಸುವ ಇಲ್ಲವೇ ವೈಭವೀಕರಿಸುವ ಅವಸರಕ್ಕೆ ಅವರನ್ನೂ ಮಾನವೀಯ ನೆಲೆಯಲ್ಲಿ ನೋಡುವ ಸಂಯಮವಿದೆ. ಕತೆಗಳನ್ನು ಆ ಕತೆಗಳೊಳಗಿನ ಮನುಷ್ಯರ ದೊಡ್ಡಸ್ತಿಕೆ, ನೀಚತನ ಎಲ್ಲವನ್ನೂ ಕಂಡು ಮೆಚ್ಚಿ ಬೆಚ್ಚಿ ನನ್ನೊಳಗಿನ ನಾ ಕಂಡ ಮನಷ್ಯರೊಳಗಿನ ಕತೆ ನೀಚತನಗಳೆಲ್ಲವನ್ನೂ ನಾನೂ ಯಾಕೆ ಕತೆಮಾಡಬಾರದೆಂಬ ಸ್ವಾರ್ಥವೇ ನನ್ನನ್ನು ಕತೆಗಾರನನ್ನಾಗಿ ಮಾಡಿವೆ" ಎಂದು ಅವರು ಹೇಳುತ್ತಾರೆ. ಬಹುಶಃ ಇದು ಕತೆಗಾರರು ಲಂಕೇಶ್ ಅವರಿಂದ ವ ಪಾಠ.

ತ ಲೇಖಕರ ಬರೆಹದಲ್ಲಿ ಸಹಜವಾಗಿಯೇ ತಮ್ಮನ್ನು ದಮನಿಸಿರುವ ಚಿತ್ರಗಳಿರುತ್ತವೆ. ಮಂಜುನಾಥ್ ವಿಶೇಷವೆಂದರೆ, ಹಾಗೆ ದಮನಿಸಿದವರು ೕರಿಬೇರೆ ಅಸಹಾಯಕತೆ ಮತ್ತು ತಲ್ಲಣಗಳಲ್ಲಿ ಬೇಯುತ್ತಿರುತ್ತಿರುವುದನ್ನು ವುದು. ಹಾಗೆ ನೋಡುವ ತಾಯ್ತನದ ತಾಳ್ಮೆ ಪ್ರಕಟಿಸುವುದು.

ನ ಕತೆಗಳಲ್ಲಿ ಧಗಧಗಿಸಿ ಉರಿಯುವ ಮಹಿಳೆಯರಿದ್ದಾರೆ. ಸಾಂಪ್ರದಾಯಕ ಮಾನ್ಯ ಮಾಡದ ಅವರ ಲೈಂಗಿಕ ಸಂಬಂಧಗಳ ಚಿತ್ರಗಳಿವೆ. ನನ್ನು ತಲ್ಲಣದೊಳಕ್ಕೆ ಅದ್ದುವ ಪ್ರಸಂಗಗಳಿವೆ. ('ಸಾವಿತ್ರಿ ಎಂಬ ಪ್ರಸಂಗ' ಕತೆಯ ದಾರುಣತೆಯು ಖಾಸನೀಸರ 'ತಬ್ಬಲಿಗಳು' ಕತೆಯಂತೆ ದೆ) ಆದರೆ ಇವು ಯಾವುವೂ ಸೆನ್ಸೇಶನ್ನಿನ ವಾಂಛೆಗೆ ಬಳಕೆಯಾಗಿಲ್ಲ. ಬಾಳಿನ ಅನೂಹ್ಯ ಪರಿಯನ್ನೂ ಇಕ್ಕಟ್ಟಿನಲ್ಲಿ ಮನುಷ್ಯರು ತೋರುವ ರ್ತನೆಯ ಸ್ವರೂಪವನ್ನೂ ಕಾಣಿಸುವುದಕ್ಕೆಂದು ಬರುತ್ತವೆ. ಬದುಕಿನ

ತಮ್ಮ ಬರೆಹಕ್ಕೆ ತಾವು ಬದುಕಿ ಬೆಳೆದ ಭೀಭತ್ಸ ಜೀವನಕ್ರಮವಿರುವ ಪ್ರದೇಶಗಳೇ ಪ್ರೇರಣೆಯೆಂದು ತಿಳಿದು, ಅವನ್ನು ರೋಮಾಂಚಕವಾಗಿ ವೈಭವೀಕರಿಸುವ ಪ್ರವೃತ್ತಿ ಕೆಲವು ಕನ್ನಡದ ಹಿರಿಯ ಲೇಖಕರಲ್ಲಿದೆ. ಇದಕ್ಕೆ ಹೋಲಿಸಿದರೆ, ನಮ್ಮ ಈ ಹೊಸ ಕತೆಗಾರರು ತಮ್ಮ ಕಥನಕ್ಕೆ ಕಾರಣವಾಗಿರುವ ಅನುಭವಲೋಕದ ವಿಷಯದಲ್ಲಿ ಹೆಚ್ಚು ವಿಮರ್ಶಾತ್ಮಕವಾಗಿದ್ದಾರೆ. ಅದರಲ್ಲೂ ಪ್ರಜ್ಞಾವಂತ ದಲಿತರ ಪಾತ್ರಗಳ ತಲ್ಲಣಗಳನ್ನು ಕಾಣಿಸುವಲ್ಲಿ ಮಂಜುನಾಥ್ ಕತೆಗಳು ತೋರುವ ಸೂಕ್ಷ್ಮತೆ ಅಪೂರ್ವವಾಗಿದೆ.

ಇಲ್ಲಿನ ಕತೆಗಳು ಅಕ್ಷರಸ್ಥ ದಲಿತರ ಭ್ರಷ್ಟತೆಯನ್ನು ಕೂಡ ನಿಷ್ಠುರವಾಗಿಯೂ ಆತ್ಮನಿರೀಕ್ಷಕವಾಗಿ ಚಿತ್ರಿಸುತ್ತವೆ. ಇದಕ್ಕೆ 'ಸನ್ ಆಫ್ ಸಿದ್ಧಪ್ಪಾಜಿ' ಕತೆ ಸಾಕ್ಷಿ.



ಸಿದ್ಧಪ್ಪಾಜಿ ವಿವೇಕ ಮತ್ತು ಮಾನವೀಯತೆಯ ತಲೆಮಾರಿನ ಸಂಕೇತವಾದರೆ, ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡಿರುವ ಅವನ ಮಗನಲ್ಲಿ ಅಪ್ಪನ ಸಮುದಾಯ ಪ್ರಜ್ಞೆಯಿಲ್ಲ. ಬದಲಿಗೆ ತನ್ನ ಸಮುದಾಯದ ಅಬಲರನ್ನೇ ಅವನು ತುಳಿಯಬಲ್ಲವನಾಗಿದ್ದಾನೆ. ಈ ತಲೆಮಾರಿನ ಆಲೋಚನ ಕ್ರಮದ ಅಂತರವನ್ನು ತೋರಿಸಲು ಕತೆ ಅವನನ್ನು 'ಸನ್' ಎಂದು ಕರೆಯುತ್ತಿದೆ.

ಅವರ ಕತೆಗಳಲ್ಲಿ ಒಂದು ಬಗೆಯ ದಾರ್ಶನಿಕತೆಯಿದೆ. ಅವರ ಕತೆಗಳ ಹಿಂದಿನ ಭಿತ್ತಿಯಾಗಿರುವ ಮಾನವೀಯತೆಯು ಈ ದಾರ್ಶನಿಕತೆಗೆ ಒಂದು ಆಳವನ್ನೂ ಕೊಟ್ಟಿದೆ.

▶▶ 3

ಮೊದಲ ಸಂಕಲನದಲ್ಲಿ (ಅಲ್ಲಿ ಅವರ ಹೆಸರು ಮಂಜುನಾಥ್ ಗೀತಾ ಎಂದಿದೆ) ಕತೆಕಟ್ಟುವ ಪ್ರಾಥಮಿಕ ಪಾಠಗಳನ್ನು ಕುದುರಿಸಿಕೊಂಡ ಮಂಜುನಾಥ್ ಎರಡನೇ ಸಂಕಲನದಲ್ಲಿ ಆಶ್ಚರ್ಯಕರವಾದ ಬೆಳವಣಿಗೆಯನ್ನೂ ಪ್ರಬುದ್ಧತೆಯನ್ನೂ ಪ್ರಕಟಿಸಿಬಿಟ್ಟರು. ಆದರೆ ತಮ್ಮ ಕತೆಗಳಲ್ಲಿ ಅವರು ತೋರಿರುವ ಕಲಾತ್ಮಕ ಶ್ರದ್ಧೆ ಮತ್ತು ಅನುಭವದ ಶೋಧದ ಪರಿಯನ್ನು ತಮ್ಮ ಕಿರುಕಾದಂಬರಿ ('ಪಲ್ಲಂಗ' 2008) ಹಾಗೂ ಕವನಗಳ 'ಸೋಜಿಗದ ಸೂಜಿಮಲ್ಲಿಗೆ' (2008) ವಿಷಯದಲ್ಲಿ ತೋರಿದ್ದಾರೆ ಅನಿಸುವುದಿಲ್ಲ. ಅವರ ಕಾದಂಬರಿ ಫ್ರೆಶ್ ಆಗಿದೆ. ಅಲ್ಲಿ ಪಾತ್ರಗಳು ಜೀವಂತವಾಗಿವೆ. ಅಲ್ಲಿ ಅಕ್ಷತಕದಾದ ಲವಲವಿಕೆಯ ಮಾತುಕತೆಗಳಿವೆ. ಆದರೆ ಕತೆ ಹೇಳುವಿಕೆಯ ಸಲೀಸುತನ ... ಸುವಲ್ಲಿ ಹೋರಾಟ ಇಲ್ಲದಿರುವಿಕೆಯೇ ಅದರ ಮಿತಿಯಾಗಿದೆ. ಸ್ಪರ್ಧೆಗಾಗಿ ಬರೆದ ಬರೆಹದ ಸಮಸ್ಯೆಯಿದು ಎನ್ನೋಣವೆಂದರೆ, ಅವರ ಒಳ್ಳೆಯ ಕತೆಗಳೂ ಸ್ಪರ್ಧೆಗೆಂದು ಬರೆದವೇ ಆಗಿವೆ. ಇನ್ನು ವಿಷಾದವನ್ನೇ ಉಕ್ಕಿಸುವ ಅವರ ಕವನಗಳು ಓದಿಸಿಕೊಳ್ಳುತ್ತವೆ. ಆದರೆ ಅವು ಕೊಂಚ ವಾಚಾಳಿಯಾಗಿದೆ. ಅಸ್ಪಷ್ಟತೆ ಮತ್ತು ಏಕತಾನತೆ ಅವುಗಳ ಸಮಸ್ಯೆಯಾಗಿದೆ. ಮನಸ್ಸಲ್ಲಿ ನಿಂತು ಅವು ಕಾಡುವುದಿಲ್ಲ. ಇದನ್ನೆಲ್ಲ ಕಂಡರೆ, ಮಂಜುನಾಥ್ ಅವರ ನಿಜಪ್ರಕಾರ ಸಣ್ಣಕತೆಯೆಂದೇ ತೋರುತ್ತದೆ. ಅವರ ಅತ್ಯುತ್ತಮ ಕವಿತೆಗಳು ಅವರ ಗದ್ಯದಲ್ಲೇ ಇವೆಯೆನ್ನಬಹುದು. 'ಒಳಗಲ ಜ್ಯೋತಿಯು' ಕತೆಯಲ್ಲಿ ದೀಪವು ಒಂದು ಪ್ರತಿಮೆಯಾಗಿ ಬೆಳೆದು ಇಡೀ ಕತೆಯನ್ನು ಆವರಿಸುವ ಪರಿಯನ್ನು ಗಮನಿಸಬೇಕು.

ಇಲ್ಲಿನ ಕತೆಗಳ ಯಶಸ್ಸಿಗೆ ಇಲ್ಲಿನ ಪ್ರಯೋಗಶೀಲತೆ, ಭಾವತೀವ್ರತೆ ಮತ್ತು ರೂಪಕಾತ್ಮಕತೆಗಳೂ ಕಾರಣ. ಆದರೆ ಇವೇ ಕೆಲವೊಮ್ಮೆ ಆಲಂಕಾರಿಕ ಭಾರಗಳಾಗಿ ಕಥೆಯು ಅಸ್ಪಷ್ಟತೆ ಪಡೆದುಕೊಳ್ಳುವುದುಂಟು. ಉದಾಹರಣೆಗೆ, "ಆ ಬಗೆ ಈ ಬಗೆಯಲ್ಲಿ ಆ ಅವ್ವ ಮಗಳಿಬ್ಬರ ಮುಂದೆ ಹೆಪ್ಪಾದ ನೆಪ್ಪುಗಳನ್ನು ಕತ್ತಲು ತಂದು ಕೆಡವುತ್ತಿದ್ದರೂ ಕೊನೆಗೆ ಅವರ ಕಣ್ಣುಗಳಿಗೆ ಬೊಗಸೆಯಲ್ಲಿ ಮೊಗೆಮೊಗೆದು ನಿದ್ದೆಯು ತಂದಿತು" ಎಂಬ ವಾಕ್ಯವನ್ನು ನೋಡಬಹುದು. ಇಲ್ಲಿನ ಮ್ಯಾಜಿಕಲ್ ರಿಯಾಲಿಸಂ ಪ್ರಯೋಗವು ಕೆಲವು ಕಡೆ ಮೆಲೊಡ್ರಾಮಾ ಆಗುವ ಅಂಚಿಗೆ ಹೋಗುವುದುಂಟು. ಇಲ್ಲಿನ ದಾರ್ಶನಿಕತೆ ಕೂಡ ಉದಾರವಾದಿಯೊಬ್ಬನ ಸಂತತನದಂತೆ ಕಾಣುತ್ತದೆ. ಈ ಸಂತತನವು ತೀಕ್ಷ್ಣವಾದ ರಾಜಕೀಯ ಸಾಮಾಜಿಕ ಸಂಘರ್ಷಗಳನ್ನು ಹಿಡಿಯಲು ಬೇಕಾದ ನಿಷ್ಠುರತೆಯನ್ನು ಕಳೆದುಬಿಡುವ ಸಾಧ್ಯತೆಯೂ ಇದೆ.

ಎರಡನೇ ಸಂಕಲನವು "ಆಸಕ್ತಿ ಅಸಹ್ಯ ಹುಟ್ಟಿಸುವ ನನ್ನ ಊರುಕೇರಿಗೆ" ಅರ್ಪಣೆಯಾಗಿದೆ. ಇಲ್ಲಿ ಪರಸ್ಪರ ವಿರುದ್ಧ ಭಾವಸೂಚಕ ಶಬ್ದಗಳು ಒಟ್ಟಿಗೆ ಇವೆ. ಮಂಜುನಾಥ್ ಮುನ್ನುಡಿಗಳಲ್ಲಿ ಹೀಗೆ ಪರಸ್ಪರ ವಿರುದ್ಧ ಅನುಭವಗಳು ಒಟ್ಟಿಗೆ ಇರುವಂತಹ ವಿನ್ಯಾಸದ ಮಾತುಗಳು ಅನೇಕ ಸಲ ಬರುತ್ತವೆ. ಇಂತಹ ವಾಕ್ಯರಚನೆಯ ಹಿಂದೆ, ಲೋಕವನ್ನು ನೋಡುವ ಒಂದು ಚಿಂತನಕ್ರಮವೂ ಇದ್ದಂತಿದೆ. ಅದು ಬಹುಶಃ ಮನುಷ್ಯರನ್ನು ಅಥವಾ ಬಾಳನ್ನು ಅದರೆಲ್ಲ ಕೇಡು ಚೆಲುವು ವಿಕ್ಷಿಪ್ತತೆಯ ಸಮೇತ ಗ್ರಹಿಸುವ ಸಂಕೀರ್ಣ ದೃಷ್ಟಿಕೋನ. ಯಾವುದನ್ನೂ ಏಕಪಕ್ಷೀಯವಾಗಿ ಸರಳೀಕರಿಸಲು ದುಡುಕದ ಈ ನಿಲುವು ಇಲ್ಲಿನ ಬರೆಹಕ್ಕೆ ಒಂದು ಬಗೆಯ ಸಮತೋಲನವನ್ನು ನೀಡಿದೆ.

ಮಂಜುನಾಥ್‌ಗೆ ತಮ್ಮ ಬರೆಹದ ಬಗ್ಗೆ ಗುಮಾನಿಯೂ ಸಂಕೋಚವೂ ಇದೆ. ತಮ್ಮ ಕಥೆಗಳು ನಿಜಜೀವನದಲ್ಲಿ ಎಬ್ಬಿಸಿದ ಕೆಲವು ಪ್ರತಿಕ್ರಿಯೆಗಳನ್ನು ಉಲ್ಲೇಖಿಸುವ ಮಂಜುನಾಥ್ 'ನಾನು ಬರೆದ ಕತೆಗಳು ಒಂದಷ್ಟು ಮಂದಿಯ ಅಸಮಾಧಾನಕ್ಕೆ ಅವರ ಮನಸ್ಸನ್ನು ನೋಯಿಸಿದ್ದಕ್ಕೆ ನನ್ನಲ್ಲಿ ಈಗಲೂ ವಿಷಾದವಿದೆ' ಎಂದು ಹೇಳುವುದುಂಟು. ಬರೆಹಕ್ಕಿಂತ ಬದುಕು ದೊಡ್ಡದು ಮನುಷ್ಯರ ನೋವುಗಳು ದೊಡ್ಡವು ಎಂದು ನಂಬಿದ್ದರಿಂದ ಇಂತಹ ವಿನಯ ಬಂದಿದೆ. ಈ ವಿನಯವು ಸಾಂಸ್ಕೃತಿಕವಾಗಿ ದೊಡ್ಡದಾಗಿದೆ.

ಮಾಸ್ತಿಯವರಿಂದ ಹಿಡಿದು ದೇವನೂರರತನಕ ಅನೇಕರಿಂದ ಕಲಿತಿರುವ, ಕಲಿತರೂ ಅದರ ಹಂಗಿನಲ್ಲಿ ಬೀಳದಂತೆ ತನ್ನತನ ಸಾಧಿಸಬಲ್ಲ ಕುಶಲತೆಯಿರುವ ಮಂಜುನಾಥ್ ಬರೆಹವು, ಪರಂಪರೆಯ ಜತೆ ಅನುಸಂಧಾನ ಮಾಡುವ ತನ್ಮಯತೆ ಮತ್ತು ಎಚ್ಚರ ಎರಡೂ ಗುಣಗಳನ್ನು ಹೊಂದಿದೆ. 'ಒಳಗಲ ಜ್ಯೋತಿಯು' 'ಹಸಿರು ಗಾಜಿನಬಳೆ' ಇವು ಕನ್ನಡದ ಶ್ರೇಷ್ಠ ಕತೆಗಳ ಸಾಲಲ್ಲಿ ನಿಲ್ಲಬಲ್ಲವು. ಇಂತಹ ಕತೆಗಳನ್ನು ಸೃಷ್ಟಿಸಿರುವ ಮಂಜುನಾಥರದು ನಿಸ್ಸಂಶಯವಾಗಿ ಹೊಸತಲೆಮಾರಿನ ಅತ್ಯುನ್ನತ ಪ್ರತಿಭೆಗಳಲ್ಲಿ ಒಂದು.

ಹೊಸ ತಲೆಮಾರಿನಲ್ಲಿ ಇಂತಹ ಅನೇಕರ ಅತ್ಯುತ್ತಮ ಕತೆಗಳನ್ನು ಓದುವಾಗ, ಮಾಸ್ತಿ ಚಿತ್ತಾಲರಂತಹ ಹಿರಿಯರ ಕತೆಗಳು ಸರಳ ಸಪ್ಪೆ ಅನಿಸತೊಡಗಿ, ಗಾಬರಿಯಾಗುತ್ತದೆ. ಕನ್ನಡದ ಕಥನ ಪರಂಪರೆಯನ್ನು ಕಟ್ಟಿರುವ ಈ ಹಿರಿಯರ ಬರೆಹಕ್ಕೆ ತನ್ನದೇ ಆದ ಚಾರಿತ್ರಿಕ ಮಹತ್ವವಿದೆ. ಅದನ್ನು ಮರೆಯುವಂತಿಲ್ಲ. ಆದರೆ ಈ ಹಿರಿಯ ಲೇಖಕರನ್ನು ಮಂಕುಗೊಳಿಸುವಂತೆ ಹೊಸತಲೆಮಾರಿನ ಕಥೆಗಾರಿಕೆಯು ಉಜ್ವಲವಾಗಿದೆ ಮತ್ತು ಅವರು ನಿರ್ಮಿಸಿದ ಪರಂಪರೆಯನ್ನು ಅರ್ಥಪೂರ್ಣವಾಗಿ ವಿಸ್ತರಿಸುತ್ತಿದೆ ಎಂಬುದು ಮಾತ್ರ ನಿರಾಕರಿಸಲಾಗದ ನಿಜವಾಗಿದೆ. ●

ಪ್ರಾಣ ಪಕ್ಷಿ

▶▶ ಒಂದು ಫೋಟೋ ಕವನ



ಕೊಂದರ ದಿಸ್ಗೆ ... ದಿತ್ತು ... ದಿತ್ತು ರೆಕ್ಕೆ

ಉರುಳಿದಳಾಕೆ ನೆಲಕ್ಕೆ
ಕೂಗಿದಳು ಇನಿಯನಿಗೆ

ಹಾರಿಬಂದ ಇನಿಯ ಆತಂಕದಿಂದ
ಏನಾಯಿತೆನ್ನುವುದರೊಳಗೆ
ಹೋಯಿತು ಆಕೆಯ ಪ್ರಾಣ

ನಂಬದಾದ ಗಂಡು
ಆಕೆಯನ್ನು ತಡವಿದ, ಕರೆದ,
ಜೋರಾಗಿ ಅತ್ತ

ಆದರೆ ಆಕೆ ಹೊರಟುಹೋಗಿದ್ದಳು
ಆತನ ರೋದನ ಕೇಳಿಸದ ಜಾಗಕ್ಕೆ

ಭಾರತದ ನ್ಯಾಯ ವ್ಯವಸ್ಥೆಗೆ ಜಂಗು ಹಿಡಿಸುತ್ತಿರುವ ಜನ

2002ರ ಫೆಬ್ರವರಿ 28ರಿಂದ ಶುರುವಾದ ಗುಜರಾತ್ ಹತ್ಯಾಕಾಂಡಕ್ಕೆ ಪ್ರತ್ಯಕ್ಷದರ್ಶಿಗಳಾಗಿದ್ದು, ಅದರ ಭಯಾನಕ ವಿವರಗಳನ್ನು ಭಾರತದ ನ್ಯಾಯವ್ಯವಸ್ಥೆಯ ಮುಂದೆಯೂ, ನಾಗರಿಕರ ಮುಂದೆಯೂ ಪ್ರಕಟಿಸಲು [illegible] ಆರ್.ಬಿ.ಶ್ರೀಕುಮಾರ್, ನಿವೃತ್ತಿಯ ನಂತರ ತಾವು ಕಲೆ ಹಾಕಿದ ವಸ್ತುನಿಷ್ಠ ಸಾಕ್ಷ್ಯಗಳನ್ನು ಶ್ರೀಕುಮಾರ್ ಕೇರಳದ ಪ್ರಖ್ಯಾತ ಪತ್ರಿಕೆ 'ಮಲಯಾಳಂ ಮನೋರಮ'ದಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. ನಂತರದಲ್ಲಿ ಆ ಬರಹಗಳು ಒಟ್ಟಾಗಿ ಪುಸ್ತಕವಾಗಿ ಪ್ರಕಟವಾಯಿತು. ಆ ಪುಸ್ತಕವನ್ನು ಖ್ಯಾತ ಬರಹಗಾರರಾದ ಸಾರಾ [illegible] ಕನ್ನಡಕ್ಕೆ ಅನುವಾದಿಸಿದ್ದಾರೆ. 'ಧರ್ಮದ [illegible]' ಎಂಬ ಈ [illegible] ಕೃತಿಯ [illegible] ಈಗಾಗಲೇ [illegible] ಕೃತಿಯ ಔಪಚಾರಿಕ ಬಿಡುಗಡೆ ಸಮಾರಂಭವನ್ನು, ಪುಸ್ತಕದ ಪ್ರಕಾಶಕರಾದ 'ಚಂದ್ರಗಿರಿ ಪ್ರಕಾಶನ'ದವರು ಆಗಸ್ಟ್ 13, 2009ರಂದು ಮಂಗಳೂರಿನ ಸೇಂಟ್ ಅಲೋಶಿಯಸ್ [illegible] ಏರ್ಪಡಿಸಿದ್ದರು. ಆ ಸಮಾರಂಭದಲ್ಲಿ [illegible] ಆಡಿದ ಮಾತುಗಳನ್ನು ಅವರ ಕುರಿತ ಟಿಪ್ಪಣಿಯೊಂದಿಗೆ ಕಳೆದ ವಾರದ ಸಂಚಿಕೆಯಲ್ಲಿ ನೀಡಿದ್ದೆ. ಇಲ್ಲಿ ಆರ್.ಬಿ.ಶ್ರೀಕುಮಾರ್ ಕುರಿತ ಒಂದು ಟಿಪ್ಪಣಿ ಹಾಗು ಅವರು ಅಂದಿನ ಸಭೆಯಲ್ಲಿ ಆಡಿದ ಮಾತುಗಳನ್ನು, ಅವರ ಕೆಲವು ಸಂದರ್ಶನಗಳಲ್ಲಿ ವ್ಯಕ್ತಪಡಿಸಿದ ಪೂರಕ ವಿಚಾರಗಳ ಜೊತೆ ನೀಡುತ್ತಿದ್ದೇನೆ.



ಶ್ರೀಕುಮಾರ್ ಎಂಬ ಸಂಸಾರಸ್ಥ

ಕೋಸ್ಟಾ ಗೆವ್ರಾಸ್ ಸರ್ವಾಧಿಕಾರಿ ಪ್ರಭುತ್ವಗಳ ಮಿಣ್ಣಗಿನ ಹಿಂಸಾ ಸಿದ್ಧಾಂತ ಹಾಗು ತಣ್ಣನೆಯ ರಾಜಕೀಯ ಅಮಾನುಷತೆಗಳ ಕುರಿತು ಪ್ರಜ್ಞೆಯನ್ನು ಬಡಿದೆಬ್ಬಿಸುವಂತಹ ಸಿನಿಮಾಗಳನ್ನು ಮಾಡುತ್ತಿರುವ ನಿರ್ದೇಶಕ; ಆತನ 'ಜೀ' ಬಹಳ ಖ್ಯಾತವಾದ ಚಿತ್ರ. 'ಆಮೇನ್' ಅಷ್ಟೇ ಗಾಢವಾದ ಪ್ರಭಾವ ಬೀರುವ ಮತ್ತೊಂದು ಚಿತ್ರ. ನಾಝಿ ಜರ್ಮನಿಯಲ್ಲಿ ಯಹೂದಿಯರ ಸಾಮೂಹಿಕ ಹತ್ಯೆಗೆ ನಡೆದ ತಯಾರಿ ಹಾಗು ಯೋಜಿತ ರೀತಿಯಲ್ಲಿ ಕಾರ್ಯಗತಗೊಳಿಸಿದ ವಿಧಾನಗಳನ್ನು ಜಗತ್ತಿಗೆ ಸಾಕ್ಷಿ ಸಹಿತ ಜಾಹೀರುಮಾಡಿ, ಆ ಹತ್ಯಾಕಾಂಡವನ್ನು ತಡೆಯಲು ಸೆಣಸಿದ ಲೆಫ್ಟಿನೆಂಟ್ ಕರ್ಟ್ ಗರ್ಸ್ಟೀನ್ ಬರೆದ 'ಗರ್ಸ್ಟೀನ್ ವರದಿ'ಯನ್ನು ಕಥಾವಸ್ತುವಾಗುಳ್ಳ ಚಿತ್ರ ಇದು.

ನಾಝಿ ಅಧಿಕಾರ ವ್ಯವಸ್ಥೆಯಲ್ಲಿ ಅತ್ಯಂತ ಪ್ರತಿಷ್ಠಿತ ಅಂಗವಾಗಿದ್ದ ಎಸ್.ಎಸ್.(ಸ್ಟುಟ್ಜ್‌ಸ್ಟಫೆಲ್- ರಕ್ಷಣಾ ಪಡೆ)ನಲ್ಲಿ ಆರೋಗ್ಯ ಹಾಗು ನೈರ್ಮಲೀಕರಣ ವಿಭಾಗದಲ್ಲಿ ಅಧಿಕಾರಿಯಾಗಿದ್ದ ಗರ್ಸ್ಟೀನ್, ಎಸ್.ಎಸ್.ನ 'ಸಂಹಾರ ವಿಭಾಗ'ವು ಗ್ಯಾಸ್‌ಚೆಂಬರ್‌ಗಳನ್ನು ರಚಿಸಿ, ಸಾಮೂಹಿಕವಾಗಿ ಹತ್ಯೆಮಾಡುವ ಕೆಲಸ ಶುರುಮಾಡಿರುವುದನ್ನು ಕಣ್ಣಾರೆ ಕಂಡು ಮೊದಲು ಸ್ವೀಡನಿನ ರಾಯಭಾರಿಗೂ, ಅದು ಫಲ ನೀಡದಿದ್ದಾಗ ವೆಟಿಕಾನಿನ ರೋಮನ್ ಕ್ಯಾಥೋಲಿಕ್ ಚರ್ಚಿಗೂ ಸಾಕ್ಷ್ಯಸಹಿತ ತಿಳಿಸಿ ಹತ್ಯಾಕಾಂಡವನ್ನು ನಿಲ್ಲಿಸಲು ಒದ್ದಾಡುತ್ತಾನೆ. ಇವನ ಜೊತೆ ಜರ್ಮನಿಯಲ್ಲಿ ವೆಟಿಕಾನ್ ಪ್ರತಿನಿಧಿಯಾಗಿದ್ದ ಯುವ ಪಾದ್ರಿ ರಿಕಾರ್ಡೋ ಕೈಜೋಡಿಸುತ್ತಾನೆ. ಇಬ್ಬರೂ ಈ ಹತ್ಯಾಕಾಂಡ ನೈಜವಾದ ಕ್ರಿಶ್ಚಿಯನ್ ಧಾರ್ಮಿಕತೆಗೆ ವಿರುದ್ಧವಾಗಿದ್ದು, ಈ ಧರ್ಮಬಾಹಿರ ಹಿಂಸೆಯನ್ನು ತಡೆಯುವುದೇ ನಿಜವಾದ ಧರ್ಮಶ್ರದ್ಧೆ ಎಂದು ನಂಬಿಕೊಂಡು ಈ ಕಾರ್ಯಕ್ಕೆ ಬದ್ಧರಾಗಿರುತ್ತಾರೆ. ಆದರೆ ವೆಟಿಕಾನದ ಪೋಪ್ ಕೂಡ ಇವರ ಮನವಿಗಳನ್ನು ಪುರಸ್ಕರಿಸಿ ಕಾರ್ಯಪ್ರವೃತ್ತರಾಗಲು ಹಿಂಜರಿದಾಗ ರಿಕಾರ್ಡೋ ಯಹೂದಿಯರ ಜೊತೆ ಕೂಡುದೊಡ್ಡಿ ಸೇರಿ, ಅವರ ಜೊತೆ ಹತ್ಯೆಯಾಗುತ್ತಾನೆ. ಗರ್ಸ್ಟೀನ್, ಯುದ್ಧ ಕೈದಿಯಾಗಿ ಸೆರೆಯಾಗಿ 'ಗರ್ಸ್ಟೀನ್ ವರದಿ' ನೀಡುತ್ತಾನೆ.

ಚಿತ್ರದಲ್ಲಿ ಪ್ರಾಸಂಗಿಕವಾದ ದೃಶ್ಯಗಳಲ್ಲಿ ಗರ್ಸ್ಟೀನನ ಮಗ ತನ್ನ ತಂದೆ ಎಸ್.ಎಸ್ ಅಧಿಕಾರಿ ಎಂಬ ಗತ್ತಿನಲ್ಲಿ, ಅವನು ಎದುರಾದ ತಕ್ಷಣ 'ಹೇಲ್ ಫ್ಯೂಹ್ರಾರ್' ಎಂದು ಹಿಟ್ಲರ್ ಸೆಲ್ಯೂಟ್ ಹೊಡೆಯುತ್ತಿರುತ್ತಾನೆ. ಅಗೆಲ್ಲ ಗರ್ಸ್ಟೀನ್ ಅದು ತನ್ನ ಮಗ ಕಲಿಯಬಾರದ ಅಸಭ್ಯ ನಡವಳಿಕೆ ಎಂದು ಗದರುತ್ತಿರುತ್ತಾನೆ. ಕೋಸ್ಟಾ ಗೆವ್ರಾಸನ ಗರ್ಸ್ಟೀನ್ ಸಂಸಾರಸ್ಥ; ತನ್ನ ವೃತ್ತಿಯಲ್ಲಿ ಶ್ರದ್ಧೆ ಇಟ್ಟವನು, ಕ್ರೌರ್ಯ ಅಧಾರ್ಮಿಕ ಎಂದು ಬಲವಾಗಿ ನಂಬಿದ ಧರ್ಮಶ್ರದ್ಧೆಯುಳ್ಳವನು; ಈ ಗುಣಗಳಿಂದ ಪ್ರೇರಿತನಾಗಿ ಆತ ನಾಝಿ ವ್ಯವಸ್ಥೆಯನ್ನು ಎದುರು ಹಾಕಿಕೊಳ್ಳುತ್ತಾನೆ. ಸನ್ಯಾಸಿ ರಿಕಾರ್ಡೋ ವೆಟಿಕಾನ್‌ನ ಕಟು ಸಾಂಪ್ರದಾಯಿಕ ವ್ಯವಸ್ಥೆಯೊಳಗಿರುವ ಗರ್ಸ್ಟೀನ್; ವ್ಯವಸ್ಥೆಗೆ ಧರ್ಮ ಅಧಿಕಾರ ಸಾಧನವಾಗಿ, ಧರ್ಮ ಕಾರುಣ್ಯ ಡಂಭಾಚಾರವಾಗಿದೆ ಅನಿಸಿದ ಗಳಿಗೆ ಆತ ತನ್ನ ಧರ್ಮಕ್ಕೆ ಅಪವಿತ್ರವಾದ ಯಹೂದಿಯರ ನಕ್ಷತ್ರ ಚಿಹ್ನೆ ಧರಿಸಿ, 'ದೇವರು ತನ್ನ ಮಕ್ಕಳಿಗೇ ಅನ್ಯಾಯ ಮಾಡುತ್ತಾನಲ್ಲ! ಇದು ಯಾಕೆ ಎಂದು ನಾನು ಹುಡುಕಬೇಕು', ಅದಕ್ಕೋಸ್ಕರ ಹಿಂಸೆ ಎದುರು ಎದೆಸೆಟೆದು ನಿಂತು ಆಹುತಿಯಾಗಬೇಕು ಎಂದು ನಂಬಿದ ಧೀಮಂತ. ಗುಜರಾತಿನ ಮಾಜಿ ಡಿ.ಜಿ.ಪಿ. ಆರ್.ಬಿ.ಶ್ರೀಕುಮಾರ್, ಗುಜರಾತ್ ಹಿಂಸಾಕಾಂಡಕ್ಕೆ ಸಾಕ್ಷಿಯಾಗಿ, ಮೋದಿ

▶▶▶

ವಿಶೇಷ ಲೇಖನ

● ಕೆ.ಫಣಿರಾಜ್

- ಕಾನೂನಿಗೆ ಬದ್ಧವಾಗಿರುವ ಪೊಲೀಸ್ ವ್ಯವಸ್ಥೆ ಇದ್ದಲ್ಲಿ ಎಂಥ ಗಲಭೆಯನ್ನಾದರೂ 2 ತಾಸುಗಳಲ್ಲಿ ತಣ್ಣಗಾಗಿಸಬಹುದು. ಗಲಭೆ ಎರಡು ತಾಸು ಮೀರಿದರೆ ಪೋಲಿಸರು ಕಾನೂನುಬಾಹಿರ ಹಿತಾಸಕ್ತಿಗಳಿಗೆ ಬಗ್ಗಿದ್ದಾರೆ ಎಂದೇ ಅರ್ಥ.
- ಭಾರತದಲ್ಲಿ ಹಿಂದೂಗಳು ಮುಸಲ್ಮಾನರು ಶತಮಾನಗಳ ಕಾಲ ಸಹಬಾಳ್ವೆ ನಡೆಸಿದ್ದಾರೆ. ಸಮುದಾಯಗಳ ನಡುವಿನ ಬಹುತೇಕ ವಿವಾದಗಳನ್ನು ಸ್ಥಳೀಯ ಮಟ್ಟದಲ್ಲಿ ಮಾತುಕತೆಗಳ ಮೂಲಕ ಬಗೆಹರಿಸಬಹುದು. ಅಯೋಧ್ಯಾ ವಿವಾದವನ್ನು ಊರಿನವರು ಹಾಗು ಜಿಲ್ಲಾಡಳಿತಕ್ಕೆ ಬಿಟ್ಟಿದ್ದರೆ, ಖಂಡಿತಕ್ಕೂ ಅದನ್ನವರು ಬಗೆಹರಿಸಿಕೊಳ್ಳುತ್ತಿದ್ದರು- ಯಾಕೆಂದರೆ ಈ ವಿವಾದದ ಜೊತೆ ಅವರು ನಾಲ್ಕು ನೂರು ವರ್ಷ ಬಾಳಿ ಬದುಕಿದ್ದಾರೆ. 1992ರವರೆಗೂ ಭಾರತದಲ್ಲಿ ರಾಮನನ್ನು ಪೂಜಿಸುವ ಹಿಂದೂಗಳೇ ಇರಲಿಲ್ಲವೇ? ತಮ್ಮ ಧರ್ಮಶ್ರದ್ಧೆಯನ್ನೂ, ರಾಮಭಕ್ತಿಯನ್ನೂ ಹಿಂದೂಗಳು ಅಯೋಧ್ಯಾ ವಿವಾದದಿಂದ ಕಲಿಯಬೇಕಿತ್ತೇ? ಇಂತಹ ಯಾವುದೇ ವಿವಾದಗಳನ್ನು ಬಗೆಹರಿಯದಂತೆ

ನಮ್ಮ ಬದ್ಧತೆ ಸಂವಿಧಾನಕ್ಕೇ ಹೊರತು ಆಳುವ ಪಕ್ಷಕ್ಕಲ್ಲ

(ಕೋಮುಹಿಂಸೆಯ ಕುರಿತು ಶ್ರೀಕುಮಾರ್ ವ್ಯಾಖ್ಯಾನ)

ನೋಡಿಕೊಳ್ಳುವ, ಅದರ ಬೆಂಕಿಯಲ್ಲಿ ತಮ್ಮ ಅಧಿಕಾರ ರಾಜಕೀಯದ ಬೇಳೆ ಬೇಯಿಸಿಕೊಳ್ಳುವ ಸಿದ್ಧಾಂತದಿಂದ ಮಾತ್ರವೇ ಈ ಅನಾಹುತಗಳಾಗುತ್ತಿವೆ.

- ಕಾನೂನುಪಾಲಕರ ಬದ್ಧತೆ ಇರಬೇಕಾದ್ದು ದೇಶದ ಸಂವಿಧಾನಕ್ಕೆ, ಹೊರತು ಆಡಳಿತ ಪಕ್ಷ ಅಥವ ಅಧಿಕಾರಾರೂಢ ಸರಕಾರಕ್ಕಲ್ಲ. ಕಾನೂನುಪಾಲಕರ ಸೇವಾ ನಿಯಮಗಳು ಸ್ಪಷ್ಟವಾಗಿ ಡಿ.ಜಿ.ಪಿ.ಯಿಂದ ಹಿಡಿದು ಸಾಮಾನ್ಯ ಪೇದೆವರೆಗೆ ಪ್ರತಿಯೊಬ್ಬರ ಕರ್ತವ್ಯಗಳನ್ನು ಪಟ್ಟಮಾಡಿರುತ್ತವೆ. ನಾನು ಸೇವೆ ಸಲ್ಲಿಸಿದ ಗುಜರಾತ್ ರಾಜ್ಯದಲ್ಲಿ ಅಧಿಕೃತ ಸೇವಾನಿಯಮಗಳ ದಾಖಲೆಯಾದ 'ಗುಜರಾತ್ ಪೊಲೀಸ್ ಮ್ಯಾನ್ಯುಯಲ್' ಇದೆ. ಎಲ್ಲ ಹಂತದ ಕಾನೂನುಪಾಲಕರು ಆ ಮ್ಯಾನ್ಯುಯಲ್ ಪ್ರಕಾರ ಕೆಲಸ ಮಾಡಿದ್ದರೆ, ಗುಜರಾತಿನಲ್ಲಿ ಅಂತಹ ಹಿಂಸೆ ನಡೆಯುತ್ತಿರಲಿಲ್ಲ. ನಮ್ಮ ನಿಷ್ಠೆ ಸಂವಿಧಾನಬದ್ಧವಾದ ಅಂತಹ ನಿಯಮಾವಳಿಗಳಿಗೆ ಮಾತ್ರವೆಂದು ನಾವು ಕಾನೂನುಬಾಹಿರ ಆಜ್ಞೆಗಳನ್ನು ನೀಡುವ ರಾಜಕಾರಣಿಗಳ ಮುಖಕ್ಕೆ ಹೇಳಬಹುದು. ಹೌದು ಇದರಿಂದ ಆಳುವ ಮಂದಿಯ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ; ಆದರೆ ಅವರೇನು ನಮ್ಮನ್ನು ಆಫ್ರಿಕಾದ ದಟ್ಟಾರಣ್ಯಗಳಿಗೆ ಗಡಿಪಾರು ಮಾಡುವ ಹಾಗಿಲ್ಲ; ರಾಜ್ಯದ ಒಂದು ಮೂಲೆಗೆ ಎತ್ತಂಗಡಿ ಮಾಡಬಹುದು; ಅದೇನೂ ದೊಡ್ಡ ಶಿಕ್ಷೆಯಲ್ಲ; ಆದರೆ ಇಂತಹ ಕಿರುಕುಳಕ್ಕೆ ಬೆದರಿ ಸಂವಿಧಾನಕ್ಕೆ ಎರಡು ಬಗೆಯುವುದು ದೊಡ್ಡ ಅಪರಾಧ.
- 1980ರ ದಶಕದವರೆಗೂ ಆಳುವ ರಾಜಕಾರಣಿಗಳು ಕಾನೂನು ವ್ಯವಸ್ಥೆಯತ್ತ ತೀರ ಮೂಗು ತೂರಿಸುತ್ತಿರಲಿಲ್ಲ. ಮುಖ್ಯಮಂತ್ರಿಗಳೂ ಕೂಡ 'ನೋಡಿ ಇದು ನನ್ನ ಅಭಿಪ್ರಾಯ' ಎಂದು ಹೇಳುತ್ತಿದ್ದರು ಮತ್ತು ಅದು ಸಂವಿಧಾನಬದ್ಧವಾದ ನಿಲುವಲ್ಲ ಎಂದು ಹಿರಿಯ ಅಧಿಕಾರಿಗಳಿಗೆ ಕಂಡರೆ ಅದನ್ನು ಮುಖ್ಯಮಂತ್ರಿಗಳಿಗೆ ನೇರವಾಗಿ ಹೇಳಿಬಿಡುತ್ತಿದ್ದೆವು. ಅಲ್ಲಿಗೆ ಅದು ಮುಗಿಯುತ್ತಿತ್ತು. ಆದರೆ, 1980ರ ದಶಕದಿಂದ ರಾಜಕಾರಣಿಗಳ ಹಸ್ತಕ್ಷೇಪವು ಅತಿಯಾಗಿದೆ, ಅಧಿಕಾರಿಗಳ ಕರ್ತವ್ಯ ಸಂಕಲ್ಪವೂ ಕುಂದಿದೆ. ಈಗ ಏನಾಗುತ್ತಿದೆ ಎಂದರೆ, ಮಂತ್ರಿಗಳು ಏನೂ ಅಪ್ಪಣೆ ಕೊಡದಿದ್ದರೂ ಅಧಿಕಾರಿಗಳು ಮಂತ್ರಿಗಳ ರಾಜಕೀಯ ನಿಲುವೇನು? ಅದರ ಪ್ರಕಾರ ಯಾವ ರೀತಿ ನಿರ್ದೇಶನಗಳನ್ನು ನೀಡಬಹುದು? ಎಂದೆಲ್ಲ ತಾವೇ ಲೆಕ್ಕಾಚಾರ ಹಾಕಿ ಮಂತ್ರಿಗಳಿಗೆ ಅಪ್ರಿಯವಾಗದಂತಹ ನಿರ್ದೇಶನಗಳನ್ನು ತಮ್ಮ ಕೆಳಗಿನವರಿಗೆ ನೀಡುತ್ತಾರೆ. ಇದನ್ನು 'ಯಾಂಟಿಸಿಪೇಟರಿ ಯಾನ್‌ಕ್ಸೈಟಿ'- ನಿಲ್ಲು ಎಂದರೆ ಬಗ್ಗುವ ಅತಿ ವಿಧೇಯತೆ ಎಂದು ಕರೆಯಬಹುದು. ಇದರಿಂದಾಗಿ ಅನ್ಯಾಯಕೊಳ್ಳಗಾಗುತ್ತಿರುವವರು ಅಧಿಕಾರಹೀನ ಜನ: ಬಡವರು, ಹೆಂಗಸರು, ಅಲ್ಪಸಂಖ್ಯಾತರು; ಯಾವ ಅಧಿಕಾರದ ಆಸರೆಯೂ ಇಲ್ಲದ ಈ ಜನರ ಹಕ್ಕನ್ನು ಎತ್ತಿಹಿಡಿಯಬೇಕಾದ್ದು ಕಾನೂನುವ್ಯವಸ್ಥೆಯ ಕೆಲಸ; ಆದರೆ ಅಧಿಕಾರಿಗಳ ಸಂಕಲ್ಪಹೀನತೆಯ ಫಲವಾಗಿ ಅಧಿಕಾರಹೀನರ ಮೇಲಿನ ದೌರ್ಜನ್ಯಗಳು ಹೆಚ್ಚಾಗುತ್ತಿವೆ.
- ಗೋಧ್ರಾ ಘಟನೆಯ ಸಂಪೂರ್ಣ ಲಾಭಪಡೆಯುವ ಸಲುವಾಗಿ ನರೇಂದ್ರಮೋದಿ, ಘಟನೆಯಲ್ಲಿ ಮೃತರಾದವರ ಶವಗಳ ಜೊತೆ ಸುಟ್ಟ ರೈಲು ದಬ್ಬಿಯನ್ನೂ ಅಹ್ಮದಾಬಾದಿಗೆ ತಂದು ಪ್ರದರ್ಶಿಸಬೇಕೆಂದು ಅಪ್ಪಣೆ ನೀಡಿದ್ದರು. ಆದರೆ, ಗೋಧ್ರಾದ ಜಿಲ್ಲಾಧಿಕಾರಿ ಜಯಂತಿ ರವಿ ಇದು ಸಾಧ್ಯವಿಲ್ಲ ಎಂದು ನಿಷ್ಠೂರವಾಗಿ ಮೋದಿಗೆ ಹೇಳಿದರು. ಜಗತ್ತಿನ ಎರಡನೇ ಪುರಾತನ ಕಸುಬು 'ಗೂಢಚರ್ಯೆ'! ಇದಿಲ್ಲದೇ ಯಾವ ಪ್ರಭುತ್ವವೂ ನಡೆಯುವುದಿಲ್ಲ. ನಾನು ಗುಜರಾತ್ ರಾಜ್ಯದ ಗುಪ್ತಚರ ವಿಭಾಗದ ಮುಖ್ಯಸ್ಥನಾಗಿದ್ದೆ. ಸಾಮಾಜಿಕ-ರಾಜಕೀಯ ವಿದ್ಯಮಾನಗಳನ್ನು ಗುಮ್ಮಗೆ ಗಮನಿಸಿ ಅವುಗಳಿಂದ ಆಗುವ ಪರಿಣಾಮಗಳೇನು ಎಂದು ಸಾಧ್ಯವಿದ್ದಮಟ್ಟಿಗೆ ಊಹಿಸಿ ಅತ್ಯುನ್ನತ ಕಾನೂನುಪಾಲಕ ಅಧಿಕಾರಿಗೆ ಮಾಹಿತಿ ನೀಡುವುದು ನಮ್ಮ ಕೆಲಸ. ಇದು 'ಸಿ.ಬಿ.ಐ.' ಅಥವ 'ಆರ್.ಎ.ಡಬ್ಲ್ಯು.(ರಾ)'ನಂಥ ಗೂಢಚರ ಸಂಸ್ಥೆಗಳಿಗಿಂತ ಬೇರೆ ಕೆಲಸ. ಆದರೆ, ಗುಜರಾತ್ ಸರಕಾರದ ದೊರೆಗಳ ಒತ್ತಾಯದ ಮೇರೆಗೆ, ಕೆಲವು ಮುಸ್ಲಿಮ್ ಗಣ್ಯರ ಹೆಸರುಗಳನ್ನು ಸೂಚಿಸಿ

▶▶▶

ನ್ನು ಎದುರು ಹಾಕಿಕೊಂಡು ಸತ್ಯನಿವೇದನೆಗೆ ಮುಂದಾದ ಬಗೆಯನ್ನು ಗಸ್ಟ್ 13, 2009ರಂದು ಮಂಗಳೂರಿನಲ್ಲಿ ಅವರಾಡಿದ ಮಾತುಗಳನ್ನು ಗ, ಗೌತಮ ಗರ್ರ್ನೀನ್ ಮತ್ತು ರಿಕಾರ್ಡೋ ಒಟ್ಟಾಗಿ ಅವರಲ್ಲಿ ವಿವಂತ ಕಂಡಿತು.

ಕಾರಣದು ನಮ್ಮಲ್ಲಿ ಮೂಡಿಸುವ ಅಹಕಲ್ಪನೆಗಳು ನಮ್ಮ ಚಿತ್ತದಲ್ಲಿ ತ್ತಿಬಿಟ್ಟಿರುತ್ತವೆ ನೋಡಿ: ಮಿಲಿಟರಿ ಯೂನಿಫಾರ್ಮ್ ಸಮೇತವಾದ ಸೆಯ ಭಗತ್‌ಸಿಂಗನ ಪೋಸ್ಟರ್ ಮುಖವನ್ನು ಕಂಡುಕಂಡು ನಮಗೆ ಮ್ಮ ಹಾಗೆ ಇರುವ ಸಾಮಾನ್ಯಜೀವಿಯಲ್ಲ ಅನ್ನಿಸಿಬಿಡುತ್ತದೆ. ಒಬ್ಬ ಆತ ಪಟ್ಟ ಧರಿಸುತ್ತಿದ್ದ; ಪಟ್ಟ ತೆಗೆದು, ತನ್ನ ಉದ್ದವಾದ ಕೂದಲನ್ನು ಂಡು. ಪೈಜಾಮ ಮತ್ತು ಬನಿಯಾನಿನಲ್ಲಿ ಚಾರ್ಪಾಯಿ ಮೇಲೆ ಗಿ ಕಾಲುಚಾಚಿ ಕೂತ ಫೋಟೋ ನೋಡಿದರೆ, ಆತ ಮನುಷ್ಯನಾಗಿ, ಮೂ ತೋರಬಹುದಾದ ಪ್ರತಿರೋಧಕ್ಕೆ ಸಾಕ್ಷಿಯಾಗಿ ಕಂಡುಬಿಡುತ್ತಾನೆ. ಶ್ರೀಕುಮಾರ್ ಗುಜರಾತಿನ ಸರಕಾರವನ್ನು ಎದುರು ಹಾಕಿಕೊಂಡು ರುವ ಕೆಲಸಗಳ ವಿವರಗಳನ್ನು ಪತ್ರಿಕೆಗಳಲ್ಲಿ ಓದಿದ್ದ ನಾನು, ಅವರನ್ನು ನಿಲುವಿನ, ಕಟ್ಟುಮಸ್ತು ದೇಹದ, ಸ್ಪಷ್ಟವಾದ ಧ್ವನಿಯ ಪೊಲೀಸ್ ಯಾಗಿ ಚಿತ್ರಿಸಿಕೊಂಡಿದ್ದೆ. ಐದೂವರೆ ಅಡಿ ಎತ್ತರದ, ಸಪೂರ ಶರೀರದ, ಡಿ ಇಂಗ್ಲಿಷಿನಲ್ಲಿ ಅವಸರವಸರವಾಗಿ ಹಾಸ್ಯಮಿಶ್ರಿತ ಮಾತನಾಡುವ, ವ ಚಟಾಕಿ ಹಾರಿಸಿ ತಾನೇ ಗಟ್ಟಿಯಾಗಿ ನಗುವ ವ್ಯಕ್ತಿಯನ್ನು ನನ್ನ ಪೆದ್ದುತನಕ್ಕೆ ಪೆಚ್ಚಾದೆ.

ಶೈಲಿಯಲ್ಲಿ ಹೊಲಿಸಿದ ಪ್ಯಾಂಟಿನಲ್ಲಿ ಸಾಧಾರಣ ಬಟ್ಟೆಯ ಬಿಗಿಯಾದ ರ್ಟನ್ನು ಇನ್‌ಶರ್ಟ್ ಮಾಡಿಕೊಂಡಿರುವ ಕಪ್ಪು ಬಣ್ಣದ ಜನವನ್ನು ನ ಹೆಡ್‌ಮಾಸ್ತರ್ ಅಥವ ಸರಕಾರಿ ದಫ್ತರಿನ ಕೆಳಹಂತದ ಆಫೀಸರ್ ಜಿ ಕಟ್ಟಿ ಹೇಳಬಹುದಾದಷ್ಟು ನಿತ್ಯಚಹರೆಯ ವ್ಯಕ್ತಿ ಶ್ರೀಕುಮಾರ್. ಲಂಅನ್ನು ಅವರು 'ನಿಲ್ರಯ್ಯ! ಕಂಡೀದೀನಿ...' ಎಂದು ಏರಿದ ಸ್ಥನ ಧ್ವನಿಯಲ್ಲಿ ತೆಡೆದಿರಬಹುದು ಎಂದು ಚಿತ್ರಿಸಿಕೊಂಡರೆ ನಾಗುತ್ತದೆ; ಮತ್ತು ನಾಳೆ ನಮ್ಮ ಬೀದಿಯ ಚೆಡ್ಡಿ ಚಾಟಗಳಿಗೂ, ಗೂ 'ನಾನೀದನ್ನು ಸಹಿಸೋದಿಲ್ಲ...' ಎಂದು ತರಕಾರಿ ಅಂಗಡಿಯಲ್ಲಿ ಹೇಳಿಬಿಡಬಹುದು ಎಂಬ ವಿಶ್ವಾಸವನ್ನು ಶ್ರೀಕುಮಾರ್ ಬಿಡುತ್ತಾರೆ. ಹೀಗೆ ಅವರ ಬಗ್ಗೆ ಹಿಂದೆ ಓದಿದ್ದು, ಅಂದು ಅವರ ಕೇಳುವಾಗ ಹೊಸ ವ್ಯಾಖ್ಯಾನದಲ್ಲಿ ಮನವರಿಕೆಯಾಗತೊಡಗಿತು. 71ರ ಗುಜರಾತ್ ಕೇಡರಿನ ಐ.ಪಿ.ಎಸ್. ಅಧಿಕಾರಿಯಾಗಿ ವೃತ್ತಿ ಸದ ಶ್ರೀಕುಮಾರ್, ಗುಜರಾತಿನ ಅನೇಕ ಜಿಲ್ಲೆಗಳಲ್ಲಿ ಎಸ್.ಪಿ.ಯಾಗಿದ್ದು, ತ್ ಹಿಂಸಾಚಾರದ ಹೊತ್ತಿಗೆ, ಅಡಿಶನಲ್ ಡಿ.ಜಿ.ಪಿ. ಹುದ್ದೆಯಲ್ಲಿದ್ದು ಗುಪ್ತಚರ ವಿಭಾಗದ ಮುಖ್ಯಸ್ಥರಾಗಿದ್ದರು. ಗಲಭೆಗೆ ತಯಾರಿ, ಹಿಂಸಾಚಾರದಕ್ಕೆ ಭಾಗಿಯಾದ ಪಾತಕಿಗಳ ವಿವರ ಇವುಗಳನ್ನು ಕಲೆಹಾಕುವುದು ಅವರ ಕೆಲಸವಾದ್ದರಿಂದ, ಹಿಂಸಾಚಾರಕ್ಕೆ ಸಾಕ್ಷಿಯಾಗಿ ಅವರು ಅಧಿಕೃತವಾಗಿ ವಿವರವಾದ ದಿನಚರಿಯನ್ನು ಬರೆದಿಟ್ಟರು. ಆ ದಿನಚರಿಯ ಪುಟಗಳು, ಹಿಂಸಾಚಾರಕ್ಕೆ ಆಳುವ ಪಕ್ಷದ ಮಂದಿ, ಸರಕಾರದ ಮಂತ್ರಿಗಳು, ಪೊಲೀಸು ಮತ್ತು ಆಡಳಿತ ವ್ಯವಸ್ಥೆ ಹೇಗೆ ಬೆಂಬಲವಾಗಿತ್ತು ಎಂಬ ವಿವರಗಳಿಂದ ಕೂಡಿದ್ದವು. ಈ ಮಾಹಿತಿಯ ಆಧಾರದಲ್ಲಿ ಅವರು ವರದಿಯನ್ನು ತಯಾರಿಸಿ ಏಪ್ರಿಲ್ 24,2002ರಂದು ರಾಜ್ಯ ಸರಕಾರಕ್ಕೆ ನೀಡಿದರು. ಸರಕಾರ ಅದನ್ನು ಮೂಲೆಗೆಸೆಯುತ್ತದೆ ಎನ್ನುವುದು ಶ್ರೀಕುಮಾರರಿಗೆ ಅಂದಾಜಿತ್ತು-ಅದು ಹಾಗೇ ಆಯಿತು. ಆದರೆ ಅವರು ಕೈಕಟ್ಟಿ ಕೂಡದೆ ಜೂನ್ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಮತ್ತೊಂದು ಕಂತಿನ ವರದಿಯನ್ನು ಒಪ್ಪಿಸಿದರು. ಹಿಂಸಾಚಾರದ ಬೆಂಕಿಯ ಪೂರ ಲಾಭ ಪಡೆಯುವ ಉದ್ದೇಶವಿದ್ದ ಮೋದಿ, ಜುಲೈ-ಆಗಸ್ಟ್ ತಿಂಗಳಲ್ಲಿ ವಿಧಾನಸಭೆ ಚುನಾವಣೆಗೆ ಒತ್ತಾಯಿಸಿದ. ಆಗ ಭಾರತದ ಮುಖ್ಯ ಚುನಾವಣಾ ಕಮೀಷನರ್ ಆಗಿದ್ದ ಜೆ.ಎಂ.ಲಿಂಗ್ಡೋ, ಕಾನೂನು ವ್ಯವಸ್ಥೆ ಕುರಿತಂತೆ ಪರಿಶೀಲನೆ ನಡೆಸಿದಾಗ, ಬೇರೆಲ್ಲ ಅಧಿಕಾರಿಗಳು ಮೋದಿ ಆಡಿಸುವ ಕೋಲೆ ಬಸವಗಳಾದರೆ ಶ್ರೀಕುಮಾರ್ ಮಾತ್ರ ಹದಗೆಟ್ಟ ಪರಿಸ್ಥಿತಿಯ ಬಗ್ಗೆ ನಿಷ್ಠುರವಾದ ವಿವರಗಳನ್ನು ನೀಡಿದರು. ಇದರ ಫಲವಾಗಿ ಲಿಂಗ್ಡೋ ಶಾಂತಿ-ಸುವ್ಯವಸ್ಥೆ ಸ್ಥಾಪಿತವಾಗದ ಹೊರತು ಚುನಾವಣೆ ನಡೆಸುವುದಿಲ್ಲ ಎಂದು ಘೋಷಿಸಿದರು.

ಶ್ರೀಕುಮಾರ್ ತನಗೆ ಮಗ್ಗುಲ ಮುಳ್ಳು ಎಂಬುದು ಮೋದಿಗೆ ಗೊತ್ತಾಗುತ್ತ ಹೋಯಿತು. ಗೋದ್ರಾ ಘಟನೆ ಹಾಗು ನಂತರ ನಡೆದ ಹಿಂಸಾಚಾರಗಳ ತನಿಖೆ ನಡೆಸಲು ರಚಿಸಲಾದ ಷಾ-ನಾನಾವತಿ ಕಮಿಷನಿಗೆ ಶ್ರೀಕುಮಾರ್ ಸಾಕ್ಷಿಯಾಗಿ ಪ್ರಮಾಣಬದ್ಧ ಅಫಾದವಿತ್ತು ಸಲ್ಲಿಸಿ, ಆಯೋಗದ ಎದುರು ಸರಕಾರ ಅಕೃತ್ಯಗಳ ಬಗ್ಗೆ ಸಾಕ್ಷಿ ಹೇಳಿದರು. ಈ ಹೊತ್ತಿಗೆ ಮೋದಿ ಸರಕಾರ ಶ್ರೀಕುಮಾರರ ವಿರುದ್ಧ ಸಾಮ-ಭೇದ ತಂತ್ರಗಳನ್ನು ಪ್ರಯತ್ನಿಸಿಯಾಗಿತ್ತು, ಶ್ರೀಕುಮಾರ್ ಜಗ್ಗಲಿಲ್ಲ. ಅಷ್ಟು ಹೊತ್ತಿಗೆ ಆಗಿದ್ದ ಗುಜರಾತಿನ ಡಿ.ಜಿ.ಪಿ. ಹುದ್ದೆ ಖಾಲಿಯಾಗಿತ್ತು. ಸೇವಾಹಿರಿತನ ಹಾಗೂ ಅರ್ಹತೆ (ಆ ಹೊತ್ತಿಗೆ ಅವರು ರಾಷ್ಟ್ರಪತಿಗಳಿಂದ ಮೂರು ಸಾರಿ ಪ್ರಶಸ್ತಿ ಪಡೆದಿದ್ದರು)ಗಳೆರಡೂ ಇದ್ದ ಶ್ರೀಕುಮಾರ್ ಆ ಹುದ್ದೆಗೆ ಸಹಜ ಆಯ್ಕೆಯಾಗಿದ್ದರು. ಆದರೆ ಮೋದಿ ಸರಕಾರ, 1987ರಲ್ಲಿ ಶ್ರೀಕುಮಾರ್ ಖಚ್ ಜಿಲ್ಲೆಯ ಎಸ್.ಪಿ.ಯಾಗಿದ್ದಾಗ ಅವರ ವಿರುದ್ಧ ದಾಖಲಾಗಿದ್ದ; ಸರಕಾರ ಪರಿಗಣನೆಗೆ ಯೋಗ್ಯವಲ್ಲ ಎಂದು ಕೈಬಿಟ್ಟಿದ್ದ ಆರೋಪ ಪಟ್ಟಿಯನ್ನು ವಾಪಸ್ಸು ಎಬ್ಬಿಸಿ, ಆರೋಪಿತರಾಗಿರುವ ಕಾರಣ ಅವರನ್ನು ಡಿ.ಜಿ.ಪಿ. ಹುದ್ದೆಗೇರಿಸಲು ತೊಂದರೆಗಳಿವೆ ಎಂಬ ನೆಪವೊಡ್ಡಿ ಅವರಿಗಿಂತ ಕಿರಿಯ ಅಧಿಕಾರಿಯನ್ನ ... ಮಾತ್ರವಲ್ಲದೆ, ಗುಪ್ತಚರ ವಿಭಾಗದ ಮುಖ್ಯಸ್ಥ ... ಇಲ್ಲದ ವಿಭಾಗಕ್ಕೆ ಸರಕಾರ ಅವರನ್ನು ವರ್ಗ ಮಾಡಿತು.

ಶ್ರೀಕುಮಾರ್ ಈ ಅನ್ಯಾಯದ ವಿರುದ್ಧ 'ಸೆಂಟ್ರಲ್ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್'ಗೆ ದೂರು ನೀಡಿದರು. ಟ್ರಿಬ್ಯುನಲ್ ... ಅವರಿಗೆ ಡಿ.ಜಿ.ಪಿ. ... ತೀರ್ಪು ಬಂದದ್ದು ಅವರು ನಿವೃತ್ತರಾಗುವ ದಿನ. ಅಂದರೆ ... 28,2005. ಗುಜರಾತ್ ಸರಕಾರ, ಅವರ ಮೇಲಿನ ಆರೋಪ ಕೋರ್ಟಿನಲ್ಲಿದೆ ಎಂಬ ನೆಪವೊಡ್ಡಿ ಆ ತೀರ್ಪಿನ ಅನುಷ್ಠಾನವನ್ನು ತಡೆಯಿತು. ... ವರ್ಷಗಳ ನಂತರ ಗುಜರಾತ್ ಉಚ್ಚನ್ಯಾಯಾಲಯ ರಾಜ್ಯ ಸರಕಾರದ ನಿಲುವನ್ನು ತಿರಸ್ಕರಿಸಿ ಅವರ ಬಡ್ತಿಯನ್ನು ಸಿಂಧುಗೊಳಿಸಿತು. ಹಾಗಾಗಿ ಅವರ ನಿವೃತ್ತಿಯ ಹುದ್ದೆ ಡಿ.ಜಿ.ಪಿ. ಎಂದಾಯ್ತು. ಈ ನ್ಯಾಯಿಕ ಹೋರಾಟದ ಎರಡು ವರ್ಷ ಅವರಿಗೆ ಪಿಂಚಣಿಯೂ ದೊರಕುತ್ತಿರಲಿಲ್ಲ. ಶ್ರೀಕುಮಾರ್ ತಮ್ಮ ಅಫಿಡವಿಟ್ಟನ್ನು ಭಾರತದ ಉಚ್ಚನ್ಯಾಯಾಲಕ್ಕೂ ಸಲ್ಲಿಸಿದ್ದಾರೆ. ಅದು ಈಗ ಗುಜರಾತ್ ಹಿಂಸಾಕಾಂಡದ ಐದು ಪ್ರಮುಖ ಘಟನೆಗಳನ್ನು ಮರುವಿಚಾರಣೆಗೆ ತೆರೆಯುವಂತೆ ಮಾಡಿರುವ 'ಸಿಟಿಜನ್ಸ್ ಫೋರಮ್ ಫಾರ್ ಪೀಸ್ ಆಂಡ್ ಜಸ್ಟೀಸ್' ಸಂಸ್ಥೆ ಸರ್ವೋಚ್ಚ ನ್ಯಾಯಾಲಯದಲ್ಲಿ ಹೂಡಿರುವ ದಾವೆಯ ಭಾಗವಾಗಿದೆ. ಈಗ ಅವರು ಗುಜರಾತಿನ ಗಾಂಧಿನಗರದಲ್ಲಿ ವಾಸಿಸುತ್ತಿದ್ದು, 2002ರ ಹಿಂಸಾಕಾಂಡದಲ್ಲಿ ನೊಂದವರ ಪರವಾಗಿ ನ್ಯಾಯಿಕ ಹೋರಾಟ ನಡೆಸುತ್ತಿದ್ದಾರೆ. ಇಷ್ಟೆಲ್ಲದರ ನಂತರವೂ ಶ್ರೀಕುಮಾರ್ 'ಉದ್ಯೋಗದಲ್ಲಿದ್ದೂ ನಾನು ರಾಜ್ಯ ಸರಕಾರವನ್ನು ಎದುರು ಹಾಕಿಕೊಂಡಿದ್ದೆ. ಆಗ ಸಭೆ-ಸಮಾರಂಭಗಳಲ್ಲಿ ನನ್ನ ಸಹ ಅಧಿಕಾರಿಗಳು ದೂರದಿಂದಲೇ ಅಭಿನಂದಿಸಿ, ಮುಖ ಮರೆಸಿಕೊಳ್ಳುತ್ತಿದ್ದರು. ಅವರ ವರ್ತನೆ ಸಹಜವಾದದ್ದೇ. ನನ್ನ ಜೊತೆ ನಿಕಟವಾಗಿ ಮಾತನಾಡಿದರೆ ಸರಕಾರದ ಕೆಂಗಣ್ಣಿಗೆ ಗುರಿಯಾಗಬೇಕಾದೀತು ಎಂಬ ಆತಂಕ ಅವರಲ್ಲಿ ಇರುತಿತ್ತು. ಹಾಗಾಗಿ ನಾನು ಸಂಘಟಕರಿಗೆ, ನಿಮಗೆ ಯಾವುದೇ ವ್ಯಕ್ತಿ ನಿಮ್ಮ ಸಮಾರಂಭಕ್ಕೆ ಬರಕೂಡದು ಎಂಬ ಆಪೇಕ್ಷೆ ಇದ್ದಲ್ಲಿ ನನ್ನನ್ನು ಆಹ್ವಾನಿಸಿ, ಅವರು ಖಂಡಿತ ಆ ಸಮಾರಂಭಕ್ಕೆ ಬರುವುದಿಲ್ಲ ಎಂದು ಸಲಹೆ ಕೊಡುತ್ತಿದ್ದೆ' ಎಂದು ಚಟಾಕಿ ಹಾರಿಸಿ, ದೊಡ್ಡದಾಗಿ ನಕ್ಕು ತಮ್ಮನ್ನು ಮುತ್ತಬಹುದಾದ ಪ್ರಭಾವಳಿಯನ್ನು ನಿರಾಳವಾಗಿ ಉಡಾಯಿಸಿಬಿಡುತ್ತಾರೆ. 'ಹಿಂದೂತ್ವವಾದ' ಹಿಂದುಧರ್ಮವನ್ನು ನಾಶಮಾಡುತ್ತಿರುವ ಅಧಿಕಾರದಾಹಿ ರಾಜಕೀಯ; ಅಂಥ ರಾಜಕೀಯದ ದುರುಳತನವನ್ನು ಹಿಂದೂ ಧಾರ್ಮಿಕ ಮೌಲ್ಯಗಳನ್ನು ಜೀವದಾಯಿಯಾಗಿ ಮಾಡಿಕೊಂಡಿರುವ ತನ್ನಂತಹವರು ಎದುರಿಸದೆ ಇದ್ದರೆ, ತಮ್ಮ ಶ್ರದ್ಧೆಯೇ ಅನೈತಿಕವಾದದ್ದು ಎಂಬ ತತ್ವದ ತುರ್ತಿನ ಜನ ಶ್ರೀಕುಮಾರ್.

ವರು ಪಾಕಿಸ್ತಾನ ಗೂಢಚರ ಸಂಸ್ಥೆ ಐ.ಎಸ್.ಐ. ಏಜೆಂಟರೆಂದು ದಿಸಲು ಪುರಾವೆಗಳನ್ನು ಹುಡುಕಿ ಕೊಡಿ ಎಂಬ ಅಪ್ಪಣೆ ಬಂದಿತ್ತು. ದಕ್ಕೆ, ನಾನು ಅದು ಸಿ.ಬಿ.ಐ./ರಾ ನಂಥ 'ಕಾರ್ಯಶೀಲ ಢಚರ್ಯೆ'ಯನ್ನು ಮಾಡುವ ಹಕ್ಕು ನಮಗಿಲ್ಲ, ಅದೂ ಕಾನೂನು ತ್ಯ ನಮ್ಮ ಕೆಲಸವೂ ಅಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಯಿತು. 002ರ ಗುಜರಾತ್ ಹಿಂಸಾಚಾರದ ವೇಳೆ, ಗುಜರಾತಿನ ಭಾವನಗರ್ ಲ್ಲೆಯ ಎಸ್.ಪಿ. ರಾಹುಲ್ ಶರ್ಮ ಯಾರೇ ಕಾನೂನು ಕದಡುವ ದಲ್ಲಿ ತೊಡಗಿದರೆ ವರಿಗೆ ಭಾರತದ ಪರಾಧಸಂಹಿತೆ ಪ್ರಕಾರ ಖಂಡಿತ ಎಂದು, ತದ ಪ್ರೇರಣೆಯಿಂದ ರ್ವಜನಿಕವಾಗಿ ಸಿದ್ದರಿಂದ, ಆ ಜಿಲ್ಲೆಯಲ್ಲಿ ಾವ ಹಿಂಸೆಯೂ ಡೆಯಲಿಲ್ಲ-ನಿರೂಪಕ). ದೆಲ್ಲ ಸಂವಿಧಾನಬದ್ಧವಾಗಿ ಮ್ಮ ಅಧಿಕಾರಿಗಳು ಡಬಹುದಾದ ಸಹಜ ರ್ತವ್ಯಗಳು.



ಷ್ಟೆ ಮಟ್ಟಿಗೆ 70ರ ದಶಕದ ನಂತರ ಘಟಿಸಿದ ಎರಡು ಮುಖ ಬದಲಾವಣೆಗಳ ಕಾರಣವಾಗಿ, ಇಂದು ನಾವು ಕೋಮುಹಿಂಸೆಯ ಅತ್ಯಂತ ಹೀನ ಸ್ವರೂಪವನ್ನು ನೋಡುತ್ತಿದ್ದೇವೆ. ಮೊದಲನೆಯದು 'ಆಧ್ಯಾತ್ಮಹೀನವಾಗಿ ಅಧಿಕಾರ ಭೋಗ ಉಂಡ ವರ್ಗ'; ಎರಡನೆಯದು 'ಕೋಮುವಾದೀಕರಣಗೊಂಡ ರಾಜಕೀಯ'-ಇವೆರಡು ಒಂದೇ ನಾಣ್ಯದ ಎರಡು ಮುಖಗಳ ಹಾಗೆ ವೆ. ಇವತ್ತು ಮಠ-ಮಾನ್ಯರು ತಮ್ಮ ಹಿರಿಮೆಯನ್ನು ಕ್ತಿಕ-ಆಧ್ಯಾತ್ಮಿಕ ಉನ್ನತಿಗಿಂತ ಮಿಗಿಲಾಗಿ ತಮಗಿರುವ ರಾಜಕೀಯ ಧಿಕಾರ ಪ್ರಭಾವದಲ್ಲಿ ಮೆರೆಯಲು ಉತ್ಸುಕರಾಗಿದ್ದಾರೆ. ಅಂತೆಯೇ, ರಾಜಕಾರಣಿಗಳು ತಮ್ಮನ್ನು ಚುನಾಯಿಸಿದ ಜನರಿಗೆ ಬದ್ಧರಾಗಿರುವುದಕ್ಕಿಂತ ಮಠಾಧೀಶರು-ಮುಲ್ಲಾಗಳಿಗೆ ತಮ್ಮ ಬದ್ಧತೆ ಇದೆ ಎಂದು ಪ್ರದರ್ಶಿಸುವುದರಲ್ಲಿ ಸುಖಿಸುತ್ತಾರೆ! ನೀವು ನೋಡಿದ್ದೀರಿ- ರಾಜಕಾರಣಿಯೊಬ್ಬ ತಾನು ಚುನಾವಣೆಯಲ್ಲಿ ಗೆದ್ದ ತಕ್ಷಣ ಪ್ರಭಾವಿ ಮಠಾಧೀಶ/ಮೌಲ್ವಿಯನ್ನು ಆಲಿಂಗಿಸಿ ದೊಡ್ಡ ಫೋಟೋ ತೆಗೆಸಿಕೊಂಡು, ಕೊಂಡದಲ್ಲಿ ಹಲ್ಲು ಕಿರಿಯುತ್ತಾನೆ. ಅಯ್ಯೋ ದೇವರೇ! ಈ ಮಠಾಧೀಶ-ರಾಜಕಾರಣಿಗಳದ್ದು ಎಂಥ ಅಸಹಜ ಜೋಡು ಕಣ್ರಿ! ನೀವು ಚುನಾವಣೆ ಗೆದ್ದಿದ್ದೀರಿ, ನಿಮ್ಮ ತಾಯಿಯನ್ನು ಅಪ್ಪಿ ದೇವರಿನಲ್ಲ ಫೋಟೋ ಛಾಪಿಸಿಕೊಳ್ಳಬಾರದೇ! ಈ ಮಠಾಧೀಶರು-ಮುಲ್ಲಾಗಳೇ ಬೇಕೆ! ಇಷ್ಟು ಇಂಥದರನ್ನು ಧಾರಾಳವಾಗಿ ಆಶೀರ್ವದಿಸಿ ಅದೇ ಕೊಂಡದಲ್ಲಿ ಓಂಟುಪರಿಗೆ ಎಂಥ ಆಧ್ಯಾತ್ಮಿಕ ಪರಿಶುದ್ಧತೆ ಇದ್ದೀತು!

- ಭಾರತದ ಸ್ವಾತಂತ್ರ್ಯ ನಂತರ ಮೊದಲ ಚುನಾವಣೆಗಳು ನಡೆಯುವುದಿತ್ತಲ್ಲ; ಆಗ ನೆಹರು ಕೂಡ ಅಭ್ಯರ್ಥಿಯಾಗಿದ್ದರು. ಅವರ ವಿರೋಧಿಗಳು "ಈತ ಪಂಡಿತ ಎಂದು ಹೇಳಿಕೊಳ್ಳುತ್ತಾನೆ, ಮೇಲ್ವಸ್ತ್ರ ತೆಗೆದು ತೋರಿಸಲಿ! ಜನಿವಾರ ಇದೆಯಾ ನೋಡೋಣ!" ಎಂದು ಎದುರು ಪ್ರಚಾರ ಶುರುಮಾಡಿದರು. ಆಗ ಕಾಂಗ್ರೆಸ್ಸಿನ ಅವರ ಹಿತೈಷಿಗಳು "ಒಂದು ಸಾರಿಯಾದರೂ ನೀವು ಜನಿವಾರ ಹಾಕಿ ಸಾರ್ವಜನಿಕವಾಗಿ ಕಾಣಿಸಿಕೊಂಡರೆ ಒಳಿತು" ಎಂದರು. ಜವಾಹರಲಾಲ್ ನೆಹರು ಹೇಳಿದ್ದೇನು ಗೊತ್ತಾ-"ನಾನು ಈ ಕಾರಣವಾಗಿ ಸೋತರೂ ಚಿಂತೆ ಇಲ್ಲ, ನಮ್ಮ ತತ್ವಾದರ್ಶಗಳು ಗೆಲ್ಲಬೇಕು-ಅದು ಕಾಂಗ್ರೆಸ್ಸಿನ ವಿಜಯ; ಈ ನಾಟಕವೇನೂ ಬೇಡ!" ಹಾಗೆಯೇ ಮೌಲಾನ ಅಬ್ದುಲ್ ಕಲಂ ಆಜಾದರಿಗೆ ಮುಸ್ಲಿಮ್ ಬಾಹುಳ್ಯವಿರುವ ಪ್ರದೇಶದಲ್ಲಿ ಚುನಾವಣೆಗೆ ನಿಲ್ಲಬೇಕು ಎಂದಾಗ ಅವರು ಹೇಳಿದ್ದೇನು? "ನಾನು ಕಾಂಗ್ರೆಸ್ ಅಭ್ಯರ್ಥಿಯೇ ವಿನಹ ಮುಸಲ್ಮಾನರ ಅಭ್ಯರ್ಥಿಯಲ್ಲ! ನನ್ನ ಯೋಗ್ಯತೆಯಾಧಾರದಲ್ಲಿ ನಾನು ಭಾರತದ ಬಹುಮತೀಯ ಪ್ರಜೆಗಳ ಬೆಂಬಲ ಪಡೆದು ಸಂಸದನಾಗುತ್ತೇನೆ ಹೊರತು ಮುಸಲ್ಮಾನರ ಬೆಂಬಲ ಪಡೆದು ಸಂಸದನಾಗುವುದು ನಾಚಿಕೆಗೇಡಿನ ವಿಷಯ" ಎಂದಿದ್ದರು. ಈ ತತ್ವಾದರ್ಶಗಳು ಇಂದು ಮಣ್ಣುಪಾಲಾಗಿವೆ.
  ಮಠಾಧೀಶರು-ಮೌಲ್ವಿಗಳನ್ನು ಅಪ್ಪಿಕೊಳ್ಳುವ ರಾಜಕಾರಣ ಬೇರುಬಿಟ್ಟದೆ.
- ನಾನು ಅಹ್ಮದಾಬಾದಿನಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಕಳೆದಿದ್ದೇನೆ. ಕೋಮು ಸಂಘರ್ಷದ ವಿಷಯಕ್ಕೆ ಬಂದರೆ ಈ ನಗರವು ಭಾರತದ 'ಅತ್ಯಂತ ಸೂಕ್ಷ್ಮ ನಗರ' ಎಂಬ ಕುಖ್ಯಾತಿಯನ್ನು ಪಡೆದಿದೆ. ಇಲ್ಲಿ 1969ರಲ್ಲಿ ದೊಡ್ಡ ಕೋಮುಗಲಭೆ ನಡೆದಿತ್ತು, 2002ರಲ್ಲೂ ಇಲ್ಲಿ ಭೀಕರ ಹಿಂಸಾಚಾರ ನಡೆಯಿತು. ವ್ಯತ್ಯಾಸವೆಂದರೆ, 1969ಕ್ಕಿಂತ ಹೆಚ್ಚಾಗಿ 2002ರಲ್ಲಿ ಜನ ಕೋಮು ವೈಷಮ್ಯಕ್ಕೆ ತಮ್ಮನ್ನು ಕೊಟ್ಟುಕೊಂಡಿದ್ದಾರೆ. (ಹಿಂಸೆ ನೈಸರ್ಗಿಕವಾದದ್ದು, ಹಾಗಾಗಿ) ಕೋಮುಹಿಂಸೆಯನ್ನು 'ನೈಸರ್ಗಿಕ ಚಿಕಿತ್ಸೆ'ಯಿಂದ ಗುಣಪಡಿಸಬಹುದು ಎಂದು ಕೆಲವರು ಭಾವಿಸಿದ್ದಾರೆ! ಕ್ಷಮಿಸಿ, ಕೋಮುಹಿಂಸೆಗೆ 'ನೈಸರ್ಗಿಕ ಚಿಕಿತ್ಸೆ'ಯಲ್ಲಿ ಮದ್ದಿಲ್ಲ, ಅದಕ್ಕೀಗ ಜರೂರಾಗಿ 'ಶಸ್ತ್ರಚಿಕಿತ್ಸೆ'ಯ ಅವಶ್ಯಕತೆ ಇದೆ!

ಸೂರ್ಯನಿಗೆ ಆಸೆ ತೋರಿಸುವ ಹುಡುಗರು...

ಬಸವರಾಜ ಹಳ್ಳಿ

ಏಳೂರು ದಾರಿಗಳಲಿ
ಜೇಬು ಹರಿದ ಹುಡುಗರಿಗೆ
ಮಾಯದಂತ ಕನಸುಗಳು
ಹೊಟ್ಟೆ ತಾಳಕೆ ಚಾಚಿದ
ಕಡೆಯಲ್ಲೆಲ್ಲಾ ಚಡಿಯ
ಏಟುಗಳು

ಜಗದ ಎಂಜಲುಗಳ
ಮೂಟೆಗಳು ಹೊಟ್ಟೆಯೊಳಗಿವೆ
ಹಳಸಲಿಗೆ ಎಂತ ಶಕ್ತಿ
ಹುಡುಗರೇ ಸಾಕ್ಷಿ
ಸೂರ್ಯನಿಗೆ ಸಿಟ್ಟು
ಹೋದಕಡೆಯಲ್ಲೆಲ್ಲಾ ಕಾಡುತ್ತಾನೆ
ತಲೆ ಉರಿಸುತ್ತಾನೆ
ಚಂದ್ರ ಪಾಪ ನಗುತ್ತಲೆ
ತಲೆ ನೇವರಿಸುತ್ತಾನೆ

ಕಣ್ಣೋಟಕೆ ಸಿಗದ
ಮಹಲುಗಳ ನಾಯಿಗಳದು
ಎಂಥಾ ಭಾಗ್ಯ
ಹುಡುಗರು ಬೇಡಿಕೊಳ್ಳುತ್ತವೆ
ಎದೆ ಮುಟ್ಟಿಕೊಂಡು

ನೂರೊಂದು ಒದರುತ್ತಲೆ
ಬಂದ ಆಕೆ ಎಸೆಯುತ್ತಾಳೆ
ಹುಡುಗರು ಅಗಳುಗಳನು
ಪಾತ್ರೆಗೆ ಹಾಕುತ್ತವೆ
ಬೈಗುಳಗಳನು ಜೋಳಿಗೆಯಲಿ
ಗಂಟು ಕಟ್ಟುತ್ತವೆ

ಗಟಾರದ ಮಗ್ಗುಲಲಿ ಕುಳಿತು
ಉರಿಗಣ್ಣ ಸೂರ್ಯನಿಗೆ
ಎಂಜಲಿನ ಆಸೆ ತೋರಿಸುತ್ತಾ
ಹುಡುಗರು ರುಚಿ ನೋಡುತ್ತವೆ.



ಯಂತ್ರನಾಗರಿಕತೆಯ ಯಜಮಾನ್ಯಕ್ಕೆ ಪರ್ಯಾಯ ಚಿಂತನೆ

ಪುಸ್ತಕ ವಿಮರ್ಶೆ


ಕಳೆದ ನಾಲ್ಕಾರು ದಶಕಗಳಲ್ಲಿ ರಂಗಭೂಮಿ, ಚರಕ, ದೇಸಿವಾದ, ಸಾಹಿತ್ಯ ಮತ್ತಿತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಪ್ರಸನ್ನ ಅವರು ತಮ್ಮ ಮಹತ್ವಾಕಾಂಕ್ಷೆಯ 'ಯಂತ್ರಗಳನ್ನು ಕಳಚೋಣ ಬನ್ನಿ' ಕೃತಿಯ ಮೂಲಕ ಸಮಕಾಲೀನ ವೈರುಧ್ಯಗಳಿಗೆ ಮತ್ತೊಮ್ಮೆ ಮುಖಾಮುಖಿಯಾಗಿದ್ದಾರೆ. ತಮ್ಮ ತಾರುಣ್ಯದಲ್ಲಿ ಮಾರ್ಕ್ಸ್‌ವಾದದಿಂದ ಬಹು ಪ್ರಭಾವಿತರಾದ ಪ್ರಸನ್ನ, ಭಾರತೀಯ ಸಾಮಾಜಿಕ ಸಂದರ್ಭದಲ್ಲಿನ ಅದರ ಮಿತಿಯನ್ನು ಅರಿತು, ಆ ಸೀಮಿತ ತಾರ್ಕಿಕ ಚೌಕಟ್ಟಿನಿಂದ ಬಿಡುಗಡೆ ಪಡೆದವರು. ಸತತವಾಗಿ ಜಂಗಮರಂತೆ ಒಂದು ಕಡೆಯಿಂದ ಮತ್ತೊಂದೆಡೆಗೆ- ರಾಷ್ಟ್ರೀಯ ನಾಟಕಶಾಲೆಯಿಂದ ರಂಗಾಯಣದವರೆಗೆ- ಸಂಚರಿಸಿದರೂ ಪುಟ್ಟಗ್ರಾಮ ಹೆಗ್ಗೋಡನ್ನು ತಮ್ಮ ನೆಲೆಯಾಗಿಸಿಕೊಂಡ ಇವರು ಗಾಂಧಿ ಪ್ರೇರಿತ ಸರಳತೆ, ಆದರ್ಶ ಗ್ರಾಮ ಹಾಗೂ ಕಾಯಕ ಸಂಸ್ಕೃತಿಯ ಪ್ರತಿಪಾದಕರೂ ಹೌದು. ಹೆಗ್ಗೋಡಿನಂತಹ ಗ್ರಾಮದಲ್ಲಿ ತಮ್ಮ ದೈತ್ಯ ಪ್ರತಿಭೆಯನ್ನು ಚರಕ ಎಂಬ ಗ್ರಾಮೋದ್ಯೋಗ ಸಂಸ್ಥೆಯನ್ನು ಕಟ್ಟಲು ಬಳಸಿಕೊಂಡಿದ್ದು ಪ್ರಾಯಶಃ ಗಾಂಧಿಯ ಪ್ರಭಾವದಿಂದಲೇ ಎನ್ನಿಸುತ್ತದೆ. ಪ್ರಸ್ತುತ ಕೃತಿಯಲ್ಲಿನ ಜೀವನ ದರ್ಶನ ತಮ್ಮ ಸುತ್ತಮುತ್ತಲಿನ ಸಮುದಾಯ ಹಾಗೂ ನಾಗರಿಕತೆಯನ್ನು ಅರಿಯುವ ಒಂದು ನೈತಿಕ ತಿಳಿವಳಿಕೆಯೇ ಆಗಿದೆ. ಸಮಕಾಲೀನ ನಾಗರಿಕತೆ ಎತ್ತ ಚಲಿಸುತ್ತಿದೆ ಹಾಗೂ ಎತ್ತ ಚಲಿಸಬೇಕು ಎಂದು ಚಿಂತಿಸಿ ಬರೆದ ಬರಹಗಳೇ ಈ ಕೃತಿಯ ಸಾಂಸ್ಕೃತಿಕ ಚೌಕಟ್ಟನ್ನು ರೂಪಿಸಿದೆ.

ಒಂದು ಅರ್ಥದಲ್ಲಿ ಈ ಹಿಂದೆ ಪ್ರಕಟವಾದ ಇವರ ಇನ್ನೊಂದು ಪುಸ್ತಕ 'ದೇಸಿಜೀವನ ಪದ್ಧತಿ' ಈ ಪುಸ್ತಕದ ಮುನ್ನುಡಿ. ಏಕೆಂದರೆ ಎರಡೂ ಪುಸ್ತಕಗಳು ಆಧುನಿಕ ಯಂತ್ರನಾಗರಿಕತೆಯ ಯಜಮಾನ್ಯಕ್ಕೆ ದೇಸಿ ಹಾಗೂ ಸ್ಥಳೀಯ ಸಂಸ್ಕೃತಿಗಳ ಕಿರುನಾಗರಿಕತೆಯನ್ನು ಪರ್ಯಾಯವಾಗಿ ಪ್ರತಿಪಾದಿಸುತ್ತವೆ. ಪಾಶ್ಚಿಮಾತ್ಯ ನಾಗರಿಕತೆ ತನ್ನ ಜ್ಞಾನಯುಗದೊಂದಿಗೆ (Enlightenment) ತಂದ ಯಂತ್ರನಾಗರಿಕತೆ ಭಾರತವನ್ನು ಪ್ರವೇಶಿಸಿದ ರೀತಿ ಹಾಗೂ ಇದನ್ನು ಭಾರತೀಯರು ಸ್ವೀಕರಿಸಿದ ಕ್ರಮವನ್ನು ಎರಡೂ ಪುಸ್ತಕಗಳು ವಿಶ್ಲೇಷಿಸುತ್ತವೆ. ಈಗಾಗಲೇ ಹಲವಾರು ವಸಾಹತೋತ್ತರ ಚಿಂತಕರು ಚರ್ಚಿಸಿರುವಂತೆ, ಆಧುನಿಕತೆಯ ಹೆಸರಿನಲ್ಲಿ ಭಾರತವನ್ನು ಪ್ರವೇಶಿಸಿದ ಯಂತ್ರಜ್ಞಾನ, ಇಲ್ಲಿ ಅಗಾಧ ಸಂಕೀರ್ಣತೆಗಳಿಗೆ ಹಾಗೂ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಪಲ್ಲಟಗಳಿಗೆ ಕಾರಣವಾಯಿತು. ಈ ಯಂತ್ರನಾಗರಿಕತೆಗಿರುವ ತೀರಲಾರದ ಲಾಭದ ದಾಹ, ದೈತ್ಯವೇಗ ಹಾಗೂ ಸ್ಥಳೀಯ ಸಂಸ್ಕೃತಿಗಳ ಸರ್ವನಾಶದ ಕಥನವನ್ನು ಈ ಕೃತಿ ಎಳೆಎಳೆಯಾಗಿಯೇ ನಮ್ಮೆದುರು ಬಿಚ್ಚಿಡುತ್ತದೆ. ನಾವು ಏಕೆ ಮತ್ತು ಹೇಗೆ ಯಂತ್ರಗಳ ಯಜಮಾನ್ಯವನ್ನು ಪ್ರಶ್ನಿಸಬೇಕೆಂದು ಲೇಖಕರು 'ಸಮಗ್ರ'ವಾಗಿ ಚಿಂತಿಸಿದ್ದಾರೆ. ಹೀಗೆ ಯಂತ್ರಗಳ ವಿಕೃತಿಯನ್ನು ವಿಶ್ಲೇಷಿಸಲು ಪ್ರಸನ್ನ ಅವರು ಬಳಸಿಕೊಂಡಿರುವ ಪರಿಕರವೆಂದರೆ ಗಾಂಧಿ ಪ್ರಣೀತ ಸರಳತೆ, ನೈತಿಕತೆ ಹಾಗೂ ತಮ್ಮ ಸಂಚಾರಿ ಜೀವನದುದ್ದಕ್ಕೂ ಗಳಿಸಿಕೊಂಡ ಪಾರಂಪರಿಕ ಜ್ಞಾನವೇ ಆಗಿದೆ. ಇಲ್ಲಿನ ವಿಶ್ಲೇಷಣೆಗಳು ತೀಕ್ಷ್ಣವಾದ ಒಳನೋಟವನ್ನು ನೀಡುವುದು ಅತ್ಯಂತ ಸರಳ ಭಾಷೆಯಲ್ಲಿಯೇ. ಸರ್ವೇಸಾಮಾನ್ಯವಾಗಿ ಅಕಾಡೆಮಿಕ್ ವಿಮರ್ಶೆಯಲ್ಲಿ ಬಳಸುವ ಅದೇ ಚರ್ವಿತ ಚರ್ವಣದ ತಾಂತ್ರಿಕ ಪದಪುಂಜಗಳನ್ನು ಲೇಖಕರು ಉದ್ದೇಶಪೂರ್ವಕವಾಗಿಯೇ ಬಿಟ್ಟಿದ್ದಾರೆ. ಸರಳ ಭಾಷೆಯ ಬಳಕೆ ಎಂದರೆ ಅದು ವಿಷಯವನ್ನು ತಿಳಿಗೊಳಿಸುವುದಲ್ಲ. ಬದಲಾಗಿ, ಅದು ಜನಸಾಮಾನ್ಯರು ಬಳಸುವ ಹಾಗೂ ಅರ್ಥಮಾಡಿಕೊಳ್ಳುವ ಸಂವಹನ ಕ್ರಿಯೆ ಎಂಬ ತಿಳಿವಳಿಕೆ ಲೇಖಕರಿಗಿದೆ. ಗಾಂಧಿ ತಮ್ಮ ಸಾರ್ವಜನಿಕ ಭಾಷಣ ಹಾಗೂ ಲೇಖನಗಳಲ್ಲಿ ಬಳಸಿದ ಭಾಷೆಯೂ ಅತ್ಯಂತ ಸರಳವಾಗಿತ್ತು ಎಂಬುದನ್ನು ನಾವು ಪುನಃ ಇಲ್ಲಿ ನೆನಪಿಸಿಕೊಳ್ಳಬೇಕು. ಅದರಲ್ಲೂ ಪಾಶ್ಚಿಮಾತ್ಯ ನಾಗರಿಕತೆಯನ್ನು ಕಟು ವಿಮರ್ಶೆಗೆ ಒಳಪಡಿಸುವ ಹಿಂದ್ ಸ್ವರಾಜ್‌ಅನ್ನು ಕೂಡಾ ಅತ್ಯಂತ ಸರಳ ಭಾಷೆಯಲ್ಲಿಯೇ ಕಟ್ಟಲಾಗಿದೆ. ಆದ್ದರಿಂದ ಈ ಕೃತಿಯ ಬೇರೆ ಬೇರೆ ಲೇಖನಗಳಲ್ಲಿ ಗಾಂಧಿ ವಿಚಾರಗಳು ಹಾಗೂ ಲೇಖನಗಳು ಪುನಃ ಪುನಃ ಚರ್ಚಿತವಾಗಿರುವುದು ಕಾಕತಾಳೀಯವಲ್ಲ. (ಇತ್ತೀಚಿನ ಅವರ ಕಾದಂಬರಿ 'ಬಾಲಗೋಪಾಲ'ದಲ್ಲಿ ಪ್ರಸನ್ನ ಯಾಕೆ **magical realism**ನಂತಹ ತಂತ್ರಕ್ಕೆ ಮೊರೆ ಹೋಗುತ್ತಾರೆ ಎಂಬುದು ಬೇರೆಯೇ ಚರ್ಚೆಯಾಗಬಹುದು!) ಗಾಂಧಿಯಂತೆಯೇ ಒಂದು ನೈತಿಕ ನೆಲೆಯಿಂದ ಪ್ರಸನ್ನ ಯಂತ್ರಗಳ ವಿಕೃತಿ ತಂದಿಟ್ಟ ಆತಂಕ-ಸಂಕಟಗಳನ್ನು ವಿಶ್ಲೇಷಿಸಿದ್ದಾರೆ.

ಪುಸ್ತಕದಲ್ಲಿ ಒಟ್ಟಾರೆಯಾಗಿ ಯಂತ್ರ, ಗ್ರಾಮಸ್ವರಾಜ್ಯ ಹಾಗೂ ಧರ್ಮಸಂಕಟಗಳೆಂಬ ಮೂರು ಭಾಗಗಳಿದ್ದು ಅವು ಯಂತ್ರಗಳ ಹುಟ್ಟು, ಅದು ಸಾಂಸ್ಥಿಕ ರೂಪ ಪಡೆದು ಅಧಿಕಾರ ಸ್ಥಾಪಿಸಿದ ಬಗೆ ಹಾಗೂ ದೇಸಿ ಸಂಸ್ಕೃತಿಯ ಅವನತಿಯನ್ನು ನಿರೂಪಿಸಿವೆ. ಇವು ಬಿಡಿಬಿಡಿ ಲೇಖನಗಳ ಸ್ವರೂಪದಲ್ಲಿದ್ದರೂ, ಒಂದಕ್ಕೊಂದು ಪೂರಕವಾಗಿ ಸಮಕಾಲೀನ ಸಮಾಜದ ದ್ವಂದ್ವಗಳನ್ನು ವಿವೇಚಿಸುತ್ತವೆ. ಹಾಗೆಯೇ ಇಲ್ಲಿನ ಲೇಖನಗಳ ಮಧ್ಯೆ ವಿಪುಲವಾಗಿ ಪ್ರಕಟಿಸಿರುವ ಕಲಾಚಿತ್ರಗಳೂ ಕೂಡಾ ಮುದ್ರಿತ ಲೇಖನಗಳ ಆಶಯವನ್ನೇ ಇನ್ನೂ ಗಟ್ಟಿಗೊಳಿಸಿವೆ. 'ಇದು ಯಂತ್ರ ತಿಪ್ಪೆಯೋ?' ಎಂಬ ಶೀರ್ಷಿಕೆಯಡಿ ಪ್ರಕಟಿಸಿರುವ ಐಫೆಲ್ ಟವರಿನ ಚಿತ್ರ (ಪು.16) 'ಯಂತ್ರ ನಾಗರಿಕತೆ: ತನ್ನದೇ ರಂಗಸಜ್ಜಿಕೆಯ ವಿನಾಶದ ಮುಂದೆ ನಿಂತಿರುವ ಫರ್ನಾಂಡ್ ಲೆಜೆ'ಯ ಚಿತ್ರ (ಪು.86), 'ಮುಂಬರಲಿತ ಹೀಸ್' ಮುಂತಾದವು ಕಲಾತ್ಮಕ ದೃಷ್ಟಿಯಿಂದಲೂ ಶ್ರೇಷ್ಠವೇ. ಈ ಎರಡೂ ಪ್ರಕಾರಗಳ ತಾಳಮೇಳದಿಂದಾಗಿ ಕೃತಿಗೆ ಬಹುಶ್ರುತತೆಯೂ ಲಭ್ಯವಾಗಿದೆ.

ನಾವು ಗಮನಿಸಲೇಬೇಕಾದ ಸಂಗತಿಯೆಂದರೆ, ಯಂತ್ರಗಳನ್ನು ಕಳಚಲು ಬೇಕಾದ ವಿಭಿನ್ನ ಮೂಲಗಳ ನೆಲೆಯನ್ನು ಲೇಖಕರು ಹುಡುಕುತ್ತಾರೆ. ಇವರ ವಾದ ಕೂಡಾ ಸರಳವೆ. ಯಂತ್ರಗಳನ್ನು ನಾವೇ ಅಪ್ಪಿಕೊಂಡಿರುವುದರಿಂದ, ನಾವು ದೃಢ ಮನಸ್ಸು ಮಾಡಿದರೆ ಆದರಿಂದ ಕಳಚಿಕೊಳ್ಳುವುದು ತೀರಾ ಕಷ್ಟವೂ ಅಲ್ಲ, ಅಪ್ರಾಯೋಗಿಕವೂ ಅಲ್ಲ. ಉದಾ: ಪುರಾಣಕಾಲದ ಸಂತರು, ವಚನಕಾರರು ಹಾಗೂ ಸೂಫಿಗಳು ಪ್ರಧಾನಧಾರೆಯ ಧರ್ಮಗಳ ಯಜಮಾನ್ಯವನ್ನು ತಮ್ಮದೇ ರೀತಿಯಲ್ಲಿ ಪ್ರಶ್ನಿಸಿದ್ದರು. ಕುಶಲಕರ್ಮಿಗಳೂ ಹಾಗೂ ದುಡಿಯುವ ವರ್ಗಗಳು ಇದನ್ನು ಅರ್ಥಮಾಡಿಕೊಂಡರೆ ಯಂತ್ರಗಳಿಂದ ಕಳಚಿಕೊಳ್ಳುವುದು ಇನ್ನೂ ಸುಲಭ ಎನ್ನುವ ನಿಲುವು ಸರಿಯಾದದ್ದು ಮತ್ತು ತಾರ್ಕಿಕವಾದದ್ದು. ಇದು ಮಾರ್ಕ್ಸ್‌ವಾದದ ಮಿತಿಯನ್ನು ಗುರುತಿಸುವ ಪ್ರಯತ್ನವೂ ಹೌದು. ಮಾರ್ಕ್ಸಿಸ್ಟರು ಯಂತ್ರಗಳು ಮನುಷ್ಯರಿಗೆ ಅದರಲ್ಲೂ ಮುಖ್ಯವಾಗಿ ದುಡಿಯುವ ಕೈಗಳಿಗೆ ಪೂರಕ ಎಂದು ನಂಬಿದ್ದರು. ಆದರೆ ದೈತ್ಯ ಯಂತ್ರಗಳು ಕೃಷಿ ಕ್ಷೇತ್ರವನ್ನು ಒಳಗೊಂಡಂತೆ ಶ್ರಮಿಕರ ಕೆಲಸವನ್ನು ಕಿತ್ತುಕೊಳ್ಳುತ್ತವೆಯೇ ಹೊರತು, ಅವು ಮನುಷ್ಯರಿಗೆ ಪೂರಕವಾಗಿ ಕಾರ್ಯ ನಿರ್ವಹಿಸುವುದಿಲ್ಲ. ಯಂತ್ರ ಸಂಸ್ಕೃತಿಯ ಹಿಂದಿರುವ ಬಂಡವಾಳಶಾಹಿ-ವಸಾಹತುಶಾಹಿ ಆಡಳಿತದ ಆಕ್ರಮಿಕ ಹಿಂಸಾತ್ಮಕ ನೆಲೆಯಿಂದ ಗೃಹ ಕೈಗಾರಿಕೆಗಳು ಮೇಲೇಳದಂತೆ ಪೆಟ್ಟು ತಿಂದಿವೆ. ಹಾಗಾಗಿ ಇವುಗಳಿಗೆ ಪ್ರತಿರೋಧದ ನೆಲೆ ಗೃಹ ಕೈಗಾರಿಕೆಗಳು ಹಾಗೂ ಸಾಂಪ್ರದಾಯಿಕ ಕೃಷಿ ಕ್ಷೇತ್ರಗಳು ಒಂದಕ್ಕೊಂದು ಪೂರಕವಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸಾಧ್ಯ ಎಂಬ ವಾದವನ್ನು ಪ್ರಸನ್ನ ನಮ್ಮ ಮುಂದಿಡುತ್ತಾರೆ. ಇವರ ಕನಸಿನ ಕೂಸಾದ ಚರಕ ಸಂಸ್ಥೆಯೇ ಬೃಹತ್ ಕೈಗಾರಿಕೆಗಳ ಆಕ್ರಮಣದಿಂದ ತಪ್ಪಿಸಿಕೊಳ್ಳಬಹುದಾದ ಪರ್ಯಾಯಕ್ಕೆ ಒಂದು ಅತ್ಯುತ್ತಮ ಉದಾಹರಣೆ. ನೇಕಾರಿಕೆ ಬಗೆಗೆ ಇವರಿಗೆ ವಿಶೇಷವಾದ ಒಳಜ್ಞಾನವಿರುವುದರಿಂದ ಇದರೆಲ್ಲಾ ಸಾಧ್ಯತೆಗಳನ್ನು ಇವರ ಲೇಖನಗಳು ವಿಶ್ಲೇಷಿಸುತ್ತವೆ. ಇದನ್ನೇ ಮತ್ತೊಂದು ರೀತಿಯಿಂದ ಹೇಳುವುದಾದರೆ, ಯಂತ್ರ ನಾಗರಿಕತೆಗೆ ವಿರೋಧ ಕೇವಲ ತಾತ್ವಿಕ ನೆಲೆಯ ತಿರಸ್ಕಾರದಿಂದಾಗಲಿ, ಬಲವಂತವಾಗಿ ಯಂತ್ರಗಳನ್ನು ಒಡೆದುಹಾಕುವುದರಿಂದಾಗಲಿ ಸಾಧ್ಯವಿಲ್ಲ. ಅದು ಪ್ರಯೋಗಿಕವಾಗಿರಲೇಬೇಕು ಎಂಬ ನೈತಿಕ ನೆಲೆ ಕೃತಿಯುದ್ದಕ್ಕೂ ವ್ಯಕ್ತವಾಗಿದೆ.

ಖ್ಯಾತ ಚಿಂತಕರಾದ ಕ್ಲಾಡ್ ಆಲ್ವರಿಸ್, ಭಾರತದಂತಹ ಬಡರಾಷ್ಟ್ರಗಳಲ್ಲಿನ ಪರಿಸರ ಮಾಲಿನ್ಯದ ಹಿಂದಿರುವ ಕಾರಣಗಳನ್ನು ವಿಶ್ಲೇಷಿಸುತ್ತಾ ಮೂರನೆಯ ಜಗತ್ತಿನ ಪರಿಸರಕ್ಕೆ ನಿಜವಾಗಿ ಗಂಡಾಂತರವಿರುವುದು ಅಮೆರಿಕಾ/ಯುರೋಪ್‌ನಂತಹ ಮುಂದುವರೆದ ಮೊದಲ ಜಗತ್ತು ತನ್ನ ವಿಷಯುಕ್ತ ಔಷಧಿ, ಮಾತ್ರೆಗಳಿಂದ ಹಿಡಿದು ರಾಸಾಯನಿಕ ತ್ಯಾಜ್ಯವನ್ನು ಮೂರನೆಯ ಜಗತ್ತಿನ ಬಡ ದೇಶಗಳಿಗೆ ವಿಲೇವಾರಿ ಮಾಡುವುದರಿಂದ ಎಂದು ಅಭಿಪ್ರಾಯ ಪಡುತ್ತಾರೆ. ಅಂದರೆ, ಮೂರನೆಯ ಜಗತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಕಸ ವಿಷವನ್ನು ವಿಲೇವಾರಿ ಮಾಡಲು ಇರುವ ತಿಪ್ಪೆ ಮಾತ್ರ! (**Dumping ground**) ಯಂತ್ರನಾಗರಿಕತೆಯೂ ಒಂದು ಅಗಾಧ ತಿಪ್ಪೆ ಎಂಬ ಲೇಖಕರ ಹೇಳಿಕೆಗೆ ಇದು ಬಹಳ ಹತ್ತಿರದಲ್ಲಿದೆ. ಈ ನವ ನಾಗರಿಕತೆಯ ಲಕ್ಷಣವೇ ಅತಿರೇಕ. ಯಾವುದು ತಮಗೆ ಉಪಯುಕ್ತವಲ್ಲವೋ ಅವುಗಳನ್ನು ಸಾರಾಸಗಟಾಗಿ ತಿರಸ್ಕರಿಸಿ, ಬಹು ಸಂಸ್ಕೃತಿಯ ವೈವಿಧ್ಯಗಳನ್ನೇ ನಿರಾಕರಿಸುವ ಗುಣ ಈ ಆಕ್ರಮಕ ನವ ನಾಗರಿಕತೆಗಿದೆ. ಹೀಗೆ ಉಪಯುಕ್ತತೆಯ ಹೊರತಾಗಿ ಎಲ್ಲವನ್ನೂ ನಿರಾಕರಿಸುವ ಯಂತ್ರನಾಗರಿಕತೆಗೆ ಪ್ರತಿರೋಧವಾಗಿ ಗ್ರಾಮ ಕೈಗಾರಿಕೆಗಳನ್ನು ಪ್ರಸನ್ನ ಪ್ರತಿಪಾದಿಸುತ್ತಾರೆ. ಆದ್ದರಿಂದಲೇ ಪ್ರಸನ್ನ ಈ ರೀತಿಯ ಪರ್ಯಾಯಗಳ ಚಿಂತನೆಯಲ್ಲಿ ತೊಡಗಿದ್ದಾರೆ ಎನ್ನಿಸುತ್ತದೆ.



ಕೃತಿ: ಯಂತ್ರಗಳನ್ನು ಕಳಚೋಣ ಬನ್ನಿ
ಲೇಖಕ: ಪ್ರಸನ್ನ
ಪ್ರಕಾಶನ: ಓಂಟಿದನಿ ಪ್ರಕಾಶನ ಹೆಗ್ಗೋಡು
ಪುಟ: 235 ಬೆಲೆ: 140
ಫೋ: ಗುಡದೂರು
ಮೊ: 9880757380

ಬರವಣಿಗೆಯ ಒಟ್ಟಂದದಲ್ಲಿ ಹೇಳಬಹುದಾದರೆ, ಈ ಕೃತಿ ಗ್ರಾಮಸ್ವರಾಜ್ಯದ ಸ್ಥಾಪನೆ ಹಾಗೂ ಕಾಯಕ ಸಂಸ್ಕೃತಿಗಳನ್ನು ಎತ್ತಿ ಹಿಡಿದು ಪ್ರತಿಪಾದಿಸುತ್ತದೆ. ಇಲ್ಲಿ ಕ್ಷುದ್ರತೆಗಳನ್ನೆ ವಿಜೃಂಭಿಸುವ ಮಾಧ್ಯಮಗಳಿಂದ ಹಿಡಿದು, ದ್ವಂದ್ವ ನೀತಿಯ ಧಾರ್ಮಿಕ ಸಂಸ್ಥೆಗಳನ್ನು ಪ್ರಸನ್ನ ಪರೀಕ್ಷಿಸುತ್ತಾರೆ. ಇದರ ಅರ್ಥ ತೀವ್ರಗಾಮಿ ಎಡಪಂಥೀಯರಂತೆ ಧರ್ಮ/ನಂಬಿಕೆ/ದೇವರುಗಳನ್ನು ಪ್ರಸನ್ನ ಸಾರಾಸಗಟಾಗಿ ತಿರಸ್ಕರಿಸುವುದಿಲ್ಲ, ಬದಲಾಗಿ ರಾಮನಂತಹ ಪುರಾಣದ ವ್ಯಕ್ತಿತ್ವವನ್ನು ನಮ್ಮ ಕಾಲದಲ್ಲಿ ಅರ್ಥ ಮಾಡಿಕೊಳ್ಳುವ ಬಗೆಯನ್ನು ಇವರು ನಿರೂಪಿಸುತ್ತಾರೆ. ರಾಮ ಇವರ ಪ್ರಕಾರ ಶ್ರಮಸಂಸ್ಕೃತಿಯ ಹಿನ್ನಲೆಯವನು. ನಂಬಿಕೆ/ದೇವರುಗಳನ್ನು ತೀವ್ರವಾಗಿ ನಿರಾಕರಿಸುವ ವಾದ ನಮ್ಮ ಸಮಾಜವನ್ನು ತಲುಪದೆ ದಯನೀಯವಾಗಿ ಸೋಲಪ್ಪಿದೆ. ದಿನದಿಂದ ದಿನಕ್ಕೆ ಬಲಪಂಥದತ್ತ ಚಲಿಸುತ್ತಿರುವ ನಮ್ಮ ಸುತ್ತಮುತ್ತಲಿನ ಜನರೇ ಈ ವೈಫಲ್ಯಕ್ಕೆ ಅತ್ಯುತ್ತಮ ಉದಾಹರಣೆ. ಹಾಗಿದ್ದರಿಂದಲೇ ಪ್ರಸನ್ನ ಅವರು 'ಸಮುದ್ರೋಲ್ಲಂಘನೆಯನ್ನು ವಿರೋಧಿಸುವ ಯತಿಗಳು ಐಷಾರಾಮಿ ಕಾರಿನಲ್ಲಿ ಪ್ರಯಾಣಿಸುವುದೇಕೆ?' ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರೂ ನಮ್ಮ ದೈನಂದಿನ ಬದುಕಿಗೆ ಬೇಕಾದ ಸರಳ ಆಧ್ಯಾತ್ಮಿಕತೆಯನ್ನು ನಿರಾಕರಿಸುವುದಿಲ್ಲ. ಯಂತ್ರಗಳು ತಂದಿಟ್ಟ ಏಕತಾನತೆ ಹಾಗೂ ನಿರ್ಮಿಸಿದ ಸಿದ್ಧ ಮಾದರಿಗಳನ್ನು ಮುರಿಯುವ ಎಲ್ಲ ಬಗೆಯ ಆಕರಗಳನ್ನು ಲೇಖಕರು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಹೀಗಿದ್ದೂ, ನವನಾಗರಿಕತೆಯ ಮತ್ತ ವಿಲಾಸದಲ್ಲಿ ಮುಳುಗಿರುವ ಈ ಕಾಲದಲ್ಲಿ ಸರಳ ನೈತಿಕತೆಯನ್ನು ಪ್ರತಿಪಾದಿಸುವುದು ಪ್ರಾಯೋಗಿಕವೇ? ಎಂಬ ಪ್ರಶ್ನೆ ಓದುಗರನ್ನು ಕಾಡಬಹುದು. ಆದರೆ ಇದು ಪ್ರಾಯೋಗಿಕ ಎಂದು ಕೃತಿ ನಿರೂಪಿಸುತ್ತದೆ. ಹಾಗೆಯೇ ಇದು ಪ್ರಸನ್ನ ಅವರ ಪರ್ಯಾಯ ಆರ್ಥಿಕ ಚಿಂತನೆಯೂ ಹೌದು. ಹಲವು ಭಿನ್ನಾಭಿಪ್ರಾಯಗಳು ಹಾಗೂ ದ್ವಂದ್ವಗಳಿಂದ ಈ ಕೃತಿ ಹೊರತಾಗಿಲ್ಲವಾದರೂ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ವಿಭಿನ್ನ ತರಂಗಗಳನ್ನು ಎಬ್ಬಿಸುವ ಶಕ್ತಿ ಇದಕ್ಕಿದೆ.

● ಟಿ. ಅವಿನಾಶ್

ಬಾಬಾಬುಡನ್‌ಗಿರಿಯಲ್ಲಿ ಬಿಜೆಪಿ ಭಯೋತ್ಪಾದನೆ

ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ... ಹೊತ್ತು ಸೌಹಾರ್ದತೆಯ ಸುಳಿವಿಲ್ಲ, ಅಲ್ಲಿ ಸೂಫಿ ಪರಂಪರೆ ಉಳಿ... ಅದೀಗ ಸಂಪೂರ್ಣ ಮನುವಾದಿ-ಕೋಮುವಾದಿ ಸಂಘಪರಿವಾರ... ಮುಷ್ಟಿಯೊಳಗೆ ಸಿಲುಕಿ ತನ್ನ ಐತಿಹಾಸಿಕತೆಯನ್ನು ಕಳೆದುಕೊಳ್ಳತೊಡಗಿ...

ಕಳೆದ ವರ್ಷ ಗುಹೆಯ ಮೇಲ್ಚಾವಣಿ ಕುಸಿದು ಬಿದ್ದಿದ್ದರಿಂ... ಬಿಜೆಪಿಗಳಿಗೆ ತಮ್ಮ ಕಿತಾಪತಿಗಳನ್ನ ಮಾಡಲು ಸಾಧ್ಯವಾಗಿರಲಿಲ್ಲ. ಆದರೆ... ಬಿಜೆಪಿ ಸರ್ಕಾರ ಮತ್ತು ನಾಯಕರು ಇದ್ದಕ್ಕಿದ್ದಂತೆ ಚಾವಣಿಯ ದು... ಕಾರ್ಯದ ನೆಪದಲ್ಲಿ ದರ್ಗಾ ಮೇಲೆ ದಾಳಿ ಮಾಡಿ, ದತ್ತ ವಿಗ್ರಹ... 'ಗುದ್ದಲಿಪೂಜೆ' ನೆರವೇರಿಸಿ ತನ್ನ ರೌದ್ರಾವತಾರವನ್ನು ಜನರ ಮುಂ... ಪ್ರದರ್ಶಿಸಿದ್ದಾರೆ. ಅಲ್ಲದೆ ಈ ಸ್ಥಳ ಹಿಂದೂಗಳದ್ದಾಗಲಿ, ಹಿಂದೂ ಅರ್ಚ... ನೇಮಕವಾಗಲಿ ಎಂಬ ಪ್ರಚೋದನಾಕಾರಿ 'ಪ್ರಾರ್ಥನೆ' ಮಾಡಿದ್ದಾರೆ.

ಯಾವುದೇ ಕಟ್ಟಡಗಳ ಕಾಮಗಾರಿಗಳು ನಡೆಸುವಾಗ ಅದರ ತಳಪಾ... ಹಾಕುವ ಮೊದಲಿಗೆ ಮಾತ್ರವೇ ಗುದ್ದಲಿಪೂಜೆ ಮಾಡಲಾಗುತ್ತದೆ. ಆ... ಬಿಜೆಪಿ ನಾಯಕರು ಬಾಬಾಬುಡನ್‌ಗಿರಿಗೆ ಬಂದು ಮಾಡಿರುವುದೇನ... ಗುದ್ದಲಿ ಪೂಜೆಯ ನೆಪದಲ್ಲಿ ದಂಡು ಕಟ್ಟಿಕೊಂಡು ಬಂದ ನಾಯಕ... ವಿವಾದಿತ ಸ್ಥಳದಲ್ಲೇ ದತ್ತಮೂರ್ತಿಯಿಟ್ಟು ಪೂಜೆಯನ್ನೇಕೆ ಮಾಡಿದರು... ಈ ಸ್ಥಳ ಹಿಂದೂಗಳ ಪೂಜಾ ಸ್ಥಳವಾಗಲಿ ಎಂಬ ಪ್ರಚೋದನಾಕಾ... 'ಸಂಕಲ್ಪ' ತೊಡುವ ಉದ್ದೇಶವೇನಿತ್ತು?

ಬಿಸಿಲು ಪತ್ರ

ದೇಶದ ಸರ್ವೋಚ್ಚ ನ್ಯಾಯಾಲಯ... ತಡೆಯಾಜ್ಞೆಯನ್ನು ಲೆಕ್ಕಿಸದ ... ಫ್ಯಾಸಿಸ್ಟರು ನಿಷೇಧಿತ ಸ್ಥಳದಲ್ಲಿ ಶಾ... ಭಂಗದೊಂದಿಗೆ ನ್ಯಾಯಾಂಗ ನಿಂದ... ಮಾಡಿದ್ದಾರೆ. ಜಿಲ್ಲಾಡಳಿತವೂ ಇದ... ಯಾವ ನಿರ್ಬಂಧವನ್ನೂ ವಿಧಿಸ... ಬಿಜೆಪಿ ನಾಯಕರ ಎಲ್ಲಾ ಚಟುವಟಿಕೆಗಳಿಗೆ ಸಂಪೂರ್ಣ ಅವಕಾಶ ಮಾಡಿಕೊಟ್ಟದ್ದು ಆತಂಕಕಾರಿ ಸಂಗತಿಯಾಗಿ...

ಕಳೆದ ಡಿಸೆಂಬರ್ 1ರಂದು ಈ ದೇಶದ ಸರ್ವೋಚ್ಚ ನ್ಯಾಯಾಲಯ... ಹೇಳಿದ್ದೇನು? ತಾನು ಆದೇಶ ನೀಡುವವರೆಗೂ 1984 ರ ಫೆಬ್ರವರಿ 2... ರಂದು ಕರ್ನಾಟಕ ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಈ ಸ್ಥಳದ... ಯಾವ ಸ್ಥಿತಿ ಕಾಪಾಡಿಕೊಂಡು ಬರಬೇಕೆಂದು ಆದೇಶ ನೀಡಿದ್ದರೋ... ಅದನ್ನೇ ಪಾಲಿಸಬೇಕೆಂದು ಹೇಳಿತ್ತು. ಇಂತಹ ತೀರ್ಪನ್ನು ಗುಹೆಯ... ದುರಸ್ತಿ ನೆಪದಲ್ಲಿ ಬಿಜೆಪಿ-ಸಂಘಪರಿವಾರ ಮಣ್ಣುಪಾಲು ಮಾಡಿದೆ.

ಇದಲ್ಲದೆ ಜಿಲ್ಲಾಡಳಿತವು ಗುಹೆಯ ಸ್ವರೂಪವನ್ನೇ ಬದಲಿಸ... ಹೊರಟು ನಿಂತಂತಿದೆ. ಯಾಕೆಂದರೆ ದುರಸ್ತಿಗೆ ಮುನ್ನ ಸಂಬಂಧಪ... ಶಾಖಾದ್ರಿಗಳನ್ನಾಗಲೀ, ಸಾರ್ವಜನಿಕರನ್ನಾಗಲೀ ಅಥವಾ ಇತರೆ ಆಸಕ್ತ... ಅಭಿಪ್ರಾಯಗಳನ್ನಾಗಲೀ ಸಂಗ್ರಹಿಸಿಲ್ಲ. ಎಲ್ಲವೂ ತನ್ನ ನಿರ್ಧಾರವೆಂಬಂ... ದುರಸ್ತಿ ಮಾಡಲು ಜಿಲ್ಲಾಡಳಿತ ಮುಂದಾಗಿರುವುದೂ ಆತಂಕಕಾ... ಸಂಗತಿಯಾಗಿದೆ. ಸಂಘಪರಿವಾರ ಮತ್ತು ಬಿಜೆಪಿ ಸರ್ಕಾರ ಮಾಡುತ್ತಿರು... ಇಂತಹ ಹುನ್ನಾರಗಳನ್ನು ಜನರು ಅರ್ಥಮಾಡಿಕೊಳ್ಳದಷ್ಟು ಅಮಾಯಕರೇನ... ಬದುಕೇ ಹೋರಾಟವೆಂಬಂತೆ ಜೀವಿಸುತ್ತಿರುವ ಇಲ್ಲಿನ ಬಡಜನರ... ಕೋಮು ವಿಷಬೀಜ ಬಿತ್ತುತ್ತಿರುವ ಸಂಘಪರಿವಾರಿಗಳು ಜನರನ್ನು... ಹಿಂದೂ-ಮುಸ್ಲಿಂ ಎಂದು ಬೇರ್ಪಡಿಸಿ ಅದರಿಂದ ರಾಜಕೀಯ ಲಾಭ... ಪಡೆಯುವ ಹುನ್ನಾರದ ಚಟುವಟಿಕೆಯಲ್ಲಿ ತೊಡಗಿದ್ದಾರಷ್ಟೆ. ಇದು ಜನತೆ... ಒಂದಲ್ಲ ಒಂದು ದಿನ ಅರ್ಥವಾಗಲಿದೆ.

ಪ್ರಸ್ತುತ ಮಲೆನಾಡಿನಲ್ಲಿರುವ ಇತರೆ ಹಲವಾರು ಸಮಸ್ಯೆಗಳು ಬೆಳಕಿ... ಬಾರದಂತೆ ಮತ್ತು ಜನರ ಗಮನವನ್ನ ಬೇರೆಡೆಗೆ ಹರಿಸುವುದು ... ನಾಯಕರ ಹುನ್ನಾರವಾಗಿದೆ. ಇಲ್ಲಿ ತಲೆತಲಾಂತರದಿಂದ ಗುಡಿಸಲಿನಂತ... ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿರುವ ಬಡಜನರನ್ನು, ಬಡರೈತರನ್ನು ಮೀಸಲು ಅರಣ್ಯದ ಹೆಸರಲ್ಲಿ, ಉದ್ಯಾನವನದ ಹೆಸರಲ್ಲಿ, ಗಣಿಗಾರಿಕೆಯ ಹೆಸರಲ್ಲಿ ಒಕ್ಕಲೆಬ್ಬಿಸಲಾಗುತ್ತಿದೆ. ಅವರ ಅರಣ್ಯರೋದನ ಇತರರಿಗೆ ಕೇಳಿಸದಿರಲಿ, ಜನಪ್ರತಿಭಟನೆಗಳ ಸದ್ದಡಗಲಿ ಎಂಬ ಉದ್ದೇಶದಿಂದ ಇದು ಫ್ಯಾಸಿಸ್ಟರು ಮಾಡುತ್ತಿರುವ ವ್ಯವಸ್ಥಿತ ಹುನ್ನಾರವಲ್ಲದೆ ಬೇರೇನೂ ಅ... ಗುರು ದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ದರ್ಗಾದ ಐತಿಹಾಸಿಕತೆಯ... ಪ್ರಕಾರ ಆ ಸ್ಥಳದಲ್ಲಿ ಯಾವ ಧರ್ಮವನ್ನೂ ದ್ವೇಷಿಸದ, ಬೆಂಕಿಯಾಗ... ಬೆಳಕಿನಂತಹ, ಮನುಷ್ಯರೊಳಗೆ ಶಾಂತಿ ಸಹಬಾಳ್ವೆಯನ್ನು ಮೂಡಿಸುವಂತ... ಸೂಫಿ ಪರಂಪರೆಯಿತ್ತು. ಬಾಬಾಬುಡನ್ ಸ್ವಾಮಿ ಅಲ್ಲಿನ ಸೂಫಿ ಸಂತನಾಗಿ... ಈತ ಅರೇಬಿಯಾದಿಂದ ಕಾಫಿ ಬೀಜಗಳನ್ನು ತಂದು ಇಲ್ಲಿನ ಬೆಟ್ಟದ... ಬೆಳೆದು ಚಿಕ್ಕಮಗಳೂರು ಜಿಲ್ಲೆ ಕಾಫಿಯ ತವರೂರಾಗಲು ಕಾರಣನಾಗಿ...

ಸತ್ಯಸಂಗತಿಯೆಂದರೆ ಜನರು ಬಾಬಾಬುಡನ್ ಸ್ವಾಮಿಯ ಭಕ್ತರಾ... ಮಾತ್ರವೇ ಗುಹೆಗೆ ಧಾವಿಸುತ್ತಿರಲಿಲ್ಲ, ಕಾಫಿ ಬೀಜ ತಂದಾತನ ಸಮಾಧಿಯನ್ನು ನೋಡಲು ಬರುತ್ತಿದ್ದರು. ಇಲ್ಲಿ ಯಾವ ರೀತಿಯ ಮತಾಂಧತೆಯ... ಇರಲಿಲ್ಲ, ಎಲ್ಲ ತರಹದ ಮನುಷ್ಯರು, ಆಸ್ತಿಕರು, ನಾಸ್ತಿಕರು, ಪರಿಸ... ಪ್ರೇಮಿಗಳು, ಪ್ರವಾಸಿಗರು, ಲೇಖಕರು, ಬರಹಗಾರರು ಹೋಗಿಬರು... ಸೌಹಾರ್ದ ತಾಣವಾಗಿತ್ತು.


ಆದರೀಗ ಮನುವಾದವನ್ನೇ ತಮ್ಮ ಗ್ರಂಥವೆಂದು ಪ್ರತಿಪಾದಿಸು... ಸಂಘಪರಿವಾರಿಗಳು ಎಲ್ಲ ಮನುಷ್ಯರೊಳಗೆ ಸೌಹಾರ್ದತೆ ಬಯಸಿ... ಬಾಬಾಬುಡನ್ ಸೂಫಿ ಸಂತನನ್ನು ಆಕ್ರಮಣಕಾರಿ ಧಾರ್ಮಿಕ ಮುಖಂಡನೆಂಬಂತೆ ಬಿಂಬಿಸುತ್ತ, ಮನುವಾದವನ್ನು ಸಂಪೂರ್ಣವಾ... ತಿರಸ್ಕರಿಸಿದ್ದ ಅವೈದಿಕ ದತ್ತನನ್ನು ವೈದಿಕನೆಂಬಂತೆ ಬಿಂಬಿಸುತ್ತ ಸೂ... ಸಂತನೋರ್ವನ ವಿರುದ್ಧ ಅವೈದಿಕ ದತ್ತನನ್ನು ಎತ್ತಿಕಟ್ಟತೊಡಗಿದೆ. ಒಟ್ಟಿನ... ಬಾಬಾಬುಡನ್ ಸ್ವಾಮಿಯ ಹೆಸರಲ್ಲಿ ಬಿಜೆಪಿ ಮತ್ತು ಸಂಘಪರಿವಾ... ಭಯೋತ್ಪಾದನೆಯನ್ನೇ ಮಾಡತೊಡಗಿವೆ.

- ಕಿರುಗುಂದ ರಫೀಕ್, ಮೂಡಿಗೆ...

...ಂಡುಸುರ್ದು ಚರ್ಮಕ್ಕಿಂತ ಹೆಂಗುಸುರು ಚರ್ಮ ಇಸ್ಮೂತು ಜುಮ್ಮಕ್ಕ!"

...ನಲ್ಲಿ ಪಿತೃಪಕ್ಷದ ಸಂಭ್ರಮ. ಜುಮ್ಮಿಗೆ ಕೂತು ...ಲಾಗದಷ್ಟು ಕೆಲಸವಿದ್ದರೂ, ಹೋಟೆಲ್ ಬಳಿಗೆ ...ಣೂ ಬಂದರೆ ಊಟಕ್ಕೆ ಕರೆಯುಬೇಕೆಂದು ಬಂದಿ ...ನ್ನರಲ್ಲಾಗಲೇ ಆಡು ಕುರಿ ಚರ್ಮದ ವ್ಯಾಪಾರಿ ...ತೀಫ್ ಮತ್ತು ಮುನೀರ ಬಂದು ಕಾಫಿ ಕುಡಿಯು ...ಜೊತೆಗೆ ಏರಿದ ದನಿಯಲ್ಲಿ ಮಾತನಾಡುತ್ತಿದ್ದರು. ...ಉಗ್ರಿ ವಿಚಾರಣೆಗೊಳಪಡಿಸಿದಂತೆ ಮಾತನಾಡುತ್ತ ...ಲ್ಲ ಲತೀಫ, ಕೇಳಕ್ಕೂ ಒಂದು ಬ್ಯಲೆ ಬ್ಯಾಡವೇನೊ. ...ನ್ನಕ್ಕೆ ಸರ್ಕಾರದ ಜೊತೆಗೆ ನೀವೂ ಸೇರಿಕೊಂಡಿ ... ಎಂದ.

...ಕ್ಕ ಅಂಗಂತೀ?" ಎಂದಳು ಜುಮ್ಮಿ.



...ಇನ್ನೆನೆ, ವಾತನ ಚರ್ಮಕ್ಕೆ ನೂರುಪಾಯಿ ... ಆಡಿನ ಚರ್ಮಕ್ಕೂ ಐವತ್ತು ರೂಪಾಯಿ ... ಇಷ್ಟಗ್ಗವಾಗಿ ಕೇಳಕೆ ಮನಸ್ಯಂಗೆ ಬತ್ತು ಅಂತ" ...ಕೇಳನ ಅಂತ ಮುನೀರನು ಲತೀಫನು ಕುಂತು ...ಂಡು ಬಂದವ್ರುರೆ, ಅಲವೇನೊ ಲತೀಫಣ್ಣ?" ...ಜುಮ್ಮಿ.

...ದು ಹೇಳದು ಹಂಡ್ರೆಡ್ ಪರಸೆಂಟು ಕರಟ್ಟು ... ವಿಧಾನಸಭೆ ವಳಗಡೆ ನಾವು ಸಭೆ ಮಾಡಿ ... ತಗೊಂಡಿ ಬಂದಿದ್ದಿವಿ. ಅದ್ರಿಂದ ನೀವು ಅಷ್ಟು ...ಡ್ತೈಬೇಕು" ಎಂದ ಲತೀಫ.

...ೀ ಲತೀಫ, ಯಾರ ಹತ್ರ ಬುಡ್ತಾಯಿದ್ದಿಲ ನಿನ್ನ ...ದು? ಇವತ್ತು ಒಂದು ಬರಮುಡ ಚೆಡ್ಡಿ ...ಕು ಅಂದ್ರೆ ಅರವತ್ತು ರೂಪಾಯಿ ಕಂಡ್ಯ. ಅಂತದ್ರುಲಿ ...ಡಿನ ಚರ್ಮಕ್ಕೆ ಐವತ್ತು ರೂಪಾಯಿ ಕೊಡ್ತಿನಿ ...ಲ್ಲಾ" ಎಂದುಕೊಂಡು ವಾಟಿಸ್ಸೆ ಬಂದ.

...ಟಿಸಣ್ಣ, ನಿನಗೇನು ಗೊತ್ತು ವ್ಯಾಪಾರ. ಚರಮದ್ದು ...ಮಾಡಿದ್ರೆ, ಗೊತ್ತಾಗ್ತಿತ್ತು."

...ಟೆ ಇರುವಾಗ ನಾವ್ಯಾಕ್ಲ ಚರಮದ ವ್ಯಾಪಾರ ...ಇವತ್ತು ಚರಮದ ರೇಟೆಷ್ಟು ಅಂತ ನಮ್ಮೂರ್ರಾ ...ಗೊತ್ತಿಲ್ಲ. ಅದ್ಕೆ ನೀನು ಬಂದು ಆಡಿಗೈವತ್ತು, ...ನೂರು, ಟಗರಿಗೆ ನೂರು ಅಂತ ನೀನೇ ರೇಟ್ ...ಬಿದಿದ್ದಿ ಅಲವೇನ್ಲ?"

...ಟಿಸಣ್ಣ, ನಾನು ಬಲವಂತ ಮಾಡ್ತಾಯಿಲ್ಲ, ಅಷ್ಟು ...ದ ಟೆಂಪೋ ಮಡಿಕಂಡಿ ಬಂದಿದ್ದಿನಿ. ಅದರದ್ದು ...ಎಷ್ಟು ಗೊತ್ತಾ? ಚರ್ಮ ತಗಂಡು ಹೋಗಿ ...ವರಿ ಮಡಗ್‌ಬೇಕು. ಅದರದ್ದು ಕೂಲಿ ಎಷ್ಟು ಗೊತ್ತಾ? ಸುಮ್ನೆ ನೀನು ಸಂತೇಲಿ ಮಾತಾಡ್ತಿ ನೋಡು ಅಂಗೆ ಮಾತಾಡಿದ್ರೆ ಏನು ಪರ್‌ಯೋಜ್ನ ಹೇಳು" ಎಂದ ಲತೀಫ.

"ನೋಡೋ ಲತೀಫ, ದೇವರಾಣೆ ನೀನು ಒಂದು ಚರ್ಮಕ್ಕೆ ಕನಿಷ್ಠ ಇನ್ನೂರುಪಾಯಿ ಲಾಭ ಮಾಡ್ತಿ. ಇವತ್ತು ನಮ್ಮೂರಲ್ಲಿ ಏನಿಲ್ಲಾ ಅಂದ್ರು ನೂರೈವತ್ತು ಮರಿ ಕೂದವ್ರುರೆ. ನೂರೈವತ್ತು ಇಂಟು ಇನ್ನೂರು ಏಸ್ಸಾಯ್ತು ನೀನೇ ಹೇಳು" ಎಂದ.

ಆಗ ಹಠಾತ್ತನೆ ಎದ್ದ ಮುನೀರ,

"ತಿರುಪ್ತಿ ಯೆಂಕ್ಟೇರ್‌ಸ್ಪುರದು ಆಣೆ ಮಾಡ್ತಿ ಹೇಳ್ತೀನಿ ವಾಟಿಸ್ಸೆ, ನಮ್ಗೆ ಅಷ್ಟು ಲಾಭ ಸಿಕ್ಕಿದ್ರೆ ನಂದು ತಲೆ ಬೋಳಿಸ್ಕಂಡು ಬಿಡ್ತಿನಿ" ಎಂದ.

"ತಿರುಪ್ತಿ ಯಂಗಟೇಸ್‌ಪುರನಿಗೆ ನೀನ್ಯಂಗೆ ತಲೆ ಕೊಡ್ತಿಯೋ, ಸಾಬಿ ಕೂದ್ಲ ಒಪ್ತನ ಶ್ರೀನಿವಾಸ" ಎಂದ ಉಗ್ರಿ.

"ಒಪ್ಪದಾಮ್ಯಾಲೆ ಕಣೊ ಉಗ್ರಿ. ಕೊಡಬೇಕಲ್ಲ ಇವುನು. ಕೊಟ್ಟು ಅವುನಿಗೇ ಪಾಯ್ದೆ. ಆರು ತಿಂಗಳು ಹಜಾಮತಿ ಮಾಡಿಸಿಗಳಂಗಿಲ್ಲ, ತಲಿಗೆ ಸೋಪಾಕಂಗಿಲ್ಲ, ಯಣ್ಣೆ ಹಚ್ಚಂಗಿಲ್ಲ, ಮಕವ ಎಲ್ಲಿಗಂಟಲಾರ ತ್ವಳಕಬವುದು. ಅಲವೇನೊ ಮುನೀರ?"

"ವಾಟಿಸಣ್ಣಾ ನಿಮ್ದು ಅನುಭವದ್ದು ಮಾತ ನಾನು ಒಪ್ತಿನಿ. ಆದ್ರೆ ಚರಮದ್ದು ಲಾಭ ಅಷ್ಟು ಬರಲ್ಲ."

"ಸರಿ ಕಂಡ್ಯ, ಆಡಿನ ಚರ್ಮದ ರೇಟ್ ಅರ್ಧಕ್ಕರ್ಧ ಇಳಿಸಿದ್ದಿಯಲ್ಲ ಯಾಕ್ಲ?"

"ಯಾಕೆ ಅಂದ್ರೆ ಆಡು ಹೆಂಗ್ಸು, ಹೋತ ಗಂಡ್ಸು."

"ಅಂಗರೆ ಹೆಂಗಸರ ಚರ್ಮನೆ ಬ್ಯಾರೆ, ಗಂಡಸರ ಚರ್ಮನೆ ಬ್ಯಾರೆ ಅಂತಿಯಾ?"

"ಮತ್ತೆ? ಈ ಜುಮ್ಮಕ್ಕಂದು ಚರ್ಮ ಇಸ್ಮೂತು. ಅದೇ ನಿಂದು ಚರ್ಮ ರಫ್ಪು, ಇಬ್ಬರದು ಚರ್ಮಕ್ಕು ಒಂದೇ ರೇಟು ಮಾಡಕ್ಕಾಗ್ತವ?"

"ಜುಮ್ಮಕ್ಕನ ಚರ್ಮ ಯಾವಾಗ ಮುಟ್ಟಿದ್ದೇ?"

"ಏನು ಮಾತು ಅಂತ ಆಡ್ತಿ ವಾಟಿಸ್ಸಣ್ಣ. ನಮ್ದು ಹೆಂಗುಸುರು ಜುಮ್ಮಕ್ಕ ಒಂದೇ ಅಲವಾ" ಎಂದು ಮುನೀರ ನಕ್ಕ.


"ಒಂದೇ ಆಗಕ್ಕೆ ಸಾಧ್ಯ ಇಲ್ಲ ಕಂಡ್ಯ ಮುನೀರ. ನಮ್ಮ ಜುಮ್ಮಕ್ಕನಿಗಿಂತ ನಿಮ್ಮೊರ ಚರ್ಮ ಇನ್ನು ಸ್ಮೂತು. ಯಾಕೆ ಅಂದ್ರೆ ನಮ್ಮ ಜುಮ್ಮಕ್ಕ ಚಿಕ್ಕುಡುಗಿಲಿ ಕೂಲಿ ಮಾಡ್ಯವುಳೆ, ಯಮ್ಮೆ ಮೇಸ್ಯವುಳೆ, ವಲ ಕೂದವುಳೆ. ಆದ್ರೆ ನಿಮ್ಮೆಂಗಸರು ಇಂತ ಕ್ಯಲಸ ಮಾಡಿದ್ದರ್ಲ? ಯಾವಾಗ್ಲು ಗೂಡ್ವಳಗೆ ಇಟ್ಟಿದ್ದಿ. ಅದ್ಕೆ ನಿಮ್ಮೊರ ಚರಮ ನಮ್ಮೊರಗಿಂತ್ಲೂ ಸ್ಮೂತು" ಎಂದ ವಾಟಿಸ್ಸೆ. ಆಗ ಸೀರ,

"ಅದಕಿಂತ್ಲುವೆ ಈ ಮುನೀರ ನಮ್ಮೆಂಗಸರತ್ರ ಹಿಂಗೆ ಮಾತಾಡ್ತನಲ್ಲಾ, ಅವುರೆಂಗಸರತ್ರ ಅಂಗೆ ಮಾತಾಡಕ್ಕಾದತ್ಲ? ನಾವೇನಾರ ಮನೆತಕ್ಕೋದ್ರೆ ಜಾರೆರೆ ಅಂದರ್ ಜಾರೆ ಅಂತ ಹೆಡತಿಗೆ ಸನ್ನೆ ಮಾಡ್ತನೆ" ಎಂದ.

"ಚಿಗಪ್ಪ ನೀನೇಳದು ಹಳೆ ಸುದ್ದಿ, ಆದ್ರೆ ಈ ಸಾಬರು ಹೆಂಗಸರ ಮನೆವಳಗೆ ಸುಖವಾಗಿಟ್ಟಿರದ್ಯು, ಚರಮದ ರೇಟ್ ಐವತ್ತು ರೂಪಾಯಿಗೆ ಇಳಿಸಿರದ್ಯು ಸಮಂದ ಅದೆ. ಇಷ್ಟಕೆ ಮುಗಿಲಿಲ್ಲ, ಕಾಳು ಕಡ್ಡಿ ರೇಟುನೂ ಅಂಗೆ ಇಳಿಸಿರತನೆ. ರೈತನ ಕಣ ಖಾಲಿಯಾದೇಟಿಗೆ ಏರಿಸಿಬುಡ್ತನೆ" ಎಂದು ವಾಟಿಸ್ಸೆ ಹೇಳುತ್ತಿದ್ದಾಗ ತಿಮ್ಮನ ಹೆಂಡತಿ ಓಡೋಡಿ ಬಂದು,

"ಲೇ ಲತೀಫಣ್ಣಾ ಹತ್ತು ರೂಪಾಯಿ ಕದಿಮೆ ಕೊಟ್ಟಿದ್ದಿಯಲ್ಲಾ ನಿನಿಗೇನು ಗ್ಯಾನಿಲ್ಲವೆ" ಎಂದು ದುಡ್ಡನ್ನು ಅವನ ಮುಖಕ್ಕೇ ಎಸೆದು ಕೈಗೆ ಸಿಕ್ಕ ಚರ್ಮ ಎಳೆದು ಕೊಂಡು ಹೊರಟುಬಿಟ್ಟಳು.

"ನೋಡಿಂತ ಚೌಕಾಸಿ ಬ್ಯಾರೆಯ" ಎಂದು ವಾಟಿಸ್ಸೆ ನಕ್ಕ. ಲತೀಫ ಬಿದ್ದನೋಟುಗಳನ್ನು ಆರಿಸಿಕೊಂಡು ಓಡಿಹೋಗಿ ತಿಮ್ಮನ್ನ ಹೆಂಡತಿ ಮುಂದೆ ಹಿಡಿದು,



"ಕೋಪ ಮಾಡ್ಕಬ್ಯಾಡ ತಿಮ್ಮಕ್ಕ. ತಗೊ ಬೇಕಾದ್ರೆ ಇನ್ನು ಹತ್ತು ಜಾಸ್ತಿ ತಗೊ" ಎಂದು ಹಣ ಕೊಟ್ಟು ಚರ್ಮ ತಂದು ರಾಶಿಗೆ ಎಸೆದ. ಆಗ ಜುಮ್ಮಿ,

"ಸಂದಿಕೆ ಊಟ ಮಾಡಕ್ಕೆ ಬಾರೊ ಲತೀಫ. ಮುನೀರ ನೀನು ಬಾರೊ" ಎಂದಳು.

"ಅವುರೆಲ್ಲಿ ಬತ್ತರಕ್ಕ. ಅವುರು ಬರಬೇಕಾದ್ರೆ ಮರಿಯ ಅವುರೇ ಕುಯ್ಯಬೇಕು. ಕುಯ್ಯುಸ್ತಿಯ ಹೇಳು" ಎಂದ ವಾಟಿಸ್ಸೆ.

"ಅವುನ ಕೈಲಿ ಕುಯ್ಸಿದ್ರೆ ನಮ್ಮ ದೇವರು ಒಪ್ತನೇನ್ಲ"

"ನೀನು ಯಾರ್ದು ಕೈಲಾರ ಕುಯ್ಸು ಜುಮ್ಮಕ್ಕ. ಚರ್ಮ ಮಾತ್ರ ನಾನೇ ಸುಲ್ದಿ ಕೊಡ್ತಿನಿ."

"ಆಯ್ತು, ಏಟು ಕೊಡ್ತಿಯೇಳು?"

"ಆಡೊ, ವಾತನೊ?"

"ವಾತ ಕಣೊ. ಇಪ್ಪತ್ತೈದು ಕೆ.ಜಿ. ಮ್ಯಾಲ ಬತ್ತದೆ" ಎಂದಳು ಜುಮ್ಮಿ.

"ಏ ಲತೀಫ್, ನಮ್ಮ ಜುಮ್ಮಿ ವಾತನ್ನ ನೋಡಬೇಕು ನೀನು. ಅಂಗೆ ರಾಜಶೇಖರ ರೆಡ್ಡಿ ನೋಡಿದಂಗಾಯ್ತದೆ" ಎಂದ ಉಗ್ರಿ.

"ಅಂಗಾದ್ರೆ ಜುಮ್ಮಕ್ಕನ ರೆಡ್ಡಿ ಕತೆ ಇವತ್ತು ಖತಂ ಆಗ್ತದೆ" ಎಂದ ಲತೀಫ. ಚರ್ಮ ತಬ್ಕೊಂಡು ಪ್ಯಾಸೆ ಕಡೆ ಹೊರಟ.

"ಅಲ್ಲಾ, ಒಂದೇ ವಾರಕ್ಕೆ ಮರತೋದರಲ್ಲೊ ರೆಡ್ಡಿ?" ಎಂದ ಸೀರ.

"ಮರತೋಗದೆ ಇನ್ನೇನು ಚಿಗಪ್ಪ, ಅವಾಗವಾಗ ನ್ಯನಿಸಿಗಳಕ್ಕೆ ಅವುನೇನು ದೇವರಾಜ ಅರಸನೊ, ಜೆ.ಎಚ್. ಪಟೇಲ್ರೊ ಹೇಳು."

"ಅವುರಬುಡು, ವಜಕಟ್ಟಾದ ಜನ. ಅಂಥೋರಿಗೆ ಈ ರೆಡ್ಡಿ ಹೋಲಸಕ್ಕಾದತೆ?"

"ಚಿರಂಜೀವಿ ಪಾರ್ಟಿ, ತೆಲುಗು ದೇಶಂ ಪಾರ್ಟಿ ಓಟಂಚಗಂದಿದ್ಕೆ ತಿರುಗ ಗೆದ್ದು ಬಂದು ಮುಖ್ಯಮಂತ್ರಿ ಆಗಿದ್ದ. ಅದ್ಕೆ ಏನು ರಾಷ್ಟ್ರನಾಯಕನ್ನ ಮ್ಯರಿಸಿದಂಗ ಮ್ಯರಿಸಿಬುಟ್ರು. ಪೇಪರ್‌ನೋರಂತೂ ಮೂರು ಮೂರು ಪುಟ ಬರದ್ರು. ಅದು ಏನು ಬರದವ್ರು ಅಂತೀ? ಇಲ್ಲಿ ಮೆಣಸಿನಕಾಯಿ ಬೋಂಡ ತಿಂದ, ಅಲ್ಲಿ ಕಾರಮಂಡಕ್ಕಿ ತಿಂದ, ಇದೇ ಗ್ವಾಡಿಗೆ ಉಚ್ಚೆ ಊದ ಅಂತ ಬರೀ ಇದ್ನೆ ಬರದ್ರೆ ವರತೂ ಅವುನ ರಾಜಕಾರಣ ಯಂತದು, ಮುಂದೆ ಏನು ಮಾಡಬೇಕು ಅಂತ ಇದ್ದ ಅವುನೇನು ವಾದ ಮಾಡತಿದ್ದ ಅಂತ ಯಾರೂ ಬರೀಲಿಲ್ಲ, ಬರಿಯೋ ಅಂತದೇನು ಇರಲಿಲ್ಲವೇನೊ, ಆದ್ರೆ ಇವುರದ್ಯಾಕೊ ಜಾಸ್ತಿಯಾಯ್ತಪ್ಪ" ಎಂದ ಉಗ್ರಿ.

"ಅವುನು ಹೆಲಿಕಾಪ್ಟರಲ್ಲಿ ಬಿದ್ದಮ್ಯಾಲೆ ಬಾಳ ಜನ ರಾಜಕಾರಣಿಗಳು ಹೆದ್ರಿಕಂಡು ರೈಲಲ್ಲೇ ಓಡಾಡ್ತ ಇದ್ದರಂತೆ" ಎಂದ ಸೀರ.

"ಅವುರು ರೈಲಲ್ಲಿ ಓಡಾಡೋದು ಸರಕಾರಕ್ಕೆ ದುಡ್ಡುಳಸಕ್ಕಂತೆ ಚಿಗಪ್ಪ, ಅದ್ಕೆ ರಾಹುಲಗಾಂಧಿಯಿಂದ ಹಿಡದು ಪ್ರಣಾವ್ ಮುಖರ್ಜಿವರಿಗೂ ರೈಲಲ್ಲಿ ತಿರುಗಾಡ್ತ ಅವುರೆ. ಇಂತ ಕ್ಯಲಸದಿಂದ ಸರಕಾರಕ್ಕೆ ದುಡ್ಡು ಉಳಿಯದಾದ್ರೆ ನಾನು ನನ್ನ ಸಂಬಳನೆ ಕೊಡ್ತಿನಿ ಅಂದವ್ರುನೆ ದ್ಯಾವೇಗೌಡ" ಎಂದ ವಾಟಿಸ್ಸೆ.

"ದ್ಯಾವೇಗೌಡನಿಗೆ ಯಾವ ಸಂಬಳ ಬಂದತ್ಲ?" ಎಂದ ಕಾಳಮಾವ.

"ಆಯ್ಯೋ ಇದೇನ್ ದ್ವಡಪ್ಪ ಹಿಂಕೇಳ್ತಿ. ಅವುನಿಗೆ ಪ್ರಯಾಣಭತ್ಯೆ, ವಸತಿ ವ್ಯವಸ್ಥೆ ಮಾತ್ರೆ ಖರ್ಚು ಅಂತ ವಸಿ ಬಂದತೆ. ಅದನ್ನ ತಗ್ಯದೆಯಿದ್ರು ಕಾಲ ಮಾಡೋ ಶಕ್ತಿ ದ್ಯಾವೇಗೌಡ್ರಿಗದೆ."


"ಅದ್ಕೆ ಅಂಗಂದವುನೇನೊ ತಗೊ" ಎಂದ ಸೀರ.

"ಇದ್ಯಲ್ಲ ಒಂಥರ ಬೂಟಾಟಿಕೆ ಕಂಡ್ಯ. ಹಿಂದೆ ಇದೇ ಎಸ್ಸೆಂ ಕಿಸ್ನ ಡಿಜೇಲ್ ಪೆಟ್ರೊಲು ಉಳುಸ್ತಿನಿ ಅಂತ ಮನಿಂದ ವಿಧಾನಸಬೆಗೆ ಸೈಕಲ್ಲಲ್ಲಿ ಬತ್ತಿದ್ನಂತೆ."

"ಅದು ನನಿಗೂ ಗೊತ್ತು ದ್ವಡಪ್ಪ. ಅಂತ ಕೃಷ್ಣ ಇವತ್ತು ಎಲ್ಲಿ ಉಳಕಂಡವುನೆ ಗೊತ್ತೆ? ಅವುನುಳಕಂಡಿರೊ ಹೋಟ್ಳು ಬಾಡಿಗೆ ಒಂದು ದಿನಕ್ಕೆ ಒಂದು ಲಕ್ಷ ರೂಪಾಯಂತೆ" ಎಂದ ವಾಟಿಸ್ಸೆ.


"ನಾನೇಳ್ಳಿಲವೇನ್ಲ, ಯಲ್ಲ ಬೂಟಾಟಿಕೆ ನನ ಮಕ್ಳು ಅಂತವ."

...ಂದೆರಡು ನೆನಪು, ತಮಾಷೆ



...ಲೇಖಕಿ ಅನುಪಮಾ ನಿರಂಜನ ಅವರಿಗೆ ಅರ್ಪಿಸಿದ ಒಂದು ಪುಸ್ತಕದಲ್ಲಿ ಅವರನ್ನು ಬಲ್ಲ ಅನೇಕರು ...ದ್ದಾರೆ. ಅವರಿಗೆ ತೀರಾ ಪರಿಚಿತರಾದ ಒಬ್ಬಿಬ್ಬರ ಲೇಖನಗಳನ್ನು ಬಿಟ್ಟರೆ ಬಾಕಿ ಬರಹಗಳೆಲ್ಲ ಬೂಸಿ. ಇದು ...ರಿಗೂ ಗೊತ್ತು, ಓದುವವರಿಗೂ ಗೊತ್ತು.

...ನಗೆ ಈ ಅನುಪಮಾ ಮತ್ತು ನಿರಂಜನ ಚೆನ್ನಾಗಿ ಗೊತ್ತು. ನಾನು ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ...ವರನ್ನು ನಮ್ಮ ಸಾಹಿತ್ಯಸಂಘಕ್ಕೆ ಆಹ್ವಾನಿಸಿದ್ದೆವು; ಆಗ ನಾನು ಸಾಹಿತ್ಯಸಂಘದ ಕಾರ್ಯದರ್ಶಿಯಾಗಿದ್ದೆ. ...ಶಿ ಅವರ 'ಚಿತ್ರಗುಪ್ತ' ವಾರ ಪತ್ರಿಕೆಯಲ್ಲಿ ಲೇಖನ, ಕತೆ ಬರೆದಿದ್ದೆ. ಹಾಗೆಯೇ ಅನುಪಮಾ ಮತ್ತು ನಿರಂಜನ ಮದುವೆಯಾದಾಗ ಮದುವೆಗೆ ಹೋಗಿದ್ದೆ. ನಾನು ಅಧ್ಯಾಪಕನಾಗಿ ಬೆಂಗಳೂರಿಗೆ ಬಂದಮೇಲೆ ಅವರೂ ನನ್ನಂತೆಯೇ ಜಯನಗರದಲ್ಲಿ ಇದ್ದುದರಿಂದ ಆಗಾಗ ಅವರ ಮನೆಗೆ ಹೋಗಿಬರುತ್ತಿದ್ದೆ.





ಒಂದು ದಿನ ನನ್ನ ಅವ್ವ ನಮ್ಮ ಊರಿನಿಂದ ಬಂದಳು; ಬಂದ ಮರುದಿನದಿಂದಲೇ ತೀವ್ರ ಕಾಯಿಲೆಯಿಂದ ಮಲಗಿದಳು. ಮುಂಚಿನಿಂದಲೂ ಹಲವಾರು ಕಾಯಿಲೆಗಳಿದ್ದ ಅವ್ವ ಏಳಲಾರದ ಸ್ಥಿತಿ ತಲುಪಿದಳು. ಮನೆಗೆ ವೈದ್ಯರನ್ನು ಕರೆತರುವುದು ಅನಿವಾರ್ಯವಾಯಿತು. ಆಗ ನನಗೆ ಗೊತ್ತಿದ್ದ ಡಾಕ್ಟರು ಅನುಪಮಾ ಅವರೊಬ್ಬರೇ. ನಮ್ಮ ಮನೆಯ ಹತ್ತಿರವೇ ಅವರ ಫಾರ್ಮಸಿ ಇದ್ದುದರಿಂದ ಅವರು ದಯವಿಟ್ಟು ನನ್ನ ಅವ್ವನನ್ನು ನೋಡಿ ಹೋಗಬೇಕೆಂದು ಕೇಳಿಕೊಂಡೆ. ಅವತ್ತು ಅವರಿಗೆ ಏನಾಗಿತ್ತೋ ..., 'ಬರಲು ಸಾಧ್ಯವಿಲ್ಲ' ಎಂದು ಕಟುವಾಗಿ ಹೇಳಿ ಒಳಗೆಹೋದರು. ನಾನು ಮರುಮಾತಾಡದಂತೆ ನಿರಂಜನ ...ಗೆ ಬಂದು ಗೇಟ್ ಹಾಕಿಕೊಂಡರು. ನಾನು ಸುಸ್ತಾಗಿ ಯೋಚಿಸುತ್ತಾ ನಿಂತೆ.

...ಲ್ಲಿಂದ ಹೋಗಿ ಅಲ್ಲಿಯೇ ಇದ್ದ ಧನಂಜಯ ಎಂಬ ವೈದ್ಯರನ್ನು ಕರೆದುತಂದು ಅವ್ವನನ್ನು ತೋರಿಸಿದೆ. ...ಚಿ ಸ್ವಲ್ಪ ಗುಣವಾಗಿ ಆಕೆ ಊರಿಗೆ ಹೋಗುವುದು ಸಾಧ್ಯವಾಯಿತು.

...ವಾಗಿ ಮೂವತ್ತು ವರ್ಷವಾದರೂ ನಾನು ಮರೆತಿಲ್ಲ. ಆಮೇಲೆ ಈ ನಿರಂಜನ, ಅನುಪಮಾ ಸಿಕ್ಕಾಗ ...ಡಿಸಲಿಲ್ಲ, ಅವರು ಮಾತಾಡಿಸಲು ಯತ್ನಿಸಿದಾಗಲೂ ಸುಮ್ಮನಿರುತ್ತಿದ್ದೆ. ಈ ಬಗ್ಗೆ ಯಾರಿಗೂ ಹೇಳಿಕೊಳ್ಳಲಿಲ್ಲ.

ಈಗ ಇದೆಲ್ಲ ತಮಾಷೆಯಾಗಿ ಕಾಣುತ್ತಿದೆ. ನಾನು ಹಟ ಮಾಡಬಾರದಿತ್ತು ಅನ್ನಿಸುತ್ತದೆ. ಅದೆಲ್ಲ ಇರಲಿ. ಅನುಪಮಾ ಅವರಿಗೆ ಅರ್ಪಿಸಿದ 'ಅನುಪಮಾ ಅಭಿನಂದನ' ಪುಸ್ತಕದ ಹಾಳೆ ತಿರುವುತ್ತಿದ್ದಾಗ ಡಾ. ಶಿವರಾಂ ಅವರ ಇಬ್ಬರು ಹೆಣ್ಣುಮಕ್ಕಳು ಬರೆದ ಎರಡು ಪುಟ್ಟ ಲೇಖನಗಳನ್ನು ಓದಬೇಕೆನ್ನಿಸಿತು. ಈ ಎಂ. ಶಿವರಾಂ ಬಗ್ಗೆ ನೀವು ಬಲ್ಲಿರಿ; ವೈದ್ಯ, ಮಾನವೀಯ ಮನುಷ್ಯ, ಹಾಸ್ಯಪಟು. ಇವರ ಕಟ್ಟಾ ಅಭಿಮಾನಿ ನಾನು. ಅವರ ಹೆಣ್ಣುಮಕ್ಕಳಲ್ಲಿ ಒಬ್ಬರು ಲೀಲಾ ಮಿರ್ಲೆ, ಇನ್ನೊಬ್ಬರು ಕಮಲಾ ರಾಮಸ್ವಾಮಿ. ಈ ಪುಸ್ತಕದ ಪ್ರಕಾರ ಅವರಿಬ್ಬರೂ ಬೆಂಗಳೂರಲ್ಲೇ ಇದ್ದಾರೆ. ಅನುಪಮಾ ಮತ್ತು ಕಮಲಾ ರಾಮಸ್ವಾಮಿ ಸಹಪಾಠಿಗಳು. ಎಲ್ಲ ಹುಡುಗಿಯರಿಗಿಂತ ಹೆಚ್ಚು ತುಂಟಿಯಾಗಿದ್ದಿರ ಬಹುದಾದ ಕಮಲಾ ಅವರಿಗೆ ಆಗ ವೆಂಕಟಲಕ್ಷ್ಮಿ (ಅಂದರೆ ಅನುಪಮಾ) ಹೇಗೆ ಕಾಣುತ್ತಿದ್ದರು ಎಂಬುದು ತಮಾಷೆಯಾಗಿದೆ.

ಲೀಲಾ ಮಿರ್ಲೆ ಬರೆಯುತ್ತಾರೆ: "ಕಾಲೇಜಿನಿಂದ ಸಂಜೆ ಮನೆಗೆ ಬಂದಮೇಲೆ ನಾವು ಮೂರು ಜನ ಅಕ್ಕತಂಗಿಯರು ನಮ್ಮ ಕ್ಲಾಸುಗಳಲ್ಲಿ ನಡೆದ ವಿಶೇಷ ಪ್ರಸಂಗಗಳನ್ನು ಹೇಳುವುದು ರೂಢಿಯಾಗಿತ್ತು. ಒಮ್ಮೆ ಅಕ್ಕ ಕಮಲ "ಇವತ್ತು ವೆಂಕಟಲಕ್ಷ್ಮಿಯ ಭಾಷಣ ಬಿರುಸಿನಿಂದ ಸಾಗಿತ್ತು" ಎಂದಳು. "ಯಾರು ವೆಂಕಟಲಕ್ಷ್ಮಿ?" ಎಂದೆ. "ಆ ಹುಡುಗಿ ಕಮ್ಯುನಿಸ್ಟು. ನೋಡಕ್ಕೆ ಏನೂ ಗೊತ್ತಾಗಲ್ಲ, ಮರದ ಕೆಳಗೆ ಒಂದಿಷ್ಟು ಹುಡುಗಿಯರನ್ನು ಜಮಾ ಮಾಡಿ ಬಗೀತಾಳೆ ಭಾಷಣಾನ."

"ಏನು, ಕಮ್ಯುನಿಸ್ಟ್ ಆಗಿ ಅಂತ್ಲೇ?" ಎಂದೆ.

"ಇಲ್ಲಾ, ಅಂಧಕಾರದಲ್ಲಿರುವ ಸ್ತ್ರೀಯರು ಬೆಳಕಿಗೆ ಬರಬೇಕು. ಅಂಧಕಾರದಲ್ಲಿರುವ ಸ್ತ್ರೀಯರು ಹಾಗೆ ಮಾಡಬೇಕು ಹೀಗೆ ಮಾಡಬೇಕು ಅಂತೆಲ್ಲಾ ಹೇಳ್ತಾ ಇರುತ್ತಾಳೆ" ಎಂದಳು.

–ಆಮೇಲೆ ಬಹುಕಾಲ ಅನುಪಮಾ ಹೆಸರು ಬಂದಾಗಲೆಲ್ಲ ಇವರು "ಅಂಧಕಾರದಲ್ಲಿರುವ ಸ್ತ್ರೀ ಹೇಗಿದ್ದಾಳೆ?" ಅನ್ನುತ್ತಿದ್ದರಂತೆ!

ತಮಾಷೆ ಇರಲಿ. ಬದುಕು ಎಷ್ಟು ದುರಂತದ್ದು. ಈ ತಮಾಷೆ ಹುಡುಗಿಯರ ಅನಂದ ಬತ್ತಿಹೋಗಿ ಅನುಪಮಾ ಪ್ರಸಿದ್ಧ ಲೇಖಕಿಯಾಗಿ, ಕ್ಯಾನ್ಸರ್ ರೋಗವನ್ನನುಭವಿಸಿ ಎಲ್ಲಾ ವಿವಿಧಾರ್ಥಗಳಲ್ಲಿ ಗಂಭೀರವಾಗಿ ಹೋಯಿತು....

ಡಿಸೆಂಬರ್ 8,1991

ಯಡ್ಡಿ ಯಡವಟ್ಟು ಜ್ಞಾನೋದಯ

ದಯಾಮಯನಾದ ಪರಮಾತ್ಮನು ಯಾರು ಯಾರಿಗೆ ಯಾವಾಗ ಯಾವಾಗ ಎಲ್ಲಿ ಎಲ್ಲಿ ಜ್ಞಾನೋದಯವನ್ನುಂಟು ಮಾಡುತ್ತಾನೋ ತಿಳಿಯದು. ಅವನ ಲೀಲೆಯನ್ನು ಅರಿತವರು ಯಾರು? ಪೋಲಿ ಅಲೆಯುವ ಸಾಹುಕಾರರ ಮಕ್ಕಳಿಗೆ ಅಪ್ಪ ಸತ್ತು, ಕೈ ಖಾಲಿಯಾದಾಗ ಜ್ಞಾನೋದಯವನ್ನು ಕರುಣಿಸಬಹುದು. ಈ ಕೆಲಸವನ್ನು ಆ ದಯಾಮಯನು ಮೊದಲೇ ಮಾಡಬಾರದಿತ್ತ ಎಂಬ

ಅಣಕ

▸ ಎಚ್.ಎಲ್. ಕೇಶವಮೂರ್ತಿ

ಕೊರಗಿಗೆ ಅರ್ಥ ಇಲ್ಲ. ಯಾವುದಕ್ಕೂ ಕಾಲ ಕೂಡಿಬರಬೇಕು. ರವಿಶಂಕರ್ ಎಂಬ ಬಿಡಾಡಿ ಊರೂರು ಅಲೆಯುತ್ತಾ ಲಕ್ಕವಳ್ಳಿಯ ಅರಣ್ಯ ಪ್ರದೇಶ ಪ್ರವೇಶಿಸಿದ. ಆ ದಟ್ಟಾರಣ್ಯದಲ್ಲಿ ಜ್ಞಾನೋದಯ ದಯಪಾಲಿಸಿದ ಆ ಪರಮಾತ್ಮ. ಜ್ಞಾನಿಗಳಿಗೆ ಕಾಡಿನಲ್ಲಿ ಕೆಲಸ ಇಲ್ಲ, ಮರಗಿಡ, ಪ್ರಾಣಿ ಪಕ್ಷಿಗಳಿಗೆ ಅವರ ಉಪದೇಶ ಬೇಕಿಲ್ಲ, ಕಾಡಿನಿಂದ ನಾಡಿಗೆ ಬಂದರು. ಬಿಡಾಡಿ ರವಿಶಂಕರ ಹೊರಕ್ಕೆ ಬಂದಾಗ ಜ್ಞಾನದ ಗಣಿ ಆಗಿದ್ದರು. ರವಿಶಂಕರ ಗುರೂಜಿ ಆಗಿ ಪರಿವರ್ತನೆಗೊಂಡಿದ್ದರು. ಈ ಅದ್ಭುತ ಪವಾಡದಿಂದ ಪುಳಕಿತವಾದ ಸರ್ಕಾರ ಬಿಡಾಡಿ, ಗುರೂಜಿ ಆಗಿ ರೂಪುಗೊಂಡ ಪ್ರದೇಶವನ್ನು ಪುಣ್ಯಕ್ಷೇತ್ರ ಎಂದು ಪರಿಭಾವಿಸಿ ಅಭಿವೃದ್ಧಿಪಡಿಸಲು ಶ್ರಮಿಸುತ್ತಿದೆ!

ಜ್ಞಾನೋದಯ ಆಗಲು ಆದಾಯ ಮೂಲಗಳು ಕಡಿತಗೊಳ್ಳಬೇಕು ಅಥವಾ ಆದಾಯದ ಮೂಲವನ್ನು ಹುಡುಕುವ ಅನಿವಾರ್ಯ ಪರಿಸ್ಥಿತಿ ಉದ್ಭವಿಸಬೇಕು ಎಂದು ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ! ಇದನ್ನು ಒಪ್ಪದ ಕೆಲವರು ಬೇರೆ ಕಾರಣಗಳನ್ನು ಕೊಡುತ್ತಾರೆ.

ಈಗ ಯಡ್ಯೂರಪ್ಪನವರಿಗೆ ಜ್ಞಾನೋದಯ ಆಗಿದೆಯಂತೆ. ಆಗಿದ್ದು ಎಲ್ಲಿ ಎಂದರೆ ಅರಣ್ಯ ಪ್ರದೇಶದಲ್ಲಲ್ಲ, ಚೀನಾ ದೇಶದಲ್ಲಿ. ಶಿವಭಕ್ತನಿಗೆ ನಾಸ್ತಿಕ ನಾಡಿನಲ್ಲಿ ಜ್ಞಾನೋದಯ ಆಗಿರುವುದು ವಿಪರ್ಯಾಸವೇ ಸರಿ. ಎಲ್ಲ ಅವನ ಲೀಲೆ!

ಇಲ್ಲಿಯವರೆವಿಗೆ ಅವರಿಗೆ ಜ್ಞಾನ ಇರಲಿಲ್ಲವೆ? ಅಜ್ಞಾನಿಯಿಂದ ಆಳಿಸಿಕೊಂಡೆವೆ ನಾವು ಎಂಬ ಕುಹಕ ಬೇಡ. ರವಿಶಂಕರ ಗುರೂಜಿ ಅವರಿಗೆ ಜ್ಞಾನೋದಯ ಆದ ಸ್ಥಳವನ್ನು ಪುಣ್ಯಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಲು ಶ್ರಮಿಸುತ್ತಿರುವಂತೆ ಅಲ್ಲಿಯೂ ಪ್ರಯತ್ನಿಸುವರಾ ಎಂಬ ತಲೆಹರಟೆ ಪ್ರಶ್ನೆಗಳಿಗೆ ಅವಕಾಶ ಇಲ್ಲ.


ಈಗ ಪ್ರಶ್ನೆ ಏನು ಅಂದರೆ ಅವರಿಗೆ ಚೀನಾದಲ್ಲೆ ಯಾಕೆ ಜ್ಞಾನೋದಯ ಆಯಿತು ಎಂಬುದು. ಜ್ಞಾನೋದಯ ಆಗಬೇಕಾದರೆ ಮನೆ, ಊರು, ದೇಶ ಬಿಟ್ಟು ಹೋಗಬೇಕು ಎಂಬುದು ಕೆಲವರ ಅಭಿಪ್ರಾಯ. ಸಿದ್ಧಾರ್ಥ ಅರಮನೆ ಬಿಟ್ಟು ಹೊರಟ. ಬುದ್ಧನಾದ. ಯಡ್ಯೂರಪ್ಪನವರು ಚೀನಾ ದೇಶಕ್ಕೆ ಹೋದರು. ಜ್ಞಾನಿಯಾಗಿ ಬಂದರು! ಒಂದೇ ವ್ಯತ್ಯಾಸ. ಸಿದ್ಧಾರ್ಥ ಒಂಟಿಯಾಗಿ ದೇಶ ಪರ್ಯಟನೆ ಮಾಡಿದ. ಇವರು ಲಗ್ನ ಪತ್ರಿಕೆಗಳಲ್ಲಿ ಹಾಕಿಸಿರುವಂತೆ, ಸಕುಟುಂಬ ಪರಿವಾರ ಸಮೇತರಾಗಿ ಹೋಗಿದ್ದರು! ಆ ಬುದ್ಧ ದುಃಖಕ್ಕೆ ಕಾರಣ ಹುಡುಕಿದ. ಇವರು ಬಡತನದ ಕಾರಣ ಕಂಡರು!

ಏನು ಕಾರಣ ಅದು?

ಜನಸಂಖ್ಯಾ ನಿಯಂತ್ರಣ! ಅಲ್ಲಿ ಇದೆ, ಇಲ್ಲಿ ಇಲ್ಲ!

ಅಬ್ಬಾ ಎಂತಹ ಅದ್ಭುತ ಸಂಶೋಧನೆ!

ಹೋಗಿ ಹೋಗಿ ಯಾಕೆ ಯಡ್ಡಿಗೆ ಈ ಯಡವಟ್ಟು ಜ್ಞಾನೋದಯ ಆಯಿತು ಅಂತ ಕೆಲವು ಪೋಕರಿಗಳು ಯೋಚಿಸುತ್ತಿದ್ದಾರಂತೆ. ಅವರ ಪ್ರಕಾರ, ಇದಕ್ಕೆ ಕಾರಣ ಹೀಗಿದೆ. ಹಾಳಾದ ಸಾಬರು ನಾಲ್ಕು ನಾಲ್ಕು ಮದುವೆ ಮಾಡ್ಕೊಂಡು ಕಂಡಾಬಟ್ಟೆ ಮಕ್ಕಳನ್ನು ಹುಟ್ಟಿಸುತ್ತಾ ಕುಂತವ್ರೆ. ಇಂತಹ ಸಾಬರ ಮಟ್ಟ



ಹಾಕಬೇಕಾದರೆ ಇದೇ ಸರಿಯಾದ ಮಾರ್ಗ ಎಂದು ಯೋಚಿಸಿದ್ದಾರೆ. ಸಾಬರು ಮಕ್ಕಳನ್ನು ಯದ್ವಾತದ್ವಾ ಹುಟ್ಟಿಸುವುದು ಸುಳ್ಳು ಅಂತ ಅಂಕಿಅಂಶಗಳು ತೋರಿಸಿದರೂ ಹಿಂದೂತ್ವ ಅಜೆಂಡಾ ಅಂತ ಒಂದಿದೆಯಲ್ಲ ಅದಕ್ಕೆ ಬದ್ಧನಾಗಿರಬೇಕು ಅಂತ ಯಡ್ಡಿಗೆ ಈ ರೀತಿಯ ಜ್ಞಾನೋದಯ ಆಗಿದೆ ಎಂಬುದು ಅವರ ವಾದ.

ಈ ಅನುಮಾನ ಅನವಶ್ಯಕ. ಯಾಕೆಂದರೆ ಜ್ಞಾನಿಗಳಾದ ವೆಂಕಯ್ಯ ನಾಯ್ಡು ಅವರೇ ಪತ್ರಿಕಾಗೋಷ್ಠಿಯಲ್ಲಿ ಜನಸಂಖ್ಯಾ ನಿಯಂತ್ರಣ ಎಂಬುದು ಸಾಮಾಜಿಕ ಸಮಸ್ಯೆಯೇ ಪರಂತು ಧಾರ್ಮಿಕ ಸಮಸ್ಯೆ ಅಲ್ಲ ಎಂದು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ!

ಕಟ್ಟುನಿಟ್ಟು ಜನಸಂಖ್ಯಾ ನಿಯಂತ್ರಣದಿಂದಾಗಿ ಚೀನಾ ದೇಶದಲ್ಲಿ ಉದ್ಭವಿಸಿರುವ ಸಾಮಾಜಿಕ ಸಮಸ್ಯೆಗಳು, ಹೆಣ್ಣು ಭ್ರೂಣ ಹತ್ಯೆ ಇವುಗಳ ಕುರಿತು ಯಾಕೆ ಅವರಿಗೆ ಜ್ಞಾನೋದಯ ಆಗಿಲ್ಲ ಎಂದರೆ ಅದು ಯಡ್ಡಿಯಜ್ಞಾನ ಪರಿಧಿಗೆ ಹೊರಗಿದ್ದವು!

ಅಂತೂಇಂತೂ ದೇಶವನ್ನು ಕಾಡುತ್ತಿರುವ ಬಡತನಕ್ಕೆ ಕಾರಣ ಹುಡುಕಿದರು ಯಡ್ಯೂರಪ್ಪನವರು. ಇದು ತಿಳಿದ ಮೇಲೆ ಪರಿಹಾರ ಸುಲಭ. ವಿಧಾನಸಭೆಯಲ್ಲಿ ಪ್ರಸ್ತಾಪಿಸಿದರು. ಎರಡು ಮಕ್ಕಳಿಗಿಂತ ಹೆಚ್ಚಿಗೆ ಇರುವ ದಂಪತಿಗಳಿಗೆ ಯಾವ ಸರ್ಕಾರಿ ಸವಲತ್ತನ್ನೂ ನೀಡಲಾಗುವುದಿಲ್ಲ ಎಂದು ಸಾರಿದರು. ವೆಂಕು ಅವರ ಬೆಂಬಲಕ್ಕೆ ನಿಂತರು. ಕೇಂದ್ರ ಸಮಿತಿಯ ಸಮ್ಮತಿ ಇದಕ್ಕೆ ಇದೆ ಎಂದು ಪೂರಕಮಾತು ಹೇಳಿದರು. ಯಾಕೋ ಏನೋ ಈ ಅದ್ಭುತ ಆಲೋಚನೆಗೆ ವಿ.ಎಸ್. ಆಚಾರ್ಯ, ಸುರೇಶ್ ಕುಮಾರ್ ಅವರುಗಳೇ ತೊಡಕಾಗಿರುವಂತಿದೆ. ಸಂತಾನ ನಿಯಂತ್ರಣ ಬಲವಂತದಿಂದ ಮಾಡಲಾಗದು ಎಂದು ವಿರೋಧ ರಾಗ ಎಳೀತಿದಾರೆ. ಅವರಿಬ್ಬರನ್ನೂ ಚೀನಾಕ್ಕೆ ಕಳಿಸಿದರೆ ಸರಿಹೋಗಬಹುದಾ ಅಂತ.....

ಪೋಕರಿಗಳ ಮಾತು

ಶೆಡ್ಡು ಹೋಟ್ಲು

ಊರ ಪೋಕರಿಗಳಿಗೆ ಪ್ರಶಸ್ತವಾದ ಸ್ಥಳ.

ಚೋಟ ಟೀ, ಲಾಂಗ್ ಮಾತು.

'ಯಡ್ಯೂರಪ್ಪ ಹೊಸ ಕಾನೂನು ತತ್ತಾನಂತೆಕಲ'

'ಯಾವ ಕಾನೂನಂತೆ?'

'ಚೀನಾ ಕಾನೂನು'

'ಹಂಗಾರೆ ಕರಪ್ಟ್ ಅಫಿಸಿಯಲ್ಸ್‌ಗೆ ಬಂತು ಕುತ್ಗೆಗೆ'

'ಅದಲ್ಲಕಲ. ಒಂದು ಮನೆಗೆ ಎರಡೇ ಮಕ್ಕಳಂತೆ'

'ಹೆಚ್ಚಾಗಿದ್ರೇನ್ಮಾಡನಂತೆ?'

'ಗೌರ್ಮೆಂಟ್ ಬೆನಿಫಿಟ್ ಕೊಡಿಕಿಲ್ವಂತೆ'

'ಒಂದು ಮಗ ಅದೆ. ಎರಡನೇದು ಅವಳಿ ಆದ್ರೇನು ಮಾಡಾನಂತೆ'

'ಎರಡು ಹೆರಿಗೆ ಮೇಲೆ ಆಗ ಕೂಡ್ದು ಅಂತ ರೂಲ್ಸು ಮಾಡ್ತಾನೆ'

'ಎರಡೂ ಸತ್ತೋದ್ರೆ?'

'ಇನ್ನೊಂದವಕಾಸ ಕೊಡಬೌದು'

'ಆಗ ಒಂದೇ ಸಲಕ್ಕೆ ಮೂರು ಮಕ್ಕಳಾದ್ರೆ!'

ವೈಎಸ್‌ಆರ್ ಕ್ರೂರ ಮುಖದ ಅನಾವರಣ...

ಮಾನ್ಯರೆ,

ವೈಎಸ್‌ಆರ್‌ನ ಮರಣದ ನಂತರ ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕದ ಮಾಧ್ಯಮಗಳು ಆ "ರೆಡ್ಡಿಗಾರು" ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯೇ ಆಗಿದ್ದರೇನೋ ಎಂಬಂತೆ ವರ್ತಿಸಿದ್ದು ನಿಜ. ವಿನಾಕಾರಣ ಸರ್ಕಾರಿ ರಜೆ ಘೋಷಿಸಿ ಎಲ್ಲರಿಗೂ ಅನನುಕೂಲತೆ ಮಾಡಿದ್ದಲ್ಲದೇ ದಿನಗೂಲಿ ನೌಕರರ ಕುಟುಂಬ ಒಂದು ದಿನ ಉಪವಾಸ ಬೀಳುವಂತೆ ಮಾಡಿದ ಕರ್ನಾಟಕ ಸರ್ಕಾರದಲ್ಲಿ ಕನ್ನಡಿಗರಿಗಿಂತ ತೆಲುಗು-ಬಿಡ್ಡರು ಹೆಚ್ಚು ಪ್ರಭಾವಶಾಲಿಗಳಾಗಿದ್ದಾರೆ ಎಂದು ಮತ್ತೊಮ್ಮೆ ಸಾಬೀತಾಯಿತು. ನಮ್ಮ 'ಲಂಕೇಶ್' ವಾರ ಪತ್ರಿಕೆಯೊಂದೇ ಆ ರೆಡ್ಡಿ ಕುಟುಂಬದ ಅತಿ ಕ್ರೂರ ಮುಖ ಜನತೆಯ ಎದುರಿಗೆ ತೆರೆದಿಟ್ಟು ಉಪಕಾರ ಮಾಡಿದ್ದು (16-9-09).

ಅಥಣಿಯ ಸಿಪಿಐ ನ್ಯಾಮಗೌಡರು ಕಾಶಿನಾಥ್ ಕಾರಿಕೊಳ್ಳನ ಸುಪಾರಿ ಕಿಲ್ಲರ್ಸ್ ಗ್ಯಾಂಗ್‌ನ್ನು ಹಿಡಿದು ಬೆಳಗಾವಿ ಜಿಲ್ಲೆಯ ಜನರಿಗೆ ಮಹಾದುಪಕಾರ ಮಾಡಿದ್ದಾರೆ. ಇದೇ ಗ್ಯಾಂಗ್‌ನ ಮುಖಾಂತರ ಬೆಳಗಾವಿಯೊಬ್ಬನ ಸುಪಾರಿ ಕೊಲೆ ಗೋಕಾಕ್ ಹತ್ತಿರದ ಕಣಗಾಂವ್ ಎಂಬಲ್ಲಿ ಎರಡು ತಿಂಗಳ ಹಿಂದೆ ಆಗಿತ್ತು, ವಿಪರ್ಯಾಸವೆಂದರೆ ಈ ಕೇಸ್‌ನಲ್ಲಿ ಗೋಕಾಕ್ ಗ್ರಾಮಾಂತರ ಪೊಲೀಸರೇ ಸುಪಾರಿ ಕೊಟ್ಟವರಿಗೆ ಸಾಥ್ ಕೊಟ್ಟಿದ್ದು. ಬೆಳಗಾವಿ ನಗರದಲ್ಲಿ 30 ವರ್ಷದಿಂದ ನೆಲೆಸಿದ್ದ ಉಡುಪಿ ಮೂಲದ ಉದ್ಯಮಿಯೋರ್ವನಿಗೆ ನೀರಾವರಿ ಯೋಜನೆಗಳ ಕಾಂಟ್ರ್ಯಾಕ್ಟ್ ಕೊಡಿಸುತ್ತೇವೆ, ನೀರಾವರಿ ಇಲಾಖೆಯಲ್ಲಿ ಅವನ ಕಡೆಯವರಿಗೆ ಸರ್ಕಾರಿ ಕಾಯಂ ನೌಕರಿ ಕೊಡಿಸುತ್ತೇವೆ ಎಂದು ಆಮಿಷ ತೋರಿಸಿ, ಒಂದು ನೀರಾವರಿ ಇಲಾಖೆಯ ಅಧಿಕಾರಿಗಳ ಗುಂಪು ಆ ಉದ್ಯಮಿಯಿಂದ ಸುಮಾರು ಎರಡೂವರೆ ಕೋಟಿ ಕಿತ್ತಿತ್ತು, ಕೆಲಸವಾಗದಾಗ ಆ ಉದ್ಯಮಿ ತನ್ನ ಹಣ ಹಿಂದೆ ಕೊಡಲು ಒತ್ತಾಯಿಸಿದಾಗ, ಕಾರಿಕೊಳ್ಳನ ಗ್ಯಾಂಗ್‌ಗೆ ಸುಪಾರಿ ಕೊಟ್ಟು ಆ ಉದ್ಯಮಿ ಕೊಲೆ ಮಾಡಿಸಿ ಗೋಕಾಕ್ ಹತ್ತಿರದ ನಿರ್ಜನ ಹಳ್ಳಿಯಾದ ಕಣಗಾಂವ್‌ನಲ್ಲಿ ಹೆಣವನ್ನು ತೂಗು ಹಾಕಲಾಯಿತು. ಈ ಕೊಲೆಯನ್ನು ಆತ್ಮಹತ್ಯೆ ಎಂದು ತಿರುಚಿ ಕೇಸ್ ಮುಚ್ಚಿಹಾಕಲು ಕೊಲೆಗೆ 15 ದಿನ ಮೊದಲೇ ಗೋಕಾಕ್ ಗ್ರಾಮಾಂತರ ಪೊಲೀಸರೊಂದಿಗೆ ಸುಪಾರಿ ಕೊಟ್ಟ ಗ್ಯಾಂಗ್ ಭಾರೀ ಮೊತ್ತಕ್ಕೆ ಒಪ್ಪಂದ ಮಾಡಿಕೊಂಡಿತ್ತು (ಎರಡೂವರೆ ಕೋಟಿಯ 10%) ಪೊಲೀಸರಿಗೆ ಸಂದಾಯವಾದರೂ ಇಂತಹ ಆಮಿಷ



ಪೊಲೀಸರಿಂದ ನಿರಾಕರಿಸಲು ಸಾಧ್ಯವೆ. ಕೇವಲ ಫೈಲ್‌ನಲ್ಲಿ ಆತ್ಮಹತ್ಯೆ ಎಂದು ನಮೂದಿಸಿ ಕೇಸ್ ಬಂದ್ ಮಾಡಲು ರೂ. 25 ಲಕ್ಷ ಮಾತ್ರ!)

ಅಷ್ಟೇ ಅಲ್ಲ, ಪೊಲೀಸರ ಉದ್ದೇಶದ ಬಗ್ಗೆ ಜನರಿಗೆ ಸಂಶಯ ಬರಬಾರದೆಂದು ಹಾಗೂ ಸಭ್ಯನಾಗಿದ್ದ ಮೃತ ಉದ್ಯಮಿಯ ಬಗ್ಗೆ ಜನರು ಸಿಂಪಥಿ ತೋರಿ ಕೊಲೆ ಕೇಸ್ ಕೆದುಕಬಾರದೆಂಬ ದುರುದ್ದೇಶದಿಂದ, ಜನರನ್ನು ತಪ್ಪು ದಾರಿಗೆಳೆಯಲು, ಮೃತನು ಹಣಕಾಸು ವ್ಯವಹಾರದಲ್ಲಿ ಪ್ರಾಮಾಣಿಕನಾಗಿರಲಿಲ್ಲ ಎಂದು ಪ್ರಚುರಪಡಿಸಲು ಪೊಲೀಸರೇ ಸ್ವತಃ ಸ್ಥಳೀಯ ಪತ್ರಿಕೆಗಳವರನ್ನು ಹಾಗೂ ಟಿವಿ ಚಾನೆಲ್‌ನವರನ್ನು ಕರೆದು, ಮೃತನ ಚಾರಿತ್ರ್ಯಹರಣ ಮಾಡುವಂತಹ ಹಸಿ ಸುಳ್ಳುಭರಿತ ಸ್ಟೇಟ್‌ಮೆಂಟ್ ಕೊಟ್ಟು, ಪೊಲೀಸ್ ಇಲಾಖೆಯ ಇನ್ನೊಂದು ಕ್ರೂರ ಮುಖದ ಪರಿಚಯವನ್ನೂ ಮಾಡಿಸಿದರು.

-ಸತೀಶ್ ಕೆ. ಸರವಗೋಳ್, ಬೆಳಗಾವಿ


ಜೈ ಹೋ ಫಾಸ್ಟ್ ಮೂವ[ರ್]
ಡಾ. ಯಡಿಯೂರಪ್ಪ

ಯಡ್ಡಿ ಫಾಸ್ಟ್ ಮೂವರ್ ಅಂತೆ!

'ಇಂಡಿಯಾ ಟುಡೇ'ಯ ಮೂರ್ಖರು ಯಡಿಯೂ[ರ]ಪ್ಪನಿಗೆ ಹೀಗೊಂದು ಅವಾರ್ಡ್ ಕೊಡುವ ಮೂ[ಲಕ] ಕರ್ನಾಟಕದ ಜನಕ್ಕೆ ಅವಮಾನ ಮಾಡಿದ್ದಾರೆ. ಕಾನೂ[ನು] ವ್ಯವಸ್ಥೆ ಸರಿಪಡಿಸಲು ತ್ವರಿತಕ್ರಮ ಕೈಗೊಂಡಿದ್ದಾ[ರೆ] ಯಡಿಯೂರಪ್ಪ, ಅದಕ್ಕೇ ಅವರು ಫಾಸ್ಟ್ ಮೂ[ವರ್] ಅಂತೆ! ಈ ಅವಾರ್ಡ್ ಪಡೆಯುವ ವಾರದ ಮೊದ[ಲು] ಬೆಂಗಳೂರಿನ ಚರ್ಚ್ ಮೇಲೆ ಚೆಡ್ಡಿಗಳು ದ[ಾಳಿ] ಮಾಡಿದ್ದವು. ಕರ್ನಾಟಕದಲ್ಲಿ ಕಾನೂನು ವ್ಯವಸ್ಥೆ ಎ[ಷ್ಟು] ಹದಗೆಟ್ಟಿದೆ ಎಂಬುದು 'ಇಂಡಿಯಾ ಟುಡೇ' ಹುಚ್ಚರಿಗೆ ಗೊತ್ತಿಲ್ಲವೋ ಅಥವಾ ಇಲ್ಲೂ ಡೀ[ಲ್] ನಡೆದಿರುವುದೋ?

ಇಲ್ಲಿ ಗೃಹಮಂತ್ರಿ ವಿ.ಎಸ್. ಆಚಾರ್ಯ ನಾಲಾಯಕ್ ಎನಿಸಿಕೊಂಡಿದ್ದಾರೆ. ಚರ್ಚ್‌ಗಳ ಮ[ೇಲೆ] ಚೆಡ್ಡಿಗಳು ಸರಣಿ ದಾಳಿ ನಡೆಸಿ ಏಸು, ಮೇರಿ ಮೂ[ರ್ತಿ]ಗಳನ್ನು ಒಡೆದುಹಾಕಿ ಕರ್ನಾಟಕದ ಕ್ರಿಶ್ಚಿಯ[ನ್] ಸಮುದಾಯವನ್ನು ಆತಂಕಕ್ಕೊಳಪಡಿಸಿದ್ದರು. ಈಗ[ಲೂ] ಆ ಆತಂಕ ಮುಂದುವರಿದೇ ಇದೆ. ಚರ್ಚ್ ಮ[ೇಲೆ] ದಾಳಿ ನಡೆದಾಗ ಪೊಲೀಸರೇ ದಾಳಿಕೋರರಿಗೆ ಪರೋ[ಕ್ಷ] ನೆರವು ನೀಡಿದ್ದರು.

ಇತ್ತೀಚೆಗಷ್ಟೇ ಮೈಸೂರಿನಲ್ಲಿ ಭಜರಂಗಿಗ[ಳು] ಕೋಮುಗಲಭೆ ಎಬ್ಬಿಸಿ ಮೂವರ ಬಲಿ ತೆಗ[ೆದು]ಕೊಂಡಿದ್ದರು. ಇನ್ನು ಕರಾವಳಿಯಲ್ಲಂತೂ ಮುಸ್ಲಿ[ಮರ] ಮೇಲೆ ದಿನನಿತ್ಯವೂ ಭಜರಂಗಿಗಳು ಹಲ್ಲೆ ಮಾಡುತ್ತ[ಲೇ] ಇದ್ದಾರೆ. ಹಲ್ಲೆಗೊಳಗಾದವರನ್ನೇ ಪೊಲೀಸರು ಬಂ[ಧಿಸಿ] ಚಿತ್ರಹಿಂಸೆ ನೀಡುತ್ತಿದ್ದಾರೆ. ಭಜರಂಗಿಗಳು ಮಂಗಳೂ[ರಿನ] ಪಬ್ ಮೇಲೆ ದಾಳಿ ಮಾಡಿ, ಮಹಿಳೆಯರೊಂ[ದಿಗೆ] ಅಶ್ಲೀಲವಾಗಿ ವರ್ತಿಸಿದ್ದು ಇಡೀ ದೇಶಕ್ಕೆ ಗೊತ್ತ[ು]. ಅದಿರಲಿ ಪದ್ಮಪ್ರಿಯಾಳನ್ನು ಸಾ[ವಿಗೆ] ದೂಡಿದ್ದು ಗೃಹ ಸಚಿವ ಮತ್ತು ಆಕೆ[ಯ] ಪತಿ ಉಡುಪಿ ಬಿಜೆಪಿ ಶಾ[ಸಕ] ರಘುಪತಿಭಟ್. ಇನ್ನು ಇದರ ವಿಚಾ[ರಣೆ] ಕುಂಟುತ್ತಾ ಸಾಗಿದೆ. ಫಾ[ಸ್ಟ್] ಮೂವರ್‌ನ ಆಡಳಿತದಲ್ಲಿ!



ಇದೆಲ್ಲವನ್ನು ನೋಡಿಕೊಂ[ಡು] ತೆಪ್ಪಗೆ ಕುಳಿತಿರುವ ಯಡಿಯೂರಪ್ಪ[ನಿಗೆ] ಸ್ಲೋ ಮೂವರ್ ಅಲ್ಲ; ದಿ ಸ್ಲೀಪ[ರ್] ಪ್ರಶಸ್ತಿ ಕೊಡಬೇಕಿತ್ತು.

sms ಜೋಕ್ಸ್

ಭೂಗತಲೋಕದ ಡಾನ್ ಒಬ್ಬ ತನ್ನ ಮಗನನ[್ನು] ಕೇಳಿದ: "ಪರೀಕ್ಷೆಯಲ್ಲಿ ಯಾಕೆ ಫೇಲ್ ಆದೆ?"
ಮಗ : "ಅಪ್ಪ ಅವರು ನನ್ನನ್ನು ಮೂರು ಗಂಟೆಗ[ಳ] ಕಾಲ ಪ್ರಶ್ನಿಸಿದರೂ ನಾನು ಅವರಿಗೆ ಏನನ್ನೂ ಹೇಳಲಿ[ಲ್ಲ] ಗೊತ್ತಾ?!"

* * * * *

ಕಾಮಕ್ರೀಡೆಗೆ ವಿಭಿನ್ನ ಪ್ರತಿಕ್ರಿಯೆಗಳು:
ಇಟ್ಟುಕೊಂಡವಳಿಂದ : ಹಾ.. ಎಷ್ಟು ಚೆನ್ನಾಗಿದೆ ಚಿನ್ನಾ
ವೇಶ್ಯೆ: ಬೇಗನೆ ಮುಗಿಸ್ತೀಯೋ ಇಲ್ಲವೋ?
ಪ್ರಿಯತಮೆ: ಶ್ಶೂ... ನಿಧಾನ...
ಹೆಂಡತಿ: ಗೋಡೆ ಮೇಲೆಲ್ಲ ಧೂಳುಕಟ್ಟಿದೆ...

* * * * *

'ಕೌನ್ ಬನೇಗಾ ಸೆಕ್ಸ್ ಪತಿ' ಕಾರ್ಯಕ್ರಮದಲ್ಲಿ ಕೇಳಲಾ[ದ] ಪ್ರಶ್ನೆ : "ಕಾಮಕ್ರೀಡೆ ನಡೆಯುತ್ತಿರುವಾಗ ನಿಮ್ಮ ಹೆಂಡ[ತಿ] ಹೇಗೆ ಅರಚುತ್ತಾರೆ?"
ಸ್ಪರ್ಧಿ: "ನಾನು ನನ್ನ ಫ್ರೆಂಡ್‌ಗೆ ಫೋನ್ ಮಾಡಬಹುದಾ?"

* * * * *


ಹುಡುಗೀರ ಜೊತೆ ವ್ಯವಹಾರ ತುಂಬಾ ಕಷ್ಟ.
ತಮಾಷೆಗೆ ಏನಾದ್ರು ಹೇಳಿದ್ರೆ ಮುಖ ದೊಡ್ಡದ ಮಾಡ್ಕೋತಾರೆ
ತಮಾಷೆಗೆ ಏನಾದ್ರು ಮಾಡಿದ್ರೆ ಹೊಟ್ಟೆ ದೊಡ್ಡದ ಮಾಡ್ಕೋತಾರೆ
ವಾಟ್ ಟು ಡು?!

* * * * *

ಬಾಸ್: ನಾನು ಲಿಂಗಪ್ಪ ಅಂತ ಟೈಪ್ ಮಾಡೋ[ಕೆ] ಹೇಳಿದ್ರೆ ನೀನು ಲಿಂಗಪ್ಪ ಅಂತ ಟೈಪ್ ಮಾಡಿದೆಯಲ್ಲಾ
ಟೈಪಿಸ್ಟ್: ಸಾರಿ ಸಾರ್, ಈಗೇನು ಮಾಡೋದು?
ಬಾಸ್: ಬೇಗ ಲಿಂಗ ತೆಗದು ಲಿಂಗ ಸೇರಿಸು ಅಷ್ಟೇ

...ಕ್ ಆಫ್ ಆಲ್...!


...ಂಧಿನಗರದಲ್ಲಿ ವಿಚಿತ್ರ ಹವ್ಯಾಸಗಳ ಹುಡುಗರಿದ್ದಾರೆ. ...ರಲ್ಲಿ ದುಂಡುಮುಖದ ಆದರ್ಶ್, ಗುಂಗುರು ಕೂದಲಿನ ...ತ್ ಹೆಗಡೆ ಮತ್ತು ಪ್ರತಿಭಾವಂತ ಮೋಹನ್ ಪ್ರಮುಖರು. ...ದರ್ಶ್ ಮತ್ತು ಹೇಮಂತ್ ನಡುವಿನ ಸಾಮ್ಯತೆ ...ರೆಂದರೆ ಅವರಿಬ್ಬರೂ ಕಿರುತೆರೆಯಿಂದ ಬೆಳ್ಳಿತೆರೆಗೆ ...ಹಾಕಿದವರು. ಮೋಹನ್ ಕೂಡಾ ರಂಗಭೂಮಿಯಲ್ಲಿ ... ಕೆಲಸ ಮಾಡಿದವರು. ಅಪಾರವಾದ ಉತ್ಸಾಹ, ಅದಮ್ಯ ...ತ್ಸಾಹ ಮತ್ತು ಒಂದಿಷ್ಟು ಕನಸುಗಳನ್ನು ಹೊತ್ತುಕೊಂಡಿರುವ ...ಹುಡುಗರಲ್ಲಿ ಒಂದಿಷ್ಟು ಪ್ರತಿಭೆ ಇರುವುದು ಸುಳ್ಳಲ್ಲ. ...ಸಮಸ್ಯೆ ಏನೆಂದರೆ ಇವರೆಲ್ಲ ತಾವು ಸಕಲಕಲಾವಲ್ಲಭರೆಂಬ ...ಗುಳ್ಳೆ ತೇಲಾಡುತ್ತಿರುವುದು.



ಉದಾಹರಣೆಗೆ ಆದರ್ಶ್ ನಿರ್ದೇಶನದ 'ಹುಷಾರ್' ಮತ್ತು ಹೇಮಂತ್ ನಿರ್ದೇಶನದ 'ಹೌಸ್ ಫುಲ್' ಚಿತ್ರಗಳನ್ನೇ ನೋಡಿ. ಕಥೆ, ಚಿತ್ರಕಥೆ, ಸಂಭಾಷಣೆ, ಸಂಗೀತ, ನಿರ್ದೇಶನ ಇವೆಲ್ಲದರ ಜೊತೆಗೆ ನಟನೆಯ ಜವಾಬ್ದಾರಿಯನ್ನೂ ಇವರು ಹೊತ್ತುಕೊಂಡಿದ್ದಾರೆ. ಇವರ ಇಂತಹ ಅವತಾರಗಳನ್ನು ನೋಡಿದರೆ 'ಜಾಕ್ ಆಫ್ ಆಲ್, ಮಾಸ್ಟರ್ ಆಫ್ ನನ್' ...ಇಂಗ್ಲಿಷ್ ನಾಣ್ನುಡಿ ನೆನಪಿಗೆ ಬರುತ್ತದೆ. ಹೀಗೆ ಚಿತ್ರದ ...ಲ್ಲ ತಾವೇ ವಹಿಸಿಕೊಂಡು ಚಿಂದಿಯಾಗುವ ಬದಲು ...ರಡು ಕೆಲಸಗಳನ್ನು ಮಾತ್ರ ಹೊತ್ತುಕೊಂಡರೆ ಅವರಲ್ಲಿರುವ ...ದ ಟ್ಯಾಲೆಂಟ್ ಹೊರಹೊಮ್ಮಲು ಸಾಧ್ಯ. ಈ ಸರಳ ...ಬಗ್ಗೆ ಆದಷ್ಟು ಬೇಗೆ ಅವರಿಗೆ ಜ್ಞಾನೋದಯವಾಗಬೇಕಿದೆ ... ಯಾರಾದರೂ ಹಿತೈಷಿಗಳು ಅವರ ಕಿವಿ ಹಿಂಡಿ ಬುದ್ಧಿ ...ಬೇಕಿದೆ. ಇಷ್ಟರ ನಡುವೆಯೂ ರಿಮೇಕ್ ಸಂಸ್ಕೃತಿ ಮತ್ತು ...ದೊಡ್ಡ ಕಲಾವಿದರ ಅಬ್ಬರದ ನಡುವೆಯೂ ಹೇಮಂತ್ ... ದಿನದ ಹೀರೋ ಆಗಿ ಉದಯಿಸಿರುವುದು, ಅದೇ ...ಲ್ಲಿ ಆದರ್ಶನ 'ಹುಷಾರ್' ಸಾಗುತ್ತಿರುವುದು ಮೆಚ್ಚಬಹುದಾದ ...ು.

...ದರ್ಶ್ ಮತ್ತು ಹೇಮಂತ್ ಹೆಗಡೆಯಂತೆ ಮೋಹನ್ ... ಈಗ 'ಕೃಷ್ಣ ನೀ ಲೇಟಾಗಿ ಬಾರೋ' ಚಿತ್ರದ ...ತ್ರಕಥೆ-ಸಂಭಾಷಣೆ ಮತ್ತು ನಿರ್ದೇಶನದ ಜೊತೆಗೆ ನಾಯಕ ...ಗಿಯೂ ತನ್ನನ್ನು ತಾನು ಅಗ್ನಿಪರೀಕ್ಷೆಗೆ ಒಡ್ಡಿಕೊಂಡಿದ್ದಾರೆ. ...ಲ್ಲೇ ಈ ಚಿತ್ರ ತೆರೆಕಾಣಲಿದ್ದು ಮೋಹನ್ ಪ್ರತಿಭೆಯ ಸಾರ ...ಗಲಿದೆ.

...ದಹಾಗೆ, ಇವರೆಲ್ಲ ತಮ್ಮ ಮುಖಕ್ಕೆ ಬಣ್ಣಹಚ್ಚುವ ಜೊತೆಗೆ ...ಶನ ಮತ್ತು ಇತರ ತಾಂತ್ರಿಕ ವಿಷಯಗಳ ಬಗ್ಗೆಯೂ ಆಸಕ್ತಿ ...ಸುವುದರಿಂದ ಒಂದು ಲಾಭವಾಗುವ ಸಾಧ್ಯತೆ ಇದೆ. ...ಂದರೆ ಮುಂಬರುವ ದಿನಗಳಲ್ಲಿ ಹೀರೋಗಳ ಕೊರತೆ ...ಾದರೂ ತಂತ್ರಜ್ಞರಿಗೆ ಬರವಿರಲಾರದು!



ರೈ ಕಂಡ ರಿಮೇಕ್ ಕನಸು....

ಅದೊಂದು ಕಾಲವಿತ್ತು. ಆಗ ಹಂಸಲೇಖಾ ಅವರು ನಿರ್ದೇಶಕರಾದ ರಾಜೇಂದ್ರಸಿಂಗ್ ಬಾಬು ಮತ್ತು ನಂಜುಂಡೇಗೌಡರ ಜೊತೆ ಸೇರಿ ರಿಮೇಕ್ ಸಂಸ್ಕೃತಿಯ ವಿರುದ್ಧ ದೊಡ್ಡ ಸಮರವನ್ನೇ ಸಾರಿದ್ದರು. ಅದೇರೀತಿ ರಿಮೇಕ್, ಡಬ್ಬಿಂಗ್ ಪ್ರಶ್ನೆ ಬಂದಾಗಲೆಲ್ಲ ಕಿರುತೆರೆಯ ಸ್ಟಾರ್ ನಿರ್ದೇಶಕ ಬಿ. ಸುರೇಶ್ ಕೂಡಾ ಅವನ್ನು ವಿರೋಧಿಸಿ ಬೀದಿಗಿಳಿಯುತ್ತಿದ್ದರು. ಆಗ ಇವರೆಲ್ಲಾ ನಮ್ಮ ಸಂಸ್ಕೃತಿಯನ್ನು ಉಳಿಸಲು ಟೊಂಕ ಕಟ್ಟಿ ನಿಂತವರಂತೆ, ಸ್ವಾಭಿಮಾನಿ ಕನ್ನಡಿಗರ ಪ್ರತಿನಿಧಿಗಳಂತೆ ಕಾಣಿಸುತ್ತಿದ್ದರು.



ಆದರೆ ವಿಪರ್ಯಾಸವೆಂದರೆ ಈಗ ಅದೇ ಹಂಸಲೇಖಾ ಮತ್ತವರ ಶಿಷ್ಯ ಬಿ. ಸುರೇಶ್ ಜೊತೆಗೂಡಿ ಒಂದು ರಿಮೇಕ್ ಚಿತ್ರವನ್ನು ಮಾಡಲು ಸಜ್ಜಾಗಿ ನಿಂತಿದ್ದಾರೆ. ಅವರೊಂದಿಗೆ ಮತ್ತೋರ್ವ ಅಪ್ಪಟ ಕನ್ನಡಿಗ ಪ್ರಕಾಶ್ ರೈ ಕೈಜೋಡಿಸಿದ್ದಾರೆ. ಈ ತ್ರಿಮೂರ್ತಿಗಳು ಕನ್ನಡದ ರಂಗಭೂಮಿ ಹಿನ್ನೆಲೆಯಿಂದ ಬಂದ ಪ್ರತಿಭಾವಂತರು. ಸಮಯ ಸಿಕ್ಕಾಗಲೆಲ್ಲ ರಿಮೇಕ್ ಪಿಡುಗಿನ ಬಗ್ಗೆ ಕೆಂಡ ಕಾರಿದವರು. "ಕನ್ನಡದಲ್ಲಿ ಕಥೆ, ಕಾದಂಬರಿಗಳಿಲ್ಲವೇ? ಅದನ್ನೆಲ್ಲಾ ಚಿತ್ರಮಾಡಲು ಯಾಕೆ ಸಾಧ್ಯವಿಲ್ಲ...'' ಎಂಬಿತ್ಯಾದಿ ಹೇಳಿಕೆಗಳನ್ನು ನೀಡಿ ಕನ್ನಡ ಪ್ರೇಮ ಪ್ರದರ್ಶಿಸಿದವರು. ಆದರೆ ಇಂದು ಅದೇ ಜನ ಒಂದು ರಿಮೇಕ್ ಚಿತ್ರ ಮಾಡಲು ಒಬ್ಬರಿಗೊಬ್ಬರು ಹೆಗಲು ಕೊಟ್ಟು ನಿಂತಿರುವುದು ಸೋಜಿಗವಾಗಿದೆ.



ಪ್ರಕಾಶ್ ರೈ ನಿರ್ಮಿಸಿ-ನಟಿಸಿದ 'ಅಭಿಯುಂ ನಾನುಂ' ಎಂಬ ತಮಿಳು ಚಿತ್ರವನ್ನು ಈಗ ಇವರೆಲ್ಲಾ 'ನಾನು ನನ್ನ ಕನಸು' ಎಂದು ಕನ್ನಡೀಕರಿಸಲು ಹೊರಟಿದ್ದಾರೆ. ನಿಜ, 'ಅಭಿಯುಂ ನಾನುಂ' ತಮಿಳು ಮತ್ತು ತೆಲುಗಿನಲ್ಲಿ ಪ್ರೇಕ್ಷಕರು ಮತ್ತು ವಿಮರ್ಶಕರಿಂದ ಪ್ರಶಂಸೆ ಪಡೆದಿತ್ತು. ಮೊನ್ನೆ ಮೊನ್ನೆಯಷ್ಟೇ 'ಕಾಂಜೀವರಮ್' ಚಿತ್ರದ ಅಭಿನಯಕ್ಕಾಗಿ ರಾಷ್ಟ್ರ ಪ್ರಶಸ್ತಿ ಗಳಿಸಿದ ಪ್ರಕಾಶ್ ರೈ ಈ ಚಿತ್ರದಲ್ಲೂ ಮನೋಜ್ಞವಾಗಿ ನಟಿಸಿದ್ದರು.

ಆದರೆ "ಕನ್ನಡದಿಂದಲೇ ನನ್ನ ನಿರ್ದೇಶನದ ಪ್ರಯಾಣ ಆರಂಭವಾಗಲಿ'' ಎಂದಿರುವ ರೈ ಆ ಪ್ರಯಾಣಕ್ಕೊಂದು ರಿಮೇಕ್ ಚಿತ್ರವನ್ನು ಆಯ್ಕೆ ಮಾಡಿರುವುದು ಎಷ್ಟು ಸರಿ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಬಾಲಚಂದರ್, ಮಣಿರತ್ನಂ, ಪ್ರಿಯದರ್ಶನ್, ವಶಿ, ಗೌತಮನ್, ಶಂಕರ್, ಕೆ.ಎಸ್.ರವಿಕುಮಾರ್.... ಮೊದಲಾದ ಅತಿರಥ ಮಹಾರಥ ನಿರ್ದೇಶಕರೊಂದಿಗೆ ಕೆಲಸ ಮಾಡಿ, ಅವರಿಂದ ಭೇಷ್ ಎನಿಸಿಕೊಂಡ ರೈ ತನ್ನ ಚೊಚ್ಚಲ ನಿರ್ದೇಶನಕ್ಕೆ ಒಂದು ಹೊಸ ಕಥಾವಸ್ತುವನ್ನು ಕೈಗೆತ್ತಿಕೊಂಡಿದ್ದರೆ ಚೆನ್ನಾಗಿರುತ್ತಿರಲಿಲ್ಲವೇ?


"ಅಭಿಯುಂ ನಾನುಂ'' ಅಪ್ಪ-ಮಗಳ ನವಿರಾದ ಸಂಬಂಧವನ್ನು ಬಿಂಬಿಸುವ ಮನೋಜ್ಞ ಚಿತ್ರ. ಇಂತಹ ಕಥಾವಸ್ತು ಮತ್ತು ಉತ್ತಮ ಸಂದೇಶವಿರುವ ಚಿತ್ರವನ್ನು ಕನ್ನಡಿಗರಿಗೆ ಕನ್ನಡದಲ್ಲೇ ತೋರಿಸುವ ಉದ್ದೇಶದಿಂದ ಈ ಚಿತ್ರವನ್ನು ರಿಮೇಕ್ ಮಾಡುತ್ತಿದ್ದೇವೆಯೇ ವಿನಃ ಹಣ ಮಾಡುವ ಉದ್ದೇಶದಿಂದ ಅಲ್ಲ'' ಎಂದು ಈ ಚಿತ್ರದ ಪಾಲುದಾರರಾದ ಬಿ. ಸುರೇಶ್ ಸ್ಪಷ್ಟೀಕರಣ ನೀಡುತ್ತಾರೆ. ಸಂಗೀತ ನಿರ್ದೇಶಕ ಹಂಸಲೇಖಾ ಕೂಡ "ಪ್ರಕಾಶ್ ರೈ ದೈತ್ಯ ಪ್ರತಿಭೆ. ಆತ ಇಡೀ ಚಿತ್ರದ ಕಥೆ, ಸ್ವರೂಪ, ಟ್ರೀಟ್‌ಮೆಂಟ್ ಎಲ್ಲವನ್ನೂ ಬದಲಾಯಿಸಿದ್ದಾನೆ. 'ಅಭಿಯುಂ...' ಚಿತ್ರದಲ್ಲಿ ಮೂರು ಹಾಡುಗಳಿದ್ದರೆ, ಈ ಚಿತ್ರದಲ್ಲಿ ಎಷ್ಟು ಬೇಕಾದರೂ ಹಾಡುಗಳನ್ನು ಹಾಕಿ ಎಂದು ನನಗೆ ಫ್ರೀಡಂ ನೀಡಿದ್ದಾನೆ. ಅದರಂತೆ ನಾನು ಆರು ಹಾಡುಗಳಿಗೆ ಈಗಾಗಲೇ ರಾಗಸಂಯೋಜನೆ ಮಾಡಿದ್ದೇನೆ. ಮತ್ತೊಂದು ವಿಶೇಷವೆಂದರೆ, ಇಡೀ ಚಿತ್ರಕ್ಕೆ ಕೊಡವ ಸಂಸ್ಕೃತಿಯ ಲೇಪನ ಮಾಡಿ ಸಂಪೂರ್ಣವಾಗಿ ಇಲ್ಲಿನ ನೇಟಿವಿಟಿಗೆ ಬದಲಾಯಿಸಿದ್ದಾನೆ'' ಎಂದೆಲ್ಲ ರೈಯ ಗುಣಗಾನ ಮಾಡುತ್ತಾರೆ. ಇದೆಲ್ಲದರ ನಡುವೆಯೂ ಲಾಂಗು, ಮಚ್ಚುಗಳೊಂದಿಗೆ ರಕ್ತದೋಕುಳಿ ಹರಿಸುವ ಕಥಾವಸ್ತುವನ್ನು ಈ ತ್ರಿಮೂರ್ತಿಗಳು ಭಟ್ಟಿ ಇಳಿಸುತ್ತಿಲ್ಲ ಎಂದಷ್ಟೇ ಸಮಾಧಾನ ಪಡಬಹುದು.

ಈ ಚಿತ್ರಕ್ಕೆ ಏನು ಹೆಸರಿಡಬೇಕೆಂದು ರೈ ತುಂಬಾ ಯೋಚಿಸಿದರಂತೆ. "ಕರ್ನಾಟಕದಲ್ಲಿ ನನಗೆ ಯಾರ್‍ಯಾರು ಇಷ್ಟವೋ ಅವರ ಹೆಸರುಗಳನ್ನು ಬಳಸಬೇಕೆಂಬುದು ನನ್ನ ಇರಾದೆಯಾಗಿತ್ತು. ಅದರಂತೆ ನಾಯಕಿಯ ಪಾತ್ರಕ್ಕೆ ನಾಗತಿಹಳ್ಳಿಯ ಮಗಳ ಹೆಸರು 'ಕನಸು' ಎಂದಿಡಬೇಕೋ ಅಥವಾ ವಿನಯಾ ಪ್ರಸಾದ್ ಮಗಳ ಹೆಸರು 'ಪ್ರಥಮ' ಇಡಬೇಕೋ ಎಂದು ಬಹಳಷ್ಟು ತಲೆಕೆಡಿಸಿಕೊಂಡೆ. ಕೊನೆಗೆ 'ನಾನು ನನ್ನ ಕನಸು' ಎಂಬ ಹೆಸರನ್ನು ಆಯ್ಕೆ ಮಾಡಿದೆ'' ಎಂದರು ರೈ. ಹಾಗೆಯೇ ಅವರಿಗೆ ಕವಿ ಜಯಂತ್ ಕಾಯ್ಕಿಣಿ ತುಂಬಾ ಇಷ್ಟವಾದ್ದರಿಂದ ನಾಯಕನ ಪಾತ್ರಕ್ಕೆ ಜಯಂತ್ ಎಂದು ಹೆಸರಿಟ್ಟಿದ್ದಾರಂತೆ.... ಅಂದರೆ ಈ ಚಿತ್ರ ನೋಡಿದಾಗ ಕರ್ನಾಟಕದಲ್ಲಿ ರೈಗೆ ಯಾರ್‍ಯಾರು ಇಷ್ಟ ಎಂಬುದು ಗೊತ್ತಾಗಬಹುದಂತೆ.

"ನಾನು ಒಳ್ಳೆಯ ಚಿತ್ರ ಕೊಡುತ್ತೇನೆ. ನನ್ನನ್ನು ನಂಬಿ...'' ಎಂದು ರೈ ಹೇಳಿದರು. ಮಕ್ಕಿಕಾಮಕ್ಕಿ ಬಟ್ಟಿ ಇಳಿಸುವ ಕನ್ನಡದ ಧೀಮಂತ ರಿಮೇಕ್ ವೀರರಾದ ಸಾಯಿಪ್ರಕಾಶ್, ಎಂ.ಡಿ. ಶ್ರೀಧರ್, ಎಸ್. ನಾರಾಯಣ್, ಅನಂತ್‌ರಾಜ್, ಪಿ.ಎನ್. ಸತ್ಯಾ ಅಂತಹವರು ಕಾಸ್ಟ್ಯೂಮ್ಸ್, ಹೇರ್‌ಸ್ಟೈಲ್, ಜಾಹಿರಾತುಗಳು ಸೇರಿದಂತೆ ಎಲ್ಲವನ್ನೂ ಕಾಪಿ ಮಾಡುತ್ತಾರೆ. ಇವರೆಲ್ಲರಿಗಿಂತ ರೈ ರಿಮೇಕ್ ಆದರೂ ಅದನ್ನು ವಿಭಿನ್ನ ರೀತಿಯಲ್ಲಿ, ನಮ್ಮ ಮಣ್ಣಿನ ಸಂಸ್ಕೃತಿಗೆ ಸೂಕ್ತವಾಗಿ ರೂಪಾಂತರ ಮಾಡುವಲ್ಲಿ ಯಶಸ್ವಿಯಾಗಬಹುದು.

ಮೂವರು ಅಚ್ಚ ಕನ್ನಡದ ಪ್ರತಿಭಾವಂತರು ಒಂದು ರಿಮೇಕ್ ಚಿತ್ರವನ್ನು ಕೈಗೆತ್ತಿಕೊಂಡಿದ್ದರಿಂದ ಇಷ್ಟೆಲ್ಲಾ ಹೇಳಬೇಕಾಯಿತು...

● ಶೆಣೈ





...ರಮೇಶ್ವರ ...ಸಾದ!


ಈಗ ಗಾಂಧಿನಗರದವರ ಚಿತ್ತ ಮಾಜಿ ಮಂತ್ರಿ ಜಿ. ಪರಮೇಶ್ವರ್‌ರತ್ತ ಸರಿದಿದೆ.

ಯಾಕೆಂದರ ಅವರ ಸೋದರ ಸಂಬಂಧಿ ಸಿದ್ಧಾಂತ್ ಎಂಬಾತ ಈಗ 'ಎಕೆ 56' ಎಂಬ ಚಿತ್ರದಲ್ಲಿ ಹೀರೋ ಆಗಿದ್ದಾನೆ. ಶೀರ ಹಾಯಿಲಗೆ ಬದ್ದಾಗ ಟೈಗರ್ ಪ್ರಭಾಕರ್ ಹೇಗಿದ್ದರೋ ಹಾಗೇ ಕಾಣುವ ಸಿದ್ಧಾಂತ್ ಈ ಹಿಂದೆ 'ಮಿಂಚು' ಎಂಬ ಚಿತ್ರದಲ್ಲೂ ನಾಯಕನಾಗಿ ಕಾಣಿಸಿಕೊಂಡಿದ್ದ.

ಇದು ಓಂ ಪ್ರಕಾಶ್ ನಿರ್ದೇಶನದ ಇಪ್ಪತ್ತೈದನೇ ಚಿತ್ರವಂತೆ. ಈ ಚಿತ್ರದಲ್ಲಿ ಬರುವ ಒಂದೇ ಒಂದು ಫೈಟಿಂಗ್ ಸನ್ನಿವೇಶಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರಂತೆ. ನೂರಾರು ಸ್ಕಾರ್ಪಿಯೋ ಕಾರುಗಳನ್ನು ಬಳಸಿ ಹಾಲಿವುಡ್ ಮಾದರಿಯಲ್ಲಿ ಈ ಸಾಹಸ ಸನ್ನಿವೇಶವನ್ನು ಚಿತ್ರೀಕರಿಸುತ್ತಾರಂತೆ.

ಮೊದಲು ಈ ಚಿತ್ರದಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ನಟಿಸುವುದಾಗಿ ಬಹಳಷ್ಟು ಜಾಹಿರಾತುಗಳು ಪ್ರಕಟಗೊಂಡಿದ್ದವು. ಆದರೆ ಸಿದ್ಧಾಂತ್ ಕಡೆಯವರು ಚಿತ್ರಕ್ಕೆ ಮತ್ತು ನಿರ್ದೇಶನಕ್ಕೆ ಎಷ್ಟು ಖರ್ಚಾದರೂ ಸರಿ ಈ ಚಿತ್ರವನ್ನು ನಮಗೇ ಮಾಡಿಕೊಡಿ ಎಂದು ಓಂ ಪ್ರಕಾಶರ ಬೆನ್ನುಬಿದ್ದರಂತೆ.

ವೆಂಕಟೇಶ್ ಬಾಬು ಮತ್ತು ಗೋವಿಂದರಾಜು ಎಂಬ ಇಬ್ಬರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ ಎಂದು ಹೇಳಲಾಗುತ್ತಿದೆಯಾದರೂ ಚಿತ್ರಕ್ಕೆ ಹೂಡುತ್ತಿರುವ ಅಷ್ಟೂ ದುಡ್ಡು ಮಾಜಿ ಸಚಿವ ಪರಮೇಶ್ವರ್ ಅವರದ್ದೇ ಎನ್ನುವುದು ಗಾಂಧಿನಗರದವರ ವಾದ. ಈ ಹಿಂದೆ ಸಿದ್ಧಾಂತ್ ನಟಿಸಿದ್ದ 'ಮಿಂಚು' ಚಿತ್ರದ ಸಂದರ್ಭದಲ್ಲೂ ಇದೇ ರೀತಿಯ ಸುದ್ದಿ ಭುಗಿಲೆದ್ದಿದ್ದವು.



ಚಂದ್ರನ ಚೋಡ್ ಕಹಾನಿ!

ಈ ವರ್ಷದ ಅತ್ಯಂತ ನಿರೀಕ್ಷೆಯ ಚಿತ್ರ' ಎಂದು ಸ್ವತಃ ತಾನೇ ಜಾಹೀರಾತು ಹಾಕಿಸಿಕೊಂಡು ಪಬ್ಲಿಸಿಟಿ ಪಡೆದಿದ್ದ ಚಂದ್ರು ನಿರ್ದೇಶನದ 'ಪ್ರೇಮ್ ಕಹಾನಿ' ಕೂಡ ಮಕಾಡೆ ಮಲಗಿದೆ. ಕನ್ನಡ ಚಿತ್ರರಂಗದಲ್ಲಿ 'ಸೆಕೆಂಡ್ ಪ್ರೇಮ್' ಎಂದೇ ಕುಖ್ಯಾತಿ ಪಡೆದಿರುವ ಚಂದ್ರು 'ಪ್ರೇಮ್ ಕಹಾನಿ' ಬಿಡುಗಡೆಗೆ ಮುನ್ನವೇ 'ಇದು ಸಿಲ್ವರ್ ಜ್ಯೂಬಿಲಿ ಚಿತ್ರ' ಎಂದು ಬೀಗುತ್ತಿದ್ದ. ಈಗಿನ ಪರಿಸ್ಥಿತಿ ನೋಡಿದರೆ ಸಿನಿಮಾ ಇಪ್ಪತ್ತೈದು ದಿನ ಕೂಡ ಓಡುವ ಸೂಚನೆಗಳು ಕಾಣುತ್ತಿಲ್ಲ.

ಶ್ರೀಮಂತ ಹುಡುಗಿಯರು 'ನಂಬಿಕೆ'ಗೆ ಅರ್ಹರಲ್ಲ, ಬಡ ಹುಡುಗನನ್ನು ಮದುವೆಯಾಗುವ ಹೆಣ್ಣುಮಕ್ಕಳು ಆತ ಬದುಕಿರುವ ತನಕ ಸುಖವಾಗಿರಲು ಸಾಧ್ಯವಿಲ್ಲ, ಗಂಟು ಮೂಟೆ ಕಟ್ಟಿಕೊಂಡು ತವರಿಗೆ ಹೋಗುವುದೊಂದೇ ಆಕೆಗೆ ಉಳಿದಿರುವ ದಾರಿ - ಹೀಗೆ ಮನುಷ್ಯ ಸಂಬಂಧಗಳ ಬಗ್ಗೆ ಬಹಳಷ್ಟು ರೀತಿಯ ತಪ್ಪು ಸಂದೇಶಗಳನ್ನೇ ತನ್ನ ಚಿತ್ರದ ಜೀವಾಳವಾಗಿಸಿ, ಚಿತ್ರುದ್ದಕ್ಕೂ ಅದನ್ನು ಸಮರ್ಥಿಸಿರುವ ಚಂದ್ರುಗೆ ತಲೆ ಸರಿಯಿದ್ದಂತೆ ಕಾಣುತ್ತಿಲ್ಲ.

ಅಸಲಿಗೆ 'ಪ್ರೇಮ್ ಕಹಾನಿ' ಒಂದು ಸ್ಲಂ ಮತ್ತು ಒಂದು ಸಣ್ಣ ಮನೆಯೊಂದರಲ್ಲೇ ಚಿತ್ರೀಕರಣಗೊಂಡಿದೆ. ಇಳಯರಾಜಾ ಸಂಗೀತ ನಿರ್ದೇಶನದಲ್ಲಿ ಹತ್ತು ಹಾಡುಗಳಿದ್ದರೂ ಬಹುತೇಕ ಎಲ್ಲ ಟ್ಯೂನ್‌ಗಳೂ ತಮಿಳು ಚಿತ್ರಗಳಿಂದಲೇ ಎತ್ತುವಳಿ ಮಾಡಿದಂತಿವೆ. ಒಂದು ಹಾಡಿಗೆ ಮಾತ್ರ 14 ಲಕ್ಷ ರೂಪಾಯಿ ಖರ್ಚಿನಲ್ಲಿ ಅದ್ದೂರಿ ಸೆಟ್ ನಿರ್ಮಿಸಲಾಗಿದೆ. ಕ್ರಿಯಾಶೀಲ ಛಾಯಾಗ್ರಾಹಕ ಚಂದ್ರಶೇಖರ್‌ರ ಕ್ಯಾಮೆರಾ ಕೈಚಳಕ ಮತ್ತು ಲೈಟಿಂಗ್‌ಗಳು ಕೊಳಗೇರಿಯನ್ನೂ ಅಂದವಾಗಿ ಕಾಣಿಸಿದೆ. ಇಷ್ಟು ಬಿಟ್ಟರೆ ಚಿತ್ರದ ಕಥೆಯಲ್ಲಾಗಲಿ, ನಿರ್ದೇಶಕನ ಕ್ರಿಯೇಟಿವಿಟಿಯಾಗಲಿ ಚಿತ್ರುದ್ದಕ್ಕೂ ಕಾಣಸಿಗುವುದಿಲ್ಲ, ಇಂಥ ಚಿತ್ರವನ್ನು ನಿರ್ದೇಶಿಸಲು ಚಂದ್ರು ಪಡೆದಿರುವ ಸಂಭಾವನೆ ಕೇವಲ ಎಂಭತ್ತೈದು ಲಕ್ಷ ರೂಪಾಯಿಗಳು ಮಾತ್ರ!

ಬಳ್ಳಾರಿಯ ಗಣಿ ಮಾಲೀಕರಾದ ರವಿಕುಮಾರ್ ಮತ್ತು ವಿಶ್ವನಾಥ್ ಎಂಬ ಇಬ್ಬರು ಶ್ರೀಮಂತ ಕುಳಗಳು ಸಿಕ್ಕೇಟಿಗೇ ನಿರ್ದೇಶಕ ಚಂದ್ರು ಅವರನ್ನು ಚೆನ್ನಾಗಿಯೇ ಬೋಳಿಸಿದ್ದಾನೆ. ಸಿನಿಮಾ ನಿರ್ಮಾಣದ ಎಬಿಸಿಡಿ ಗೊತ್ತಿಲ್ಲದ ಇವರಿಂದ ಮನಸೋ ಇಚ್ಛೆ ಸುಲಿದಿರುವ ಚಂದ್ರು ಚಿತ್ರಕ್ಕೆ ಒಟ್ಟು ಐದು ಕೋಟಿ ರೂಪಾಯಿ ಖರ್ಚಾಗಿದೆ ಎಂದು ಲೆಕ್ಕ ಕೊಟ್ಟಿದ್ದಾನಂತೆ.

ಚಿನ್ನದ ಮೊಟ್ಟೆ ಇಡುವ ಕೋಳಿಯನ್ನೇ ಕುಯ್ದ ಕಥೆಯ ಹಾಗೆ ಸಿನಿಮಾ ನಿರ್ಮಿಸಲು ಬರುವ ವಿಶ್ವನಾಥ್‌ರಂಥ ಹಣವಂತರನ್ನು ಚಂದ್ರುನಂಥ ನಿರ್ದೇಶಕರು ಮತ್ತೊಮ್ಮೆ ಚಿತ್ರರಂಗದತ್ತ ಸುಳಿಯದಂತೆ ಮಾಡುತ್ತಿದ್ದಾರೆ.



ಅಂಬಾಸಡರ್‌ಗಳ

ಕರ್ನಾಟಕ ರಾಜ್ಯ ಕ್ರಿಕೆಟ್ ಮಂಡಳಿ ಏರ್ಪಡಿಸಿದ್ದ ಕೆಪಿಎಲ್ ಟೂರ್ನಮೆಂಟ್ ಮುಕ್ತಾಯ ಹಂತಕ್ಕೆ ತಲುಪಿದೆ. ಆರಂಭದಲ್ಲಿ ಹಿಂದಿಯ ಶಾರೂಕ್ ಖಾನ್ ಮತ್ತು ಪ್ರೀತಿ ಜಿಂಟಾ ತರಹ ಕನ್ನಡದ ಸುದೀಪ್ ಮತ್ತು ರಮ್ಯಾ ತಂಡವನ್ನು ಖರೀದಿಸುತ್ತಾರೆ ಎಂದು ಭಾರೀ ಭಾರೀ ಸುದ್ದಿಯಾಗಿತ್ತು; ಆದರೆ ಆನಂತರ ಅದು ಟುಸ್ಸಾಗಿತ್ತು ಎಂಬುದು ಬೇರೆ ವಿಷಯ.

ಐಪಿಎಲ್‌ನ ರಿಮೇಕ್ ಆವೃತ್ತಿಯಾದ ಕೆಪಿಎಲ್‌ನಲ್ಲಿ ನಮ್ಮ ತಾರೆಯರನ್ನು ಬೇರೆ ಬೇರೆ ತಂಡಗಳ ಬ್ರಾಂಡ್ ಅಂಬಾಸಡರ್‌ಗಳಾಗಿ ಬಳಸಿದ್ದು ಹಾಸ್ಯಾಸ್ಪದವಾಗಿ ಕಾಣಿಸುತ್ತಿತ್ತು; ಕ್ರಿಕೆಟ್‌ನ ಗಂಧಗಾಳಿ ಗೊತ್ತಿಲ್ಲದ ತಾರೆಯರು ಸ್ಟೇಡಿಯಂಗೆ ಬಂದು ಕೈಕಟ್ಟಿ ಕುಳಿತು ಕೊಳ್ಳುತ್ತಿದ್ದರು. ಅವರು ತಂಡಕ್ಕೆ ಸ್ಫೂರ್ತಿ ನೀಡುವ ಬದಲು ತಮ್ಮ ತಲೆಮೇಲೆ ಆಕಾಶ ಬಿದ್ದಂತೆ ಚಿಂತಾಕ್ರಾಂತರಾಗಿ ಕಾಣಿಸುತ್ತಿದ್ದರು. ಇದ್ದುದರಲ್ಲಿ ಮೈಸೂರು ತಂಡದ ಬ್ರಾಂಡ್ ಅಂಬಾಸಡರ್ ಆದ ಸುದೀಪ್ ಪರವಾಗಿರಲಿಲ್ಲ, ಏಕೆಂದರೆ ಸುದೀಪ್ ಸ್ವತಃ ಕ್ರಿಕೆಟ್ ಆಟಗಾರ.

ಒಂದೆರಡು ಚಿತ್ರಗಳಲ್ಲಿ ಮುಖ ತೋರಿಸಿರುವ ತೇಜಸ್ವಿನಿ, ಸಿಂಧು ತರಹದ ನಟಿಯರ ಅವಸ್ಥೆ ನಗುತರಿಸುವಂತಿತ್ತು; ಹಾಗೆಯೇ ಭಾವನಾ, ಪೂಜಾ ಗಾಂಧಿ ಮೊದಲಾದವರು ಸ್ಟೇಡಿಯಂಗೆ ವಾಡಿಕೆಯಂತೆ ಬಂದುಹೋಗುತ್ತಿದ್ದರೆ ವಿನಃ ಸ್ವತಃ ಅವರಲ್ಲಿ ಕ್ರಿಕೆಟ್ ಬಗ್ಗೆ ಅಂತಹ ಆಸಕ್ತಿ ಉತ್ಸಾಹಗಳೇನೂ ಎದ್ದು ಕಾಣುತ್ತಿರಲಿಲ್ಲ; ಕ್ರಿಕೆಟ್ ಎಂದರೆ ವಿಷ್ಣು ಅಂಬರೀಷ್, ಪುನೀತ್, ದರ್ಶನ್, ಶಿವರಾಜ್ ಮೊದಲಾದವರಿಗೆಲ್ಲ ಪಂಚಪ್ರಾಣ. ಆದರೆ ಅಂತಹ ಯಾವುದೇ ನಟರನ್ನು ಖರೀದಿಸಲು ಕೆಪಿಎಲ್ ತಂಡಗಳ ಮಾಲೀಕರಿಂದ ಸಾಧ್ಯವಾಗಿಲ್ಲವೆಂಬುದೇ ಆಶ್ಚರ್ಯ.



ಜೈಲಲ್ಲೂ ಜಾಗ ಇಲ್ಲ!

'ಇನ್ನು ಮುಂದೆ ರಾಜ್ಯದ ಯಾವ ಬಂದೀಖಾನೆಯಲ್ಲೂ ಸಿನಿಮಾ ಚಿತ್ರೀಕರಣಕ್ಕೆ ಅವಕಾಶವಿಲ್ಲ!'

ಕಳೆದ ವಾರ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಸುರೇಶ್ ಅರಸ್ ನಿರ್ಮಾಣದ 'ಪೆರೋಲ್' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಕೈದಿಯೊಬ್ಬ ಪರಾರಿಯಾಗಿದ್ದರಿಂದ ಸರ್ಕಾರ ಈ ಮೇಲಿನ ಆಜ್ಞೆಯನ್ನು ಹೊರಡಿಸಿದೆ.

ಓಂ ಪ್ರಕಾಶ್ ರಾವ್ ನಿರ್ದೇಶನದ 'ಎಕೆ 56' ಚಿತ್ರತಂಡದವರು ಈ ಮೊದಲೇ ಜೈಲಿನಲ್ಲಿ ಚಿತ್ರೀಕರಣ ಮಾಡಲು ಅನುಮತಿ ಪಡೆದಿದ್ದರಿಂದ ಅವರಿಗೆ ಬೆಳಗಾವಿ ಕಾರಾಗೃಹದಲ್ಲಿ ಶೂಟಿಂಗ್ ಮಾಡಲು ಅನುವು ಮಾಡಿಕೊಟ್ಟಿದ್ದಾರೆ.

ಬೆಂಗಳೂರಿನ ಬಿನ್ನಿಮಿಲ್‌ನ ಹಳೆಯ ಕಟ್ಟಡವನ್ನೂ ಕೆಡವುತ್ತಿರುವುದರಿಂದ ಚಿತ್ರೀಕರಣ ತಾಣವಿಲ್ಲದೇ ಕಂಗಾಲಾಗಿರುವ ಸಿನಿಮಾ ಮಂದಿ ಈಗ ಸೆಂಟ್ರಲ್ ಜೈಲಿನಲ್ಲೂ ಪ್ರವೇಶವಂಚಿತರಾಗಿದ್ದಾರೆ!



'ನೆನೆಯುವೆ ನಿನ್ನ' ರಂಜಿತಾ



ಹೆಡ್‌ಆಫೀಸಿನ ನಾಡೋಡಿಗಳ್

ಪವರ್‌ಸ್ಟಾರ್ ಪುನೀ
ಮತ್ತು ಲೂಸ್ ಮಾದ ಖ್ಯಾತಿ
ಯೋಗೇಶ್ ಪ್ರಥಮ ಬಾ
ಜೊತೆಯಾಗಿ ನಟಿಸಲಿದ್
'ನಾಡೋದಿಗಳ್' ಎಂಬ ಯ
ತಮಿಳು ಚಿತ್ರವ
ಹೆಡ್‌ಆಫೀಸಿನವರು ಖರೀದಿ
ಅದನ್ನು ಕನ್ನಡಕ್ಕೆ ಭ
ಇಳಿಸಲಿರುವುದು ಎಲ್ಲರಿಗ
ಗೊತ್ತಿದೆ. ಈ ಚಿತ್ರದಲ್ಲಿ ಒ
ನಾಲ್ವರು ನಾಯಕರಿದ್ದರೂ ಇ
ಪಾತ್ರಗಳು ತುಂಬಾ ಮುಖ್ಯ
ಎರಡು ಪಾತ್ರಗಳನ್ನೇ ಪುನೀ
ಮತ್ತು ಯೋಗೇ
ನಿರ್ವಹಿಸುವು
ಗ್ಯಾರಂಟಿಯಾಗಿ

ಅಂದಹಾಗೆ ಈ ಚಿತ್
ರಿಮೇಕ್ ಹಕ್ಕಿನ ಜೊತೆಗೆ ಅ
ನಿರ್ದೇಶಕ ಸಮುದ್ರಖನಿಯನ
ಹೆಡ್‌ಆಫೀಸಿನವರು ಆಮ
ಮಾಡಿಕೊಂಡಿದ್ದಾರೆ. ಹಾಗ
'ನಾಡೋದಿಗಳ
ಚಿತ್ರವ
ಕನ್ನಡೀಕರಿಸ
ಕನಸು ಕಂಡ
ನಿರ್ದೇಶಕರಾ
ಓಂಪ್ರಕಾ
ಎಂ.
ಶ್ರೀಧ
ಮೊದಲಾದವರ
ಆಘಾತವಾಗಿದೆಯಂ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...